

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 6 ಬುಧವಾರ 2022

ಸಂಪುಟ: 43 | ಸಂಚಿಕೆ: 81 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





‘ಸರಳ ವಾಸ್ತು’ ಖ್ಯಾತಿಯ

ಚಂದ್ರಶೇಖರ ಗುರೂಜಿ ಹತ್ಯೆ



ಸಿಸಿ ಕ್ಯಾಮರಾದಲ್ಲಿ ಘಟನೆ ದೃಶ್ಯಾವಳಿ



ರಾಮದುರ್ಗ ಬಳಿ ಆರೋಪಿಗಳ ಬಂಧನ

ಹುಬ್ಬಳ್ಳಿ, ಜು.5–ದೇಶ–ವಿದೇಶದಲ್ಲಿ ‘ಸರಳ ವಾಸ್ತು’ ಮೂಲಕ ಪ್ರಖ್ಯಾತಿ ಗಳಿಸಿದ್ದ ಬಾಗಲಕೋಟೆಯ ಚಂದ್ರಶೇಖರ ಗುರೂಜಿಯ ವರನ್ನು (60) ಇಂದು ಮಧ್ಯಾಹ್ನ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಹುಬ್ಬಳ್ಳಿಯ ಉಣಕಲ್ ಕೆರೆ ಬಳಿಯ ಐಷಾರಾಮಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ. ಈ ಭಯಾನಕ ದೃಶ್ಯ ಹೊಟೇಲ್‌ನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಗುರೂಜಿ ಅವರ ‘ಸರಳ ವಾಸ್ತು’ ಕಚೇರಿಯಲ್ಲಿ ಈ ಹಿಂದೆ ಉದ್ಯೋಗಿಗಳಾಗಿದ್ದು, ಗುರೂಜಿ ಅವರ ಮಾಜಿ ಆಪ್ತ ಸಹಾಯಕರೂ ಆಗಿದ್ದ ಧಾರವಾಡದ ಮಹಾಂತೇಶ್ ಶಿರೂರ್ ಹಾಗೂ ಕಲಘಟಗಿಯ ಮಂಜುನಾಥ್ ದುಮ್ಮವಾಡ ಹತ್ಯೆಯ ಆರೋಪಿಗಳಾಗಿದ್ದು, ಇವರನ್ನು ಘಟನೆ ನಡೆದ ನಾಲ್ಕು ಗಂಟೆ ಒಳಗೆ ರಾಮದುರ್ಗದ ಬಳಿ ಬಂಧಿಸಲಾಗಿದೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ಚಂದ್ರಶೇಖರ ಗುರೂಜಿ ಅವರನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ಸಾಗಿಸಲಾಯಿತಾದರೂ, ಆಸ್ಪತ್ರೆ ತಲುಪುವ ಮುನ್ನವೇ ಮಾರ್ಗ ಮಧ್ಯೆ ಅಸುನೀಗಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ. ಅವರ ದೇಹವನ್ನು ಕಿಮ್ಸ್ ಶವಾಗಾರದಲ್ಲಿ ಇರಿಸಲಾಗಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಂತರ ಅವರ ಸಂಬಂಧಿಕರಿಗೆ ದೇಹವನ್ನು ಒಪ್ಪಿಸಲಾಗುತ್ತಿದೆ. ನಂತರ ಹುಬ್ಬಳ್ಳಿಯ ಸುಳ್ಳ ರಸ್ತೆಯಲ್ಲಿನ ಅವರ ಜಮೀನಿನಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲು ನಿರ್ಧರಿಸಲಾಗಿದೆ.

ಘಟನೆ ವಿವರ: ಜುಲೈ 2 ರಿಂದ ಚಂದ್ರಶೇಖರ ಗುರೂಜಿ ಈ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಮಧ್ಯಾಹ್ನ 12 ಗಂಟೆ ವೇಳೆಗೆ ಈ ಹೋಟೆಲ್‌ಗೆ ಬಂದ ಮಹಾಂತೇಶ್ ಶಿರೂರ್ ಮತ್ತು ಮಂಜುನಾಥ್ ದುಮ್ಮವಾಡ, ಹೋಟೆಲ್ ಸಿಬ್ಬಂದಿಗೆ ತಾವು ಚಂದ್ರಶೇಖರ್ ಗುರೂಜಿ ಅವರನ್ನು ಭೇಟಿಯಾಗಲು ಬಂದಿರುವುದಾಗಿ ತಿಳಿಸಿದ್ದಾರೆ. ▶ 8ನೇ ಪುಟಕ್ಕೆ

- ಹುಬ್ಬಳ್ಳಿಯ ಐಷಾರಾಮಿ ಹೋಟೆಲ್‌ನಲ್ಲಿ ಮಾಜಿ ಆಪ್ತ ಸಹಾಯಕರಿಂದಲೇ ಕಗ್ಗೊಲೆ
- ಗುರೂಜಿ ಆಶೀರ್ವಾದ ಪಡೆಯುವ ನೆಪದಲ್ಲಿ ಬಂದು ಕೃತ್ಯವೆಸಗಿ ಪರಾರಿ
- ಭಯಭೀತರಾಗಿ ದಿಕ್ಕಾಪಾಲಾಗಿ ಓಡಿದ ಹೋಟೆಲ್ ಸಿಬ್ಬಂದಿ; ನೆರವಿಗೆ ಮುಂದಾದವರಿಗೆ ಚಾಕು ತೋರಿಸಿ ಬೆದರಿಕೆ
- ರಕ್ತದ ಮಡುವಿನಲ್ಲಿ ಬಿದ್ದಿದ್ದ ಗುರೂಜಿ ಕಿಮ್ಸ್‌ಗೆ ಸಾಗಿಸಿದರೂ ಮಾರ್ಗ ಮಧ್ಯೆ ಸಾವು

40 ಸೆಕೆಂಡ್‌ನಲ್ಲಿ ಹತ್ಯೆ: 4 ಗಂಟೆಯಲ್ಲಿ ಅಂದರ್!



ಮಹಾಂತೇಶ್ ಮಂಜುನಾಥ್

ಹುಬ್ಬಳ್ಳಿ, ಜು.5–ಹುಬ್ಬಳ್ಳಿಯ ಐಷಾರಾಮಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಚಂದ್ರಶೇಖರ್ ಗುರೂಜಿ ಅವರನ್ನು ಕೇವಲ 40 ಸೆಕೆಂಡ್‌ಗಳಲ್ಲಿ ಕಗ್ಗೊಲೆಗೈದು ಪರಾರಿಯಾಗಿದ್ದ ಆರೋಪಿಗಳನ್ನು 4 ಗಂಟೆಯಲ್ಲಿ ಹೆಡೆಮುರಿ ಕಟ್ಟುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಘಟನೆ ವಿಷಯ ತಿಳಿದು ಕೆಲವೇ ಕ್ಷಣಗಳಲ್ಲಿ ಸ್ಥಳಕ್ಕೆ ▶ 8ನೇ ಪುಟಕ್ಕೆ

ಒಬ್ಬ 31, ಮತ್ತೊಬ್ಬ 29 ಬಾರಿ ಇರಿದ!

ಹುಬ್ಬಳ್ಳಿ, ಜು.5–ಚಂದ್ರಶೇಖರ ಗುರೂಜಿ ಅವರ ಮೇಲೆ ಏಕಾಏಕಿ ದಾಳಿ ನಡೆಸಿದ ಹಂತಕರು, ಸುಮಾರು 60 ಬಾರಿ ಇರಿದಿದ್ದಾರೆ. ಓರ್ವ ಆರೋಪಿ ಗುರೂಜಿ ಆಶೀರ್ವಾದ ಪಡೆಯುವವನಂತೆ ಕಾಲಿಗೆ ಬಿದ್ದರೆ, ಮತ್ತೋರ್ವ ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ಚಾಕುವಿನಿಂದ ಏಕಾಏಕಿ ಗುರೂಜಿಗಳ ಎದೆಗೆ ಚುಚ್ಚಿದ್ದಾನೆ. ಏನಾಗುತ್ತಿದೆ ಎಂದು ತಿಳಿಯುವುದರೊಳಗೆ ಆತ 31 ಬಾರಿ ಗುರೂಜಿಯ ದೇಹದ ನಾನಾ ಕಡೆ ಇರಿದಿದ್ದಾನೆ. ಮತ್ತೋರ್ವ ಆರೋಪಿ ಅವನಿಗೆ ಸಾಥ್ ನೀಡಿ, ಅವನೂ 29 ಬಾರಿ ಭೀಕರವಾಗಿ ಚುಚ್ಚಿದ್ದಾನೆ. ಈ ವೇಳೆ ಯಾರೊಬ್ಬರೂ ಗುರೂಜಿಯ ಸಹಾಯಕ್ಕೆ ಬಾರದೇ ಇರುವ ಭಯಭೀತಿ ಸನ್ನಿವೇಶ ಸೃಷ್ಟಿಯಾಗಿದೆ. ಹೋಟೆಲ್ ಸಿಬ್ಬಂದಿ ಸಹ ಭಯದಿಂದ ಕೆಲವರು ದಿಕ್ಕಾಪಾಲಾಗಿ ಓಡಿದರೆ, ಮತ್ತೆ ಕೆಲವರು ಗುರೂಜಿ ರಕ್ಷಣೆಗೆ ಮುಂದಾದರೂ, ಅದಕ್ಕೆ ಹಂತಕರು ಆಸ್ಪದ ನೀಡಿಲ್ಲ.

ಇಂದು ಹುಬ್ಬಳ್ಳಿಯಲ್ಲಿ ಗುರೂಜಿ ಅಂತ್ಯಕ್ರಿಯೆ

ಹುಬ್ಬಳ್ಳಿ: ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1:00ಗಂಟೆಗೆ ಇಲ್ಲಿನ ಸುಳ್ಳ ರಸ್ತೆಯಲ್ಲಿ ಇರುವ ಜಮೀನಿನಲ್ಲಿ ನಡೆಸಲು ನಿರ್ಧರಿಸಲಾಗಿದೆ. ಗುರೂಜಿ ಪಾರ್ಥಿವ ಶರೀರವನ್ನು ಬುಧವಾರ ಬೆಳಗ್ಗೆ 10 ಗಂಟೆಗೆ ಅಂತಿಮ ದರ್ಶನಕ್ಕೆ ಇರಿಸಲಾಗುತ್ತದೆ ಎಂದು ಗುರೂಜಿ ಆಪ್ತರೂ ಆಗಿರುವ ವಿಧಾನಪರಿಷತ್ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ ತಿಳಿಸಿದರು.


ಅಣ್ಣನ ಮಗ ಮುಂಬಯಿನಲ್ಲಿ ಗುರೂಜಿ ಕಚೇರಿಯಲ್ಲೇ ನೌಕರಿಯಲ್ಲಿದ್ದು, ಆತ ಮೃತಪಟ್ಟಿದ್ದರಿಂದ ಪಾರ್ಥಿವ ಶರೀರದೊಂದಿಗೆ ಗುರೂಜಿ ಹುಬ್ಬಳ್ಳಿಗೆ ಬಂದಿದ್ದರು. ಒಂದು ತಿಂಗಳ ಹಿಂದೆಯಷ್ಟೆ ಮನೆಗೆ ಆಗಮಿಸಿ ಉಪಾಹಾರ ಸೇವಿಸಿ ಹೋಗಿದ್ದರು. ಸೋಮವಾರ ಸಂಜೆಯಷ್ಟೇ ಮೊಬೈಲ್‌ನಲ್ಲಿ ನನ್ನೊಂದಿಗೆ ಮಾತನಾಡಿದ್ದರು. ಮಂಗಳವಾರ ಭೇಟಿಯಾಗೋಣ ಎಂದಿದ್ದರು ಎಂದು ತಿಳಿಸಿದರು.

ಅಪಾರ ಆಸ್ತಿಯೇ ಆಪತ್ತಾಯ್ತಾ...

ಹುಬ್ಬಳ್ಳಿ, ಜು.5–ಚಂದ್ರಶೇಖರ್ ಗುರೂಜಿಯವರ ಹತ್ಯೆಗೆ ಹಣ, ಆಸ್ತಿಯೇ ಕಾರಣವೆಂದು ಹೇಳಲಾಗುತ್ತಿದೆ. ಗುರೂಜಿಯವರು ಸಾಕಷ್ಟು ಆಸ್ತಿ ಮಾಡಿದ್ದರು ಎಂದು ಸುದ್ದಿವಾಹಿನಿಗಳಲ್ಲಿ ವರದಿ ಆಗಿದೆ. ನಾನಾ ಕಾರಣಕ್ಕೆ ಅವರು ಇತರರ ಹೆಸರಲ್ಲಿ ಭಾರೀ ಪ್ರಮಾಣದಲ್ಲಿ ಆಸ್ತಿ ಮಾಡಿದ್ದರು ಎಂದು ಹೇಳಲಾಗಿದೆ. ಹಂತಕರಲ್ಲಿ ಒಬ್ಬನಾದ ಮಹಾಂತೇಶ್ ಶಿರೂರ್ ▶ 8ನೇ ಪುಟಕ್ಕೆ

ಜು.10ರ ನಂತರ ದಸರಾ ಉನ್ನತ ಸಮಿತಿ ಸಭೆ





ಮೈಸೂರು, ಜು. 5(ಆರ್‌ಕೆ)–ಜುಲೈ 10ರ ನಂತರ ದಸರಾ ಉನ್ನತ ಮಟ್ಟದ ಸಮಿತಿ ಸಭೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ. ಮೈಸೂರಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಜುಲೈ 10ರ ನಂತರ ಬೆಂಗಳೂರಲ್ಲಿ ದಸರಾ ಉನ್ನತ ಸಮಿತಿ (ಹೈಪವರ್ ಕಮಿಟಿ) ಸಭೆ ನಡೆಸಿ, ರೂಪು–ರೇಷೆಗಳ ಬಗ್ಗೆ ಚರ್ಚಿಸಿದ ನಂತರ ಮೈಸೂರಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಾಗುವುದು ಎಂದರು. ಮಳೆ ನಿರಂತರವಾಗಿ ಸುರಿಯುತ್ತಿರುವುದರಿಂದ ಅಗತ್ಯ ಎಚ್ಚರಿಕಾ ಕ್ರಮಗಳನ್ನು ಕೈಗೊಂಡು, ಯಾವುದೇ ಮಳೆ ಹಾನಿಯಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಡಳಿತ, ಪಾಲಿಕೆ, ಮುಡಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈಗಾಗಲೇ ಸುರಕ್ಷತಾ ಕೆಲಸಗಳು ನಡೆಯುತ್ತಿವೆ ಎಂದು ಅವರು ನುಡಿದರು. ಶಾಸಕ ಜಮೀರ್ ಅಹಮದ್ ಮನೆ ಮೇಲೆ ಎಸಿಬಿ ದಾಳಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ಅದಕ್ಕೆ ಕಾಂಗ್ರೆಸ್‌ನವರು ಏಕೆ ಪ್ರತಿಭಟಿಸಬೇಕು? ಜಮೀರ್ ಮನೆ ಮೇಲೆ ಎಸಿಬಿ ದಾಳಿ ಮಾಡಿರುವುದರಿಂದ ಮೊದಲು ಖುಷಿ ಪಡೋರು ಕಾಂಗ್ರೆಸ್‌ನವರೇ, ಏಕೆಂದರೆ ಅವರು ಸಿಎಂ ಆಗಲಿ, ಇವ್ರು ಸಿಎಂ ಆಗಲಿ ಎಂದು ಹೇಳುತ್ತಿರುವುದರಿಂದ ಅದಕ್ಕೆ ಒಳಗೊಳಗೇ ಖುಷಿ ಪಟ್ಕೊಂಡು ಹೊರಗಡೆ ಮಾತ್ರ ಕಾಂಗ್ರೆಸ್‌ನವರು ಪ್ರತಿಭಟನೆ ಮಾಡುತ್ತಿದ್ದಾರಷ್ಟೆ ಎಂದು ಸೋಮಶೇಖರ್ ವ್ಯಂಗ್ಯ ಮಾಡಿದರು. ಜಮೀರ್ ಪ್ರಾಮಾಣಿಕರಾಗಿದ್ದರೆ ಏಕೆ ದಾಳಿಯಾಗುತ್ತಿತ್ತು? ಕಾಂಗ್ರೆಸ್‌ನವರು ಅವರಿಗೆ ▶ 8ನೇ ಪುಟಕ್ಕೆ

ಇಂದು ಮೈಸೂರಿಗೆ ಮುಖ್ಯಮಂತ್ರಿ



ಮೈಸೂರು, ಜು. 5(ಆರ್‌ಕೆ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ (ಜು.6) ಮೈಸೂರಿಗೆ ಆಗಮಿಸುವರು.

ಬುಧವಾರ ಮಧ್ಯಾಹ್ನ 3.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ಏರ್‌ಪೋರ್ಟ್‌ನಿಂದ ವಿಶೇಷ ವಿಮಾನದಲ್ಲಿ ಪ್ರಯಾಣ ಬೆಳೆಸುವ ಮುಖ್ಯಮಂತ್ರಿಗಳು, ಸಂಜೆ 4.05 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಕಾರಿನಲ್ಲಿ ಮಾನಸ ಗಂಗೋತ್ರಿ ಆವರಣದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನಕ್ಕೆ ಆಗಮಿಸಲಿರುವ ಬಸವರಾಜ ಬೊಮ್ಮಾಯಿ ಅವರು, ‘ಆಂದೋಲನ’ ದಿನಪತ್ರಿಕೆಯ 50ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸುವರು. ನಂತರ ರಾತ್ರಿ 7 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರಿಂದ ತುಮಕೂರಿಗೆ ಕಾರು ಬಾಡಿಗೆಗೆ ಕರೆದೊಯ್ದು ಕೆಸ್ತೂರು ಬಳಿ

ಚಾಲಕನಿಗೆ ಇರಿದು ಕಾರಿನೊಂದಿಗೆ ಪರಾರಿ

ಮೈಸೂರು, ಜು.5(ಆರ್‌ಕೆ)– ತುರ್ತು ಕಾರಣ ಹೇಳಿ ಮಧ್ಯರಾತ್ರಿ ಮೈಸೂರಿನಿಂದ ತುಮಕೂರಿಗೆ ಬಾಡಿಗೆ ಕಾರಿನಲ್ಲಿ ತೆರಳುತ್ತಿದ್ದ ಇಬ್ಬರು ದುಷ್ಕರ್ಮಿಗಳು, ಮಾರ್ಗ ಮಧ್ಯೆ ಚಾಲಕನಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿ, ಕೊನೆಗೆ ಕಾರಿನೊಂದಿಗೆ ಪರಾರಿಯಾಗಿರುವ ಘಟನೆ ಬೆಳಕಿಗೆ ಬಂದಿದೆ.



ರುದ್ರಸ್ವಾಮಿ

ಮೈಸೂರಿನ ಗಾಂಧಿನಗರ 5ನೇ ಕ್ರಾಸ್ ನಿವಾಸಿ ರುದ್ರಸ್ವಾಮಿ(46), ದುಷ್ಕರ್ಮಿಗಳಿಂದ ಇರಿತಕ್ಕೊಳಗಾಗಿದ್ದು, ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇವರ ಟೊಯೊಟಾ ಇಟಿಯಾಸ್ (ಕೆಎ–09, ಸಿ–2358) ಕಾರಿನೊಂದಿಗೆ ಆರೋಪಿಗಳು ಪರಾರಿಯಾಗಿದ್ದಾರೆ. ಸೋಮವಾರ ಸರಿರಾತ್ರಿ 1.30ರ ವೇಳೆಯಲ್ಲಿ ಮೈಸೂರಿನ ಎಫ್‌ಟಿಎಸ್ ಸರ್ಕಲ್ ಬಳಿ ರುದ್ರಸ್ವಾಮಿ ತನ್ನ ಸ್ನೇಹಿತರೊಂದಿಗೆ



ಅಪಹರಣವಾದ ಕಾರು

ಮಾತನಾಡುತ್ತಾ ನಿಂತಿದ್ದರು. ಆಗ ಅಲ್ಲಿಗೆ ಬಂದ ಇಬ್ಬರು ವ್ಯಕ್ತಿಗಳು, ನಾವು ತುಮಕೂರಿಗೆ ತುರ್ತಾಗಿ ಹೋಗಬೇಕಿದ್ದು, ಕಾರು ಬಾಡಿಗೆ ನೀಡುತ್ತೇವೆ, ತಮ್ಮನ್ನು ಕರೆದೊಯ್ಯುವಂತೆ ಕೇಳಿಕೊಂಡಿದ್ದಾರೆ. ಅವರನ್ನು ನಂಬಿ ರುದ್ರಸ್ವಾಮಿ ಬಾಡಿಗೆಗೆ ಹೋಗಿದ್ದಾರೆ. ಮಾರ್ಗಮಧ್ಯೆ ಮಂಡ್ಯದಲ್ಲಿ ಕಾರಿಗೆ ಡೀಸೆಲ್ ತುಂಬಿಸಿದ ಆಸಾಮಿಗಳು, ನಂತರ ವರಸೆ ಬದಲಿಸಿದ್ದಾರೆ. ಮಂಡ್ಯ ಸಮೀಪದ ಕೆಸ್ತೂರು ಬಳಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಚಾಲಕ ರುದ್ರಸ್ವಾಮಿ ಕಣ್ಣಿಗೆ ಖಾರದಪುಡಿ ಎರಚಿ, ಅವರ ಎದೆ ಭಾಗಕ್ಕೆ ಚಾಕುವಿನಿಂದ ಇರಿದು, ನೆಲಕ್ಕುರುಳಿಸಿ ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಇರಿತಕ್ಕೊಳಗಾಗಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ರುದ್ರಸ್ವಾಮಿ ಅವರನ್ನು ಮುಂಜಾನೆ 3 ಗಂಟೆ ಸುಮಾರಿಗೆ ಗಮನಿಸಿದ ಸಾರ್ವಜನಿಕರು, ತಕ್ಷಣ ಮಂಡ್ಯ ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ, ವಿಷಯ ತಿಳಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಕೆಸ್ತೂರು ಠಾಣೆ ಪೊಲೀಸರು, ಗಾಯಗೊಂಡಿದ್ದ ರುದ್ರಸ್ವಾಮಿಯನ್ನು ಕೂಡಲೇ ಮಂಡ್ಯ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ರುದ್ರಸ್ವಾಮಿ ಸಂಬಂಧಿಕರಿಗೆ ವಿಷಯ ತಿಳಿಸಿ ಅವರನ್ನು ಮಂಡ್ಯಕ್ಕೆ ಕರೆಸಿಕೊಂಡ ಪೊಲೀಸರು, ಘಟನೆ ಸಂಬಂಧ ಕೆಸ್ತೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ▶ 8ನೇ ಪುಟಕ್ಕೆ

ವಿಕ್ರಂ ಮುತ್ತಣ್ಣ ಬಿಚ್ಚು ನುಡಿ
ಬಲಿಪಶುಗಳು....!? ಪುಟ–4

ಸದ್ಗುರು ಜಗ್ಗಿ ವಾಸುದೇವ್ ಅವರ ವಿಶೇಷ ಸಂದರ್ಶನ
ಭೂಮಿಯ ಮೇಲೆ ನಮ್ಮ ಪಯಣ ಸೀಮಿತವಷ್ಟೇ...! ಪುಟ–5

ಪೌರಕಾರ್ಮಿಕರ ಪ್ರಮುಖ ಬೇಡಿಕೆ ‘ನೇಮಕಾತಿ’ ಐತಿಹಾಸಿಕ ತೀರ್ಮಾನ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣನೆ
- ಪೌರಕಾರ್ಮಿಕರ ಸಮಸ್ಯೆಗೆ ಸರ್ಕಾರದ ಸ್ಪಂದನೆ

ಬೆಂಗಳೂರು, ಜು. 5(ಕೆ.ಎಂ.ಶಿ)–ಪೌರ ಕಾರ್ಮಿಕರ ನೇಮಕಾತಿಯು ಐತಿಹಾಸಿಕ ತೀರ್ಮಾನವಾಗಿದ್ದು ಬೇರೆ ಯಾವ ರಾಜ್ಯದಲ್ಲಿಯೂ ಇದು ಆಗಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರ್ಕಾರದ ನಿರ್ಣಯವನ್ನು ಪೌರ ಕಾರ್ಮಿಕರು ಹೃದಯಪೂರ್ವಕವಾಗಿ ಸ್ವಾಗತಿಸಿದ್ದು, ಕೆಲಸಕ್ಕೆ ಹಾಜರಾಗುತ್ತಿದ್ದಾರೆ.

ಪೌರಕಾರ್ಮಿಕರ ವಿಶೇಷ ನೇಮಕಾತಿ ಸಲುವಾಗಿ ಸಮಿತಿ ರಚಿಸಲಾಗುತ್ತಿದ್ದು, ಸಮಿತಿಯಲ್ಲಿ ಕಾರ್ಮಿಕ ಮುಖಂಡರು, ನಿಗಮದ ಅಧ್ಯಕ್ಷರು, ಪದಾಧಿಕಾರಿಗಳು, ಕಾನೂನು ಇಲಾಖೆ ಅಧಿಕಾರಿಗಳು ಇರಲಿದ್ದು, ನೇರವಾಗಿ ಹಣ ಪಾವತಿ ಆಗಿದ್ದರೂ, ಖಾಯಂ ಆಗದೆ ಸವಲತ್ತುಗಳು ದೊರಕದವರಿಗೆ ಅನುಮೋದನೆ ಪಡೆದು, ನೀಡಲು ಕೈಗೊಂಡ ತೀರ್ಮಾನಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ ಹಾಗೂ ಸಹಕಾರ ನೀಡುವುದಾಗಿ ಹೇಳಿದ್ದಾರೆ ಎಂದರು. ಅತ್ಯಂತ ಕೆಟ್ಟ ಸ್ಥಿತಿಯಲ್ಲಿ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಆಯವ್ಯಯದಲ್ಲಿ ಎರಡು ಸಾವಿರ ರೂ.ಗಳ ಸಂಕಷ್ಟ ಪರಿಹಾರ ನೀಡಲಾಗಿದೆ. ಖಾಯಂ ಆದರೆ ಬದುಕು ಚೆನ್ನಾಗಿ ಆಗುತ್ತದೆ ಎನ್ನುವ ನಂಬಿಕೆ ಅವರ ಮನಸ್ಸಿನಲ್ಲಿ ಇತ್ತು. ಹಾಗಾಗಿ ಅವರ ಬಹುದಿನಗಳ ಬೇಡಿಕೆಯನ್ನು ಈಡೇರಿಸಲಾಗಿದೆ ಎಂದರು.

ಮತ್ತೆ ಮುಖ್ಯಮಂತ್ರಿ ಕನಸು ಹೊತ್ತ ಸಿದ್ದರಾಮಯ್ಯರಿಗೆ...

ಸುರಕ್ಷಿತ ಕ್ಷೇತ್ರ ತಲಾಷೆ!

ಚಿಕ್ಕನಾಯಕನಹಳ್ಳಿ, ಕೋಲಾರ, ಚಾಮರಾಜಪೇಟೆ, ಹೆಬ್ಬಾಳದತ್ತ ಚಿತ್ತ...!



> “ಈ ಸಲ ತಮ್ಮನ್ನು ಸೋಲಿಸಲು ಬಿಜೆಪಿ, ಜೆಡಿಎಸ್ ಮಾತ್ರವಲ್ಲದೆ ಸ್ವಪಕ್ಷ ಕಾಂಗ್ರೆಸ್‌ನ ಹಲವು ನಾಯಕರೂ ಬಯಸಿದ್ದಾರೆ ಎಂಬ ಮಾಹಿತಿ ಖುದ್ದು ಸಿದ್ದರಾಮಯ್ಯ ಅವರಿಗೆ ತಲುಪಿದ್ದು ಈ ಕಾರಣಕ್ಕಾಗಿ ಅವರು ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಬಗ್ಗೆ ಎಚ್ಚರಿಕೆಯಿಂದ ಅವಲೋಕನ ಮಾಡುತ್ತಿದ್ದಾರೆ.

ಬೆಂಗಳೂರು, ಜು. 5(ಕೆಎಂಶಿ)– ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಿಕೊಂಡಿರುವ ಸಿದ್ದರಾಮಯ್ಯ ಸುರಕ್ಷಿತ ಕ್ಷೇತ್ರಕ್ಕಾಗಿ ಹುಡುಕಾಟ ನಡೆಸಿದ್ದಾರೆ. ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಸಾಧ್ಯವಿಲ್ಲ. ಇನ್ನು ಬಾದಾಮಿಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರುತ್ತಿಲ್ಲ. ಈಗ ಎಲ್ಲಿ ನಿಲ್ಲಬೇಕು ಎಂಬುದರ ಬಗ್ಗೆ ಗೊಂದಲಕ್ಕೆ ಸಿಲುಕಿದ್ದಾರೆ.

ಮೈಸೂರಿನ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುವುದಾಗಿ ಈ ಹಿಂದೆ ಆಪ್ತರ ಬಳಿ ಹೇಳಿಕೊಂಡಿದ್ದರು. ಆದರೆ ಇದೀಗ ಮನಸ್ಸು ಬದಲಾಯಿಸಿದ್ದಾರೆ. ಜೆಡಿಎಸ್‌ನ ಜಿ.ಟಿ. ದೇವೇಗೌಡ, ಕಾಂಗ್ರೆಸ್ ಸೇರಲು ಪೂರ್ಣ ಆಸಕ್ತಿ ತೋರದಿರುವುದು ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರನ್ನು ವರುಣಾ ಕ್ಷೇತ್ರದಿಂದ ಬಿಜೆಪಿ ಕಣಕ್ಕಿಳಿಸಬಹುದೆಂಬ ಮಾತುಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಸುಲಭ ಗೆಲುವಿನ ಕ್ಷೇತ್ರಕ್ಕೆ ಮತ್ತೆ ಹುಡುಕಾಟ ಆರಂಭಿಸಿದ್ದಾರೆ.


ಆಪ್ತರ ಜೊತೆ ಚರ್ಚೆ ಮಾಡುವ ಸಂದರ್ಭದಲ್ಲಿ ಕೋಲಾರ, ಚಾಮರಾಜಪೇಟೆ, ಚಿಕ್ಕನಾಯಕನಹಳ್ಳಿ, ಹೆಬ್ಬಾಳ ಕ್ಷೇತ್ರಗಳ ಬಗ್ಗೆ ಚರ್ಚೆಯಾಗಿದೆ. ಕೋಲಾರದಲ್ಲಿ ಕಣಕ್ಕಿಳಿಯುವಂತೆ ಮಾಜಿ ವಿಧಾನಸಭಾಧ್ಯಕ್ಷ ರಮೇಶ್‌ಕುಮಾರ್ ಒತ್ತಾಯ ಮಾಡಿದ್ದಾರೆ. ▶ 8ನೇ ಪುಟಕ್ಕೆ





ಜು.8ರಂದು ಸಾಧಕ ವೈದ್ಯರಿಗೆ ವೈದ್ಯ ಭಾಸ್ಕರ್ ಪ್ರಶಸ್ತಿ ಪ್ರದಾನ


ಉಚಿತ ಆರೋಗ್ಯ ತಪಾಸಣೆ ಶಿಬಿರ


ಡಾ.ಎಂ.ಎನ್.ರವಿ


ಡಾ.ಕೆ.ಪಿ.ಶ್ರೀಧರ್


ಡಾ.ರೂಪಾ ಪ್ರಕಾಶ್


ಡಾ.ಆರತಿ


ಡಾ.ಪ್ರಶಾಂತ್


ಡಾ.ಆರ್.ಯೋಗೀಶ್


ಡಾ.ಜಿ.ಎನ್.ಕಿರಣ್


ಡಾ.ಸಿ.ಸುಹಾಸ್

ಮೈಸೂರು,ಜು.5(ಪಿಎಂ)– ಶ್ರೀ ಕೃಷ್ಣಮಿತ್ರ ಮಂಡಳಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ, ಅಪೂರ್ವ ಸ್ನೇಹ ಬಳಗ ಮತ್ತು ಕೆಎಂಪಿಕೆ ಚಾರಿಟಬಲ್ ಟ್ರಸ್ಟ್‌ನ ಸಂಯುಕ್ತಾಶ್ರಯದಲ್ಲಿ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಜು.8ರಂದು ಸಾಧಕ ವೈದ್ಯರಿಗೆ 'ವೈದ್ಯ ಭಾಸ್ಕರ್ ಪ್ರಶಸ್ತಿ' ಪ್ರದಾನ, ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 11ಕ್ಕೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಉದ್ಘಾಟನೆ ನೆರವೇರಿಸುವರು ಎಂದರು.

ಬಳಿಕ ಸಾಧಕ ವೈದ್ಯರಾದ ಡಾ.ಎಂ.ಎನ್.ರವಿ, ಡಾ.ಆರತಿ ಸಂತೋಷ್, ಡಾ.ರೂಪಾ ಪ್ರಕಾಶ್, ಡಾ.ಆರ್.ಯೋಗೀಶ್, ಡಾ.ಕೆ.ಪಿ.ಶ್ರೀಧರ್ ವೈದ್ಯ, ಡಾ.ಸಿ.ಸುಹಾಸ್, ಡಾ.ಜಿ.ಎನ್. ಕಿರಣ್‌ಕುಮಾರ್ ಮತ್ತು ಡಾ.ಪ್ರಶಾಂತ್ ಅವರಿಗೆ 'ವೈದ್ಯ ಭಾಸ್ಕರ್ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಕಾಮಾಕ್ಷಿ ಆಸ್ಪತ್ರೆಯ ವ್ಯವಸ್ಥಾಪಕ ಟ್ರಸ್ಟಿ ಮಹೇಶ್ ಶೆಣೈ, ಮುಖಂಡರಾದ ಕೆ.ರಘುರಾಂ ವಾಜಪೇಯಿ, ಎನ್.ಎಂ.ನವೀನ್‌ಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಆರೋಗ್ಯ ತಪಾಸಣೆ ಶಿಬಿರ ನಡೆಯಲಿದ್ದು, ಜೊತೆಗೆ ರಕ್ತದಾನ ಶಿಬಿರವೂ ನಡೆಯಲಿದೆ. ವಿವರಗಳಿಗೆ ಮೊ.ಸಂ. 94813 22340, 94497 27124 ಅನ್ನು ಸಂಪರ್ಕಿಸಬಹುದು ಎಂದರು. ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕಾರ್ಯದರ್ಶಿ ಅಜಯ್‌ಶಾಸ್ತ್ರಿ ಗೋಷ್ಠಿಯಲ್ಲಿದ್ದರು.


ಮೈಸೂರು ಕುಂಚಿಟಿಗರ ಸಂಘದ ವತಿಯಿಂದ ಡಿ.ಬನುಮಯ್ಯ ಕಾಲೇಜಿನಲ್ಲಿರುವ ಬಹದ್ದೂರ್ ಡಿ.ಬನುಮಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಅವರ 162ನೇ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಸಂಘದ ಗೌರವ ಕಾರ್ಯದರ್ಶಿ ಎಂ.ಆರ್.ಯೋಗೀಶ, ಖಜಾಂಚಿ ಎನ್.ಪ್ರದೀಪ್‌ಕುಮಾರ್, ನಿರ್ದೇಶಕರಾದ ಆರ್.ಸತೀಶ್, ವಿ.ರವಿ, ಪ್ರವೀಣ್ ಬನುಮಯ್ಯ, ಎನ್.ಶಿವಶಂಕರ್, ಎನ್.ಗೋವಿಂದ, ಶ್ರೀಮತಿ ಹೆಚ್.ಜಿ.ರತ್ನಮ್ಮ ಇನ್ನಿತರರಿದ್ದರು. ಇದೇ ವೇಳೆ ಬನುಮಯ್ಯ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.

ಜು.8ರಂದು ಎಂ.ಶಿವಣ್ಣ ಮೈಸೂರಿಗೆ



ಮೈಸೂರು,ಜು.5– ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಕೋಟೆ ಜು.8ರಂದು ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಜು.8ರಂದು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕೆ.ಆರ್.ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11 ಗಂಟೆಗೆ ಕೆ.ಆರ್. ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳೊಡನೆ ಸಭೆ ನಡೆಸುವರು. ಮಧ್ಯಾಹ್ನ 2.30 ಗಂಟೆಗೆ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ವಿಚಾರಣೆ ನಡೆಸುವರು. ಸಂಜೆ 4 ಗಂಟೆಗೆ ಜಲದರ್ಶಿನಿ ಪ್ರವಾಸಿ ಮಂದಿರದಲ್ಲಿ ಸಫಾಯಿ ಕರ್ಮಚಾರಿಗಳಿಗೆ ಅರಿವು ಮೂಡಿಸುವ ಸಂಬಂಧ ಮತ್ತು ಅವರ ಮಕ್ಕಳನ್ನು ಪ್ರೋತ್ಸಾಹಿಸಲು ಕಾರ್ಯಾಗಾರ ಪೂರ್ವಭಾವಿ ಸಭೆಯನ್ನು ನಡೆಸುವರು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ಖದೀಮರ ಬಂಧನ: 5 ಲಕ್ಷ ಮೌಲ್ಯದ 9 ದ್ವಿಚಕ್ರ ವಾಹನ ವಶ



ಮೈಸೂರು,ಜು.5(ಆರ್‌ಕೆ)–ಖದೀಮರಿಬ್ಬರನ್ನು ಬಂಧಿಸಿರುವ ಕೆಆರ್ ಠಾಣೆ ಪೊಲೀಸರು, 5 ಲಕ್ಷ ರೂ. ಮೌಲ್ಯದ 9 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಶಿವಕುಮಾರ್ ಮತ್ತು ಹುಣಸೂರಿನ ಚೆನ್ನಪ್ಪ ಬಂಧಿತರು. ಕೆಆರ್ ಠಾಣಾ ವ್ಯಾಪ್ತಿಯಲ್ಲಿ 1, ನಜರ್‌ಬಾದ್‌ನಲ್ಲಿ 6, ದೇವರಾಜ ಮತ್ತು ಲಷ್ಕರ್ ಠಾಣಾ ವ್ಯಾಪ್ತಿಯಲ್ಲಿ ತಲಾ ಒಂದೊಂದು ದ್ವಿಚಕ್ರ ವಾಹನಗಳನ್ನು ಕಳವು ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಜುಲೈ 4ರಂದು ಬಂಧಿಸಿದ ಪೊಲೀಸರು, ಅವರಿಂದ 9 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಗೀತಾ ಪ್ರಸನ್ನ, ಕೆಆರ್ ಉಪವಿಭಾಗದ ಎಸಿಪಿ ಎಸ್.ಇ. ಗಂಗಾಧರಸ್ವಾಮಿ ಅವರ ಮಾರ್ಗದರ್ಶನದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಕೆಆರ್ ಠಾಣೆ ಇನ್ಸ್‌ಪೆಕ್ಟರ್ ಎನ್.ವಿ. ಮಹೇಶ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಿ.ಆರ್. ಮಂಜು, ಮಹಾವೀರ್, ಎಎಸ್‌ಐ ಚಂದ್ರನಾಯಕ, ಸಿಬ್ಬಂದಿಗಳಾದ ಮೊಖದ್ದರ್ ಷರೀಫ್, ಸಂದೇಶ್‌ಕುಮಾರ್, ಸಿದ್ದರಾಮ ಪೂಜಾರಿ, ಮಧು, ಶ್ರೀನಿವಾಸಪ್ರಸಾದ್ ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸಲು ಆಗ್ರಹ

ಮೈಸೂರು, ಜು.5(ಎಸ್‌ಪಿಎನ್)– ದಿನದಿಂದ ದಿನಕ್ಕೆ ಸರ್ಕಾರಿ ಶಾಲೆಗಳು ಮೂಲ ಸೌಲಭ್ಯವಿಲ್ಲದೆ ಸೊರಗುತ್ತಿದ್ದು, ಕೂಡಲೇ ಸರ್ಕಾರಿ ಶಾಲೆಗಳಿಗೆ ಮೂಲ ಸೌಲಭ್ಯ ಕಲ್ಪಿಸುವಂತೆ ರಾಜ್ಯ ಸರ್ಕಾರವನ್ನು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ಖಾನ್ ಒತ್ತಾಯಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳು, ಶಿಕ್ಷಣದ ಗುಣಮಟ್ಟ ಇಲ್ಲದಿರುವುದರಿಂದ ಪೋಷಕರು ತಮ್ಮ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದೀಗ ಮೈಸೂರಿನ ಫಾರೂಕಿಯಾ ಬಾಲಕಿಯರ ಪ್ರೌಢಶಾಲೆ ಮತ್ತು ಪಿಯು ಕಾಲೇಜು ವಿಷಯದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿ ಆರೋಪಿಸಿದ್ದಾರೆ.

ಜು.13, ಸಾಯಿ ಮಂದಿರದಲ್ಲಿ ಗುರು ಪೂರ್ಣಿಮೆ



ಮೈಸೂರು, ಜು. 5– ಶ್ರೀ ಪ್ರಸನ್ನ ಗಣಪತಿ ಮತ್ತು ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ಜು.13 ರಂದು ಗುರು ಪೂರ್ಣಿಮೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 7 ಗಂಟೆಗೆ ಕಾಕಡಾರತಿಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದ್ದು, ಜಲಾಭಿಷೇಕ, ಪುಷ್ಪಾರ್ಚನೆ, ಪ್ರಾಕಾರೋತ್ಸವ, ಶೋಡೋಶೋಪಚಾರ ಪೂಜೆ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ನೈವೇದ್ಯಾರತಿ, ಪ್ರಸಾದ ವಿನಿಯೋಗವಿರುತ್ತದೆ. ಸಂಜೆ 6 ಗಂಟೆಗೆ ಧೂಪಾರತಿ ರಾತ್ರಿ 9 ಗಂಟೆಗೆ ಶೇಜಾರತಿ ಕಾರ್ಯಕ್ರಮಗಳು ನಡೆಯಲಿದೆ ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ಶೈಕ್ಷಣಿಕ ಚಟುವಟಿಕೆಗೆ ಮೈಸೂರು ವಿವಿ ಸದಾ ಆದ್ಯತೆ

●ಕುಲಪತಿ ಪ್ರೊ.ಹೇಮಂತ್‌ಕುಮಾರ್ ಸಮರ್ಥನೆ ●ಮಹಿಳಾ ಖೋಖೋ ಪಂದ್ಯಾವಳಿಗೆ ಚಾಲನೆ


ಮೈಸೂರು ವಿವಿ ಪೆವಿಲಿಯನ್‌ನಲ್ಲಿ ಅಖಿಲ ಭಾರತ ಮಹಿಳೆಯರ ಖೋ ಖೋ ಪಂದ್ಯಾವಳಿಗೆ ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಪಾರಿವಾಳ ಹಾರಿ ಬಿಡುವ ಮೂಲಕ ಚಾಲನೆ ನೀಡಿದರು.

ಮೈಸೂರು, ಜು.5 (ಎಂಟಿವೈ)– ಮೈಸೂರು ವಿಶ್ವವಿದ್ಯಾಲಯವು ಮೊದಲಿನಿಂದಲೂ ಶೈಕ್ಷಣಿಕ ಚಟುವಟಿಕೆಯೊಂದಿಗೆ ಕ್ರೀಡಾ ಕ್ಷೇತ್ರಕ್ಕೂ ಆದ್ಯತೆ ನೀಡುವ ಮೂಲಕ ಸಾವಿರಾರು ಕ್ರೀಡಾ ಸಾಧಕರಿಗೆ ವೇದಿಕೆ ಕಲ್ಪಿಸಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಹೊಸದಿಲ್ಲಿಯ ಭಾರತೀಯ ವಿಶ್ವವಿದ್ಯಾಲಯಗಳ ಮಹಾ ಸಂಘ ಮತ್ತು ಮೈಸೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮಂಗಳವಾರ ಆರಂಭವಾದ ಮೂರು ದಿನಗಳ ಅಖಿಲ ಭಾರತ ಮಹಿಳೆಯರ ಖೋ ಖೋ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಅರಸರ ಕಾಲದಲ್ಲೇ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ 105 ವರ್ಷಗಳ ಇತಿಹಾಸವಿದೆ. ಮೈಸೂರು ಮಹಾರಾಜರು ವಿವಿ ಸ್ಥಾಪನೆಗೆ 800 ಎಕರೆ ಜಾಗವನ್ನು ನೀಡಿದ್ದಾರೆ. ಇದರಲ್ಲಿ ಅಂದಾಜು 100 ಎಕರೆ ಕ್ರೀಡಾ ಉದ್ದೇಶಕ್ಕೆ ಬಳಕೆ ಮಾಡಲಾಗುತ್ತಿದೆ. ಮಹಾರಾಜ ಕಾಲೇಜು ಮೈದಾನ, ಪೆವಿಲಿಯನ್ ಗ್ರೌಂಡ್, ಓವೆಲ್ ಮೈದಾನ, ಎಸ್‌ಡಿಎನ್‌ಆರ್ ಕ್ರಿಕೆಟ್ ಮೈದಾನ ಕ್ರೀಡೆಗೆ ಮೀಸಲಿಡಲಾಗಿದೆ. ನಾನೂ ಸೇರಿದಂತೆ ಇದುವರೆಗೆ ಕುಲಪತಿಯಾಗಿರುವವರೆಲ್ಲೂ ಕ್ರೀಡೆಗೆ ಪ್ರಾಧಾನ್ಯತೆ ನೀಡಿದ್ದಾರೆ. ಇದರಿಂದ ವಿವಿಯಲ್ಲಿ ಕ್ರೀಡೆಗೆ ದೊರೆತ ಪ್ರೋತ್ಸಾಹದಿಂದಾಗಿ ನೂರಾರು ವಿದ್ಯಾರ್ಥಿಗಳು ವಿವಿಧ ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿ ಬಹುಮಾನ ತಂದುಕೊಟ್ಟಿದ್ದಾರೆ ಎಂದು ವಿವರಿಸಿದರು.

ಮೈಸೂರು ವಿವಿಯ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಕೃಷ್ಣಯ್ಯ ಮಾತನಾಡಿ, ಈ ಪಂದ್ಯಾವಳಿಯಲ್ಲಿ ದಕ್ಷಿಣ ವಲಯದ ವಿಭಾಗದಲ್ಲಿ ಮೈಸೂರು ವಿವಿ, ಕ್ಯಾಲಿಕಟ್ ವಿವಿ, ವಾರಂಗಲ್ ಕಾಕತೀಯ ವಿವಿ, ಪಶ್ಚಿಮ ವಲಯದಲ್ಲಿ ಔರಂಗಾಬಾದ್ ಡಾ.ಬಿ.ಆರ್.ಮರಾಠವಾಡ ವಿವಿ, ಮುಂಬಯಿ ವಿವಿ, ಗುಜರಾತ್ ವಿವಿ, ಕೊಲ್ಲಾಪುರದ ಶಿವಾಜಿ ವಿವಿ ತಂಡಗಳು ಸ್ಪರ್ಧಿಸುತ್ತಿವೆ ಎಂದು ಮಾಹಿತಿ ನೀಡಿದರು.

ಉತ್ತರ ವಲಯದ ವಿಭಾಗದಲ್ಲಿ ಜಲಂಧರ್ ಲವ್ಲಿ ಪ್ರೊಫೆಷನಲ್ ವಿವಿ, ರೋಹ್ಟಕ್ ಮಹರ್ಷಿ ದಯಾನಂದ ವಿವಿ, ಚಂಡೀಗಢದ ಪಂಜಾಬ್ ವಿವಿ ಹಾಗೂ ಪೂರ್ವ ವಲಯದಲ್ಲಿ ಒಡಿಶಾದ ಕೆಐಐಟಿ ವಿವಿ, ಭುವನೇಶ್ವರದ ಉತ್ಕಲ್ ವಿವಿ, ಉತ್ತರ ಪ್ರದೇಶದ ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ್ ವಿವಿ, ಪಶ್ಚಿಮ ಬಂಗಾಳದ ಕಲ್ಯಾಣಿ ವಿವಿ ಸೇರಿದಂತೆ 16 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿವೆ ಎಂದರು. ಕಾರ್ಯಕ್ರಮದಲ್ಲಿ ಕುಲಸಚಿವ ಆರ್.ಶಿವಪ್ಪ, ವಿವಿ ಹಣಕಾಸು ಅಧಿಕಾರಿ ಸಂಗೀತಾ ಗಜಾನನ ಭಟ್, ಸಿಂಡಿಕೇಟ್ ಸದಸ್ಯ ನಿಂಗರಾಜ್‌ಗೌಡ ಇತರರಿದ್ದರು.

ಅಭಿವೃದ್ಧಿ ಬಗ್ಗೆ ಚರ್ಚೆಗೆ ಹಂದಿ, ಕತ್ತೆಯೊಂದಿಗೆ ಸಂಸದ ಪ್ರತಾಪ್ ಸಿಂಹ ಕಚೇರಿಗೆ ತೆರಳುತ್ತಿದ್ದ ಕಾಂಗ್ರೆಸ್ ಮುಖಂಡರು ಪೊಲೀಸ್ ವಶಕ್ಕೆ

●ಕೆಲ ಹೊತ್ತಿನ ನಂತರ ಮುಖಂಡರು, ಹಂದಿ, ಕತ್ತೆಗಳಿಗೆ ಮುಕ್ತಿ ●ಚರ್ಚೆಗೆ ಮುಂದಾಗದ ಸಂಸದರ ವಿರುದ್ಧ ಆರೋಪ



ಮೈಸೂರು,ಜು.5(ಎಂಟಿವೈ)–ಅಭಿವೃದ್ಧಿ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಪಕ್ಷದ ಕಾರ್ಯಕರ್ತರು ಹಾಗೂ ಕತ್ತೆ ಹಾಗೂ ಹಂದಿಗಳೊಂದಿಗೆ ಸಂಸದ ಪ್ರತಾಪ ಸಿಂಹ ಕಚೇರಿಗೆ ತೆರಳಲು ಮುಂದಾದ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಅವರ ಬೆಂಬಲಿಗರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಮೈಸೂರಿನ ಕಾಂಗ್ರೆಸ್ ಕಚೇರಿ ಮುಂಭಾಗದಿಂದ ಎರಡು ಹಂದಿ ಹಾಗೂ ಎರಡು ಕತ್ತೆಯೊಂದಿಗೆ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿರುವ ಸಂಸದ ಪ್ರತಾಪ ಸಿಂಹ ಕಚೇರಿಗೆ ತೆರಳಲು ಮುಂದಾದ ಎಂ.ಲಕ್ಷ್ಮಣ್, ಬೆಂಬಲಿಗರಿಗೆ ದಾಸಪ್ಪ ವೃತ್ತದಲ್ಲಿಯೇ ಪೊಲೀಸರು ತಡೆಯೊಡ್ಡಿದರು. ಆದರೂ ಲಕ್ಷ್ಮಣ್ ಅವರು ಕತ್ತೆಯೊಂದಿಗೆ ನಾನು ಸಂಸದ ಪ್ರತಾಪ ಸಿಂಹ ಕಚೇರಿಗೆ ಹೋಗುತ್ತಿರುವುದು ಗಲಾಟೆ ಎಬ್ಬಿಸಲು ಅಲ್ಲ. ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಕ್ಕೆ ಚರ್ಚಿಸಲು ತೆರಳುತ್ತಿದ್ದೇನೆ ಎಂದು ಸ್ಪಷ್ಟನೆ ನೀಡಿದರು. ಆದರೂ ಪೊಲೀಸರು ಅಲ್ಲೇ ವಶಕ್ಕೆ ಪಡೆದರು. ಇವರೊಂದಿಗೆ ಮಾಜಿ ಮೇಯರ್ ಅಯೂಬ್ ಖಾನ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಘಟಕದ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಇತರರನ್ನು ವಶಕ್ಕೆ ಪಡೆಯಲಾಯಿತು. ಇದೇ ವೇಳೆ ಅವರು ತಂದಿದ್ದ ಕತ್ತೆ ಹಾಗೂ ಹಂದಿಯನ್ನು ಕೊಂಡೊಯ್ಯುವಂತೆ ಅವುಗಳ ಮಾಲೀಕರಿಗೆ ಸೂಚನೆ ನೀಡಿದರು. ಕೆಲ ಸಮಯದ ನಂತರ ಸಂಸದ ಪ್ರತಾಪ ಸಿಂಹ ಕಚೇರಿಗೆ ತೆರಳದಂತೆ ಎಚ್ಚರಿಕೆ ನೀಡಿ, ದಾಸಪ್ಪ ವೃತ್ತದಲ್ಲೇ ಹೇಳಿ ಕಳುಹಿಸಿದರು. ಅಲ್ಲದೆ, ಅಲ್ಲಿ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಸ್ಥಳದಿಂದ ಚದುರಿಸಿದರು.

ಆನ್‌ಲೈನ್ ಮೂಲಕವಾದರೂ ಚರ್ಚೆಗೆ ಬನ್ನಿ: ಬಳಿಕ ಪತ್ರಕರ್ತರೊಂದಿಗೆ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮೈಸೂರು ಅಭಿವೃದ್ಧಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೀಡಿರುವ ಕೊಡುಗೆ ಬಗ್ಗೆ ಚರ್ಚಿಸಲು ಬನ್ನಿ ಎಂದರೂ ಸಂಸದ ಪ್ರತಾಪ ಸಿಂಹ ಪಲಾಯನ ಮಾಡುತ್ತಿದ್ದಾರೆ. ಓರ್ವ ಜನಪ್ರತಿನಿಧಿಯಾಗಿ ಚರ್ಚೆಗೆ ಬಂದು, ತಮ್ಮ ಸಾಧನೆ ಬಗ್ಗೆ ಹೇಳದೇ ಪಲಾಯನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮೈಸೂರು–ಬೆಂಗಳೂರು ದಶಪಥ ರಸ್ತೆ ಯೋಜನೆ ಆರಂಭವಾದಾಗ ಪ್ರತಾಪ ಸಿಂಹ ಸಂಸದನಾಗಿರಲಿಲ್ಲ. 2014ರಲ್ಲಿ ದಶಪಥ ರಸ್ತೆ ನಿರ್ಮಾಣ ಯೋಜನೆ ಅನುಷ್ಠಾನಕ್ಕೆ ರೂಪು–ರೇಷೆಯನ್ನು ಅಂದಿನ ಕಾಂಗ್ರೆಸ್ ಸರ್ಕಾರ ತಯಾರಿಸಿತು. ಅಂದು 6,500 ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆ ಜಾರಿಗೊಳಿಸಲು ಉದ್ದೇಶಿಸಲಾಗಿತ್ತು. ಅದರಲ್ಲಿ ಶೇ.60ರಷ್ಟು ಖಾಸಗಿ ಕಂಪನಿಯಿಂದಲೂ, ಶೇ.40ರಷ್ಟು ಕೇಂದ್ರ ಸರ್ಕಾರ ಪಾವತಿಸುವುದಕ್ಕೆ ಯೋಜನೆ ಸಿದ್ಧಪಡಿಸಲಾಗಿತ್ತು. ರಸ್ತೆ ನಿರ್ಮಾಣ ಪೂರ್ಣಗೊಂಡ ಬಳಿಕ ಹೂಡಿಕೆ ಮಾಡಿದ್ದ ಖಾಸಗಿ ಕಂಪನಿಯವರು ಟೋಲ್ ಸಂಗ್ರಹ ಮಾಡುವ ಮೂಲಕ ಹಣ ಸಂಗ್ರಹಿಸುವುದಕ್ಕೆ ಅವಕಾಶ ನೀಡಲು ನಿರ್ಧರಿಸಿತ್ತು. ಆದರೆ ಸಂಸದ ಪ್ರತಾಪ ಸಿಂಹ ಕ್ಷೇತ್ರ ವ್ಯಾಪ್ತಿಗೆ ದಶಪಥ ರಸ್ತೆ ಕೇವಲ 6 ಕಿ.ಮೀ. ಯಷ್ಟೇ ಸೇರುತ್ತದೆ. ಉಳಿದ ಭಾಗ, ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಹಾಗೂ ಸಂಸದ ಡಿ.ಕೆ.ಸುರೇಶ್ ವ್ಯಾಪ್ತಿಗೆ ಸೇರುತ್ತದೆ. ಆದರೂ ಸುಳ್ಳು ಹೇಳುವ ಮೂಲಕ ಪೂರ್ಣ ಪ್ರಮಾಣದ ರಸ್ತೆಯನ್ನು ನಾನೇ ಮಾಡಿದ್ದು ಎಂದು ಜನರನ್ನು ನಂಬಿಸುವ ಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಹತ್ತಿಕ್ಕುವ ಯತ್ನ: ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, ಪ್ರತಿಭಟನಾಕಾರರನ್ನು ತಡೆಯೊಡ್ಡುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲಾಗುತ್ತಿದೆ. ಸಂಸದ ಪ್ರತಾಪ ಸಿಂಹ ಅಭಿವೃದ್ಧಿ ಕಾಮಗಾರಿಗೆ ಆದ್ಯತೆ ನೀಡದೆ, ಕೋಮು ಪ್ರಚೋದನೆಗೆ ಒತ್ತು ನೀಡುತ್ತಿದ್ದಾರೆ. ಸಮಾಜದಲ್ಲಿ ಶಾಂತಿ ಕದಡುವ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳುವ ತಂತ್ರಗಾರಿಕೆ ಪ್ರತಾಪ ಸಿಂಹ ಸೇರಿದಂತೆ ಬಿಜೆಪಿ ನಾಯಕರದ್ದಾಗಿದೆ. ಅಭಿವೃದ್ಧಿಯ ಬಗ್ಗೆ ಮಾತನಾಡಲು ಬಿಜೆಪಿ ನಾಯಕರು ಅರ್ಹರಾಗಿಲ್ಲ. ಆದ ಕಾರಣ, ಚರ್ಚೆಗೆ ಬರದೆ ಪಲಾಯನ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಕುರುಬಾರಹಳ್ಳಿ ಪ್ರಕಾಶ್, ಬ್ರಾಡ್‌ವೇ ಕಿರಣ್, ಡೈರಿ ವೆಂಕಟೇಶ್, ಮಹೇಶ್, ಸುನಂದಕುಮಾರ್, ಬಾಲು, ಮೈಸೂರು ಬಸವಣ್ಣ ಹಾಗೂ ಇನ್ನಿತರರು ಇದ್ದರು.

ಬೆಂಗಳೂರು ಮಾಜಿ DC ಮಂಜುನಾಥ್ ಫ್ಲ್ಯಾಟ್ ಮೇಲೆ ACB ದಾಳಿ: 30 ಎಕರೆ ಪ್ರಾಪರ್ಟಿಯ ದಾಖಲೆಗಳು ಪತ್ತೆ



ಬೆಂಗಳೂರು: ಲಂಚ ಪಡೆದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ಬೆಂಗಳೂರು ನಗರದ ಮಾಜಿ ಡಿಸಿ ಮಂಜುನಾಥ್ ಫ್ಲ್ಯಾಟ್ ಮೇಲೆ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದಾಳಿ ವೇಳೆ 30 ಎಕರೆ ಆಸ್ತಿಯ ದಾಖಲೆ ಪತ್ರಗಳು ಪತ್ತೆಯಾಗಿವೆ ಎಂದು ತಿಳಿದು ಬಂದಿದೆ.

ಎಸಿಬಿ ಡಿವೈಎಸ್‌ಪಿ ಬಸವರಾಜ್ ಮುಗ್ಧಂ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ದಾಳಿ ವೇಳೆ ಬೆಂಗಳೂರು ಗ್ರಾಮಾಂತರ ಭಾಗದಲ್ಲೇ 30 ಎಕರೆ ಜಾಗ ಹೊಂದಿರುವುದು. ಜೊತೆಗೆ ಸಂಬಂಧಿಕರ ಹೆಸರಿನಲ್ಲೂ ಕೋಟಿ ಕೋಟಿ ಆಸ್ತಿ ಮಾಡಿರುವುದು ಪತ್ತೆಯಾಗಿದೆ. ಮಂಜುನಾಥ್ ಬ್ಯಾಂಕ್ ಖಾತೆಗಳ ವಿವರಗಳನ್ನೂ ಅಧಿಕಾರಿಗಳು ಪಡೆಯುತ್ತಿದ್ದು, ಮಕ್ಕಳ ವಿದ್ಯಾಭ್ಯಾಸಕ್ಕೆ ವ್ಯಯಿಸಿರುವ ಹಣದ ವಿವರ ಪಡೆಯುತ್ತಿದ್ದಾರೆ. ಇತರೆ ಆಸ್ತಿ ಪತ್ರದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. 12 ಬ್ಯಾಂಕ್ ಖಾತೆಗಳ ವಿವರಗಳನ್ನ ಕೂಡ ಪಡೆಯಲಾಗಿದೆ. ಜೊತೆಗೆ ಮಂಜುನಾಥ್ ಎಷ್ಟು ಬಾರಿ ಫಾರಿನ್ ಟ್ರಿಪ್‌ಗೆ ತೆರಳಿದ್ದಾರೆ ಎಂಬ ಮಾಹಿತಿ ಕೂಡ ಕಲೆ ಹಾಕಲಾಗಿದೆ. ಬೇನಾಮಿ ಪ್ರಾಪರ್ಟಿಗಳ ಬಗೆಗೂ ಮಾಹಿತಿ ಕಲೆಹಾಕಿದೆ.

ಡ್ರ್ಯಾಗನ್, ಊಟಿ ಆಪಲ್, ಲಿಚ್ಚಿ, ಬಟರ್ ಫ್ರೂಟ್‌ಗೆ ಡಿಮ್ಯಾಂಡ್

ಮೈಸೂರು,ಜು.5(ಎಸ್‌ಪಿಎನ್)–ಕೆಂಪು ಗುಲಾಬಿ ಬಣ್ಣದ 'ಡ್ರ್ಯಾಗನ್ ಫ್ರೂಟ್', 'ಊಟಿ ಆಪಲ್', 'ರಂಬುಟಾನ್' ಹಾಗೂ ಲಿಚ್ಚಿ, ಬಟರ್ ಫ್ರೂಟ್‌ಗೆ ಭಾರೀ ಬೇಡಿಕೆ ಬಂದಿದೆ. ಮೈಸೂರು ಡಿಸಿ ಕಚೇರಿ ಮುಂಭಾಗದ ಬೀದಿಬದಿ ಹಣ್ಣಿನ ವ್ಯಾಪಾರಿ ಮಹದೇವ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬಿಳಿರಕ್ತ ಕಣ ಹೆಚ್ಚಿಸುತ್ತದೆ ಎಂದು ಆಯುರ್ವೇದ ವೈದ್ಯರ ಸಲಹೆ ಮೇರೆಗೆ ಡ್ರಾಗನ್ ಹಣ್ಣಿಗೆ ಬೇಡಿಕೆ ಬಂದಿದೆ. ಕೆಜಿಗೆ 100 ರೂ. ಇದ್ದರೂ ಜನರು ಕೊಳ್ಳುತ್ತಿದ್ದಾರೆ. ಈ ಹಣ್ಣು ದಿನಕ್ಕೆ 8–10 ಕೆಜಿಯವರೆಗೆ ವ್ಯಾಪಾರವಾಗುತ್ತಿದೆ.



ಇದರ ಜೊತೆಗೆ ಲಿಚ್ಚಿ ಹಣ್ಣು ಕೆಜಿಗೆ 400 ರೂ, ರಂಬುಟಾನ್ ಕೆಜಿ 400, ಬಟರ್ ಫ್ರೂಟ್ ಕೆಜಿಗೆ 150 ರೂ., ಊಟಿ ಆಪಲ್ 400 ರೂ. ಇದ್ದರೂ ತುಂತುರು ಮಳೆ ನಡುವೆಯೂ ಗ್ರಾಹಕರು ಈ ಹಣ್ಣುಗಳನ್ನು ಖರೀದಿಸುತ್ತಿದ್ದಾರೆ. ಈ ಮೊದಲು ಕಿವಿ ಹಣ್ಣು ಹೆಚ್ಚಾಗಿ ಖರೀದಿ ಮಾಡುತ್ತಿದ್ದ ಗ್ರಾಹಕರು, ಇದೀಗ ಡ್ರ್ಯಾಗನ್ ಹಣ್ಣು ಖರೀದಿಸಲು ಮುಂದಾಗುತ್ತಿದ್ದಾರೆ. 'ಡ್ರಾಗನ್' ಒಂದು ಹಣ್ಣು 250ರಿಂದ 300 ಗ್ರಾಂ ತೂಕ ಬರುತ್ತದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.07.2022 ಬುಧವಾರ, ಮಳೆ ನಕ್ಷತ್ರ : ಪುನರ್ವಸು 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಸಪ್ತಮೀ, ನಕ್ಷತ್ರ : ಉಫ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ, ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಭಾವಗೀತೆ, 6.50 ವನಮಹೋತ್ಸವ, ಪ್ರಾಯೋಜಕರು– ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.15 ಭಾವಗೀತೆ – ಮುದ್ದುಮೋಹನ್, 9.00ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ, ಪಂಡಿತ್ ಡಿ.ಕೆ. ದಾತಾರ್–ವಯೊಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ : 12.05 ವನಿತಾ ವಿಹಾರ, 12.30 ದೇವರನಾಮ–ರೇಖಾ ವೆಂಕಟೇಶ್, 12.45 ಲಾಕ್ ಡೌನ್ ಕಥಾ ನಾಟಕ –ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, 'ಹಸಿವು', ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್, 1.20 ಭಾವಗೀತೆ–ರಶ್ಮಿ ವಿ. ರಾವ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಮೀನಾ ಮೈಸೂರು–ಲೇಖಕಿ ಅವರೊಂದಿಗೆ ಸಂವಾದದ ನೇರ ಪ್ರಸಾರ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, ಒಳನಾಡು ಮೀನುಗಾರಿಕೆಗೆ ಇರುವ ಅವಕಾಶಗಳು–ಡಾ. ವೆಂಕಟಪ್ಪ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳೀಹಾಡು–ಭಾಗವಹಿಸುವವರು ಚಾಮರಾಜನಗರ ದೊಡ್ಡರಾಯಪೇಟೆಯ ಮಹದೇವಸ್ವಾಮಿ ಮತ್ತು ಸಂಗಡಿಗರು, ಪ್ರಸ್ತುತಿ–ಅಬ್ದುಲ್ ರಶೀದ್, 10.30 ಸವಿನೆನಪು

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್ :** ಬೆಳಗ್ಗೆ ನೂತನ ವಿಮಾನಗೋಪುರ, ವೇದಾಂತ ದೇಶಿಕರ ಸ್ಥಿರಬಿಂಬ ಪ್ರತಿಷ್ಠಾಪನೆ ಹಾಗೂ ಮಹಾಕುಂಭಾಭಿಷೇಕ, ದ್ವಾರ ತೋರಣ ಪೂಜೆ, ಕುಂಭಾರಾಧನೆ, ಮೂರ್ತಿ ಶಾಂತಿ ಹೋಮ, ಪ್ರಾಣಪ್ರತಿಷ್ಠಾಪನಾಂಗ ಹೋಮ, ಮಹಾಪೂರ್ಣಾಹುತಿ, ಕಲಾ ಸಂಯೋಜನ ಪೂಜೆ, ಮಹಾಕುಂಭಾಭಿಷೇಕ, ಪ್ರಾಣ ಪ್ರತಿಷ್ಠಾಪನೆ, ಸ್ಥಳ: ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ವಾಣಿ ವಿಲಾಸ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕ ಕಟ್ಟಡ ನಿರ್ಮಾಣದ ಭೂಮಿಪೂಜೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶಂಕುಸ್ಥಾಪನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಯೋಜನೆ ಮೂಲ ಮಾದರಿ ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಶಾಸಕರಾದ ತನ್ವೀರ್ ಸೇಠ್, ಮರಿತಿಬ್ಬೇಗೌಡ, ಎಸ್.ಎ.ರಾಮದಾಸ್, ಜಿ.ಟಿ. ದೇವೇಗೌಡ, ಸಾ.ರಾ. ಮಹೇಶ್, ಹೆಚ್.ಪಿ. ಮಂಜುನಾಥ್ ಇತರರು ಸ್ಥಳ: ನಾರಾಯಣ ಶಾಸ್ತ್ರಿ ರಸ್ತೆ, ಬೆಳಗ್ಗೆ 9ಕ್ಕೆ

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಸಂತ ಫಿಲೋಮಿನಾ ಕಾಲೇಜು, ನವಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ರಿಂದ

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಡಾ. ದೇ. ಜವರೇಗೌಡ ಅವರ ಜನ್ಮ ದಿನದ ಪ್ರಯುಕ್ತ ದೇಜಗೌ ಒಂದು ನೆನಪು ಕಾರ್ಯಕ್ರಮ, ಉದ್ಘಾಟನೆ : ಮಲ್ಲಿಕಾರ್ಜುನಸ್ವಾಮಿ ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯ ಎಂ. ಜವರಯ್ಯ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಭಾವಚಿತ್ರಕ್ಕೆ ಪುಷ್ಪಾರ್ಚನೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಮುಖ್ಯ ಅತಿಥಿಗಳು : ವಿದ್ಯಾಸಾಗರ ಕದಂಬ, ಉಯದಗಿರಿ ಕನ್ನಡ ಸಂಘದ ಕಾರ್ಯದರ್ಶಿ ಜಯಕುಮಾರ್, ಸ್ಥಳ: ಮಲ್ಲಿಕಾರ್ಜುನಸ್ವಾಮಿ ವಿದ್ಯಾಸಂಸ್ಥೆ ಉದಯಗಿರಿ, ಬೆಳಗ್ಗೆ 11ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಯುವಕರ ಭಕ್ತ ಮಂಡಳಿ :** 22ನೇ ವರ್ಷದ ಪೂಜಾ ಕಾರ್ಯಕ್ರಮ, ಅನ್ನಸಂತರ್ಪಣೆ, ಸ್ಥಳ: ಕಾವೇರಿ ಬಡಾವಣೆ, ಕುಂಬಾರಕೊಪ್ಪಲು, ಮಧ್ಯಾಹ್ನ 12ಕ್ಕೆ

■ **ಆಂದೋಲನ ದಿನಪತ್ರಿಕೆ :** ಆಂದೋಲನ 50 ಸಾರ್ಥಕ ಪಯಣ, ಉದ್ಘಾಟನೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ : ಆಂದೋಲನ ದಿನಪತ್ರಿಕೆ ಸಹ ಸಂಸ್ಥಾಪಕರಾದ ಶ್ರೀಮತಿ ನಿರ್ಮಲ ಕೋಟಿ, ಮುಖ್ಯ ಅತಿಥಿಗಳು : ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಹಿರಿಯ ಪತ್ರಕರ್ತ ಪಿ. ಸಾಯಿನಾಥ್, ಕನ್ನಡ ಚಲನಚಿತ್ರ ನಟ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ವಿಶೇಷ ಅಹ್ವಾನಿತರು : ಹಿರಿಯ ಸಾಹಿತಿ ದೇವನೂರ ಮಹಾದೇವ, ಪ್ರಗತಿಪರ ಹೋರಾಟಗಾರ ಪ. ಮಲ್ಲೇಶ್, ಸ್ಥಳ:ಘಟಿಕೋತ್ಸವ ಭವನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಹುಣಸೂರು ರಸ್ತೆ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಡಾ. ವೇದವ್ಯಾಸಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ'ದ ವಿಶೇಷ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ: 6.30ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಬುಧಕಾಲ ಹೊರೆಯಲ್ಲಿ ಅನುಜ್ಞಾ ಪೂರ್ವಕ ಕಳಶ ಕನ್ನಡಿ ತರುವುದು, ಸಂಜೆ 6ಕ್ಕೆ ಕಾಶಿಯಾತ್ರಾ ಮಹೋತ್ಸವ, ಸಂಜೆ 6.30 ರಿಂದ ಗಿರಿಜಾ ಕಲ್ಯಾಣ ಮಹೋತ್ಸವ, ಸ್ಥಳ: ಅರಮನೆ ಆವರಣದಲ್ಲಿರುವ ಕೋಟೆ ತ್ರಿನೇಶ್ವರ ದೇವಾಲಯ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಭದ್ರಾವತಿ ಆಕಾಶವಾಣಿ ಮತ್ತು ದೂರದರ್ಶನದ ಜನಪದ ಕಲಾವಿದರಾದ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಮಹಾರಾಜ್ ಲಕ್ಷ್ಮಣರಾವ್ ಘೋರಾತ ಮತ್ತು ತಂಡದವರಿಂದ ಶ್ರೀ ಅಂಬಾಭವಾನಿ ದೇವಿಯ ಮಹಾಗೊಂದಳಿ ಪೂಜೆ, ಸಂಜೆ 7.30ಕ್ಕೆ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕಾಂಗ್ರೆಸ್ ಮುಖಂಡ ಎಸ್.ಎಂ. ನವೀನ್ ಕುಮಾರ್, ಸ್ಥಳ:ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕುವೆಂಪುನಗರ.

ಮೈಸೂರು ಮಿತ್ರ

ರಾಜ್ಯದಲ್ಲಿ ರೈತ ಶಕ್ತಿಗೆ 400 ಕೋಟಿ ಅನುದಾನ

ಮೈಸೂರು ಜಿಪಂನಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಪ್ರಕಟ



ಮೈಸೂರಿನ ಜಿಪಂ ಸಭಾಂಗಣದಲ್ಲಿ 'ಮುಂಗಾರು ಬೆಳೆ ಸಮೀಕ್ಷೆ' ಮಾಹಿತಿವುಳ್ಳ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸಚಿವರಾದ ಎಸ್.ಟಿ.ಸೋಮಶೇಖರ್, ಬಿ.ಸಿ.ಪಾಟೀಲ್, ಶಾಸಕ ಜಿ.ಟಿ.ದೇವೇಗೌಡ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.5(ಆರ್‌ಕೆ)–ರಾಜ್ಯದಲ್ಲಿ ಕೃಷಿ ಉತ್ಪನ್ನ ಹೆಚ್ಚಿಸಲು 'ರೈತ ಶಕ್ತಿ' ಎಂಬ ಹೊಸ ಯೋಜನೆ ಜಾರಿಗೆ ತಂದಿದ್ದು, 400 ಕೋಟಿ ರೂ. ಅನುದಾನ ಕಲ್ಪಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರೈತರಿಗೆ ಕೃಷಿ ಯಂತ್ರೋಪಕರಣಗಳ ಬಳಕೆ ಪ್ರೋತ್ಸಾಹಿಸಿ ಇಂಧನದ ಮೇಲಿನ ವೆಚ್ಚ ಕಡಿಮೆ ಮಾಡಲು ಪ್ರತೀ ಎಕರೆಗೆ 250 ರೂ.ಗಳಂತೆ ಗರಿಷ್ಠ 5 ಎಕರೆ ಭೂಮಿಗೆ ಡಿಬಿಟಿ ಮೂಲಕ ಡೀಸೆಲ್ ಖರೀದಿಗೆ ಸಹಾಯಧನ ನೀಡುವ 'ರೈತ ಶಕ್ತಿ' ಯೋಜನೆ ಜಾರಿಗೊಳಿಸಿದ್ದು, 2022–23ನೇ ಸಾಲಿನಲ್ಲಿ 400 ಕೋಟಿ ರೂ. ಅನುದಾನ ನೀಡಲಾಗಿದೆ ಎಂದರು.

ರೈತ ಮಹಿಳೆಯರಿಗೆ ಕೃಷಿ ಪ್ರಶಸ್ತಿ: ರೈತ ಮಹಿಳೆಯರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಪ್ರತ್ಯೇಕ ಕೃಷಿ ಮತ್ತು 'ಪಂಡಿತ ಪ್ರಶಸ್ತಿ' ನೀಡಲು ತೀರ್ಮಾನಿಸಲಾಗಿದ್ದು, ರೈತರ ಆದಾಯ ಹೆಚ್ಚಿಸಲು ಸೆಕೆಂಡರಿ ಕೃಷಿ ನಿರ್ದೇಶನಾಲಯ ಸ್ಥಾಪಿಸಿ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶ ಕಲ್ಪಿಸಲು ಬಜೆಟ್‌ನಲ್ಲಿ 5 ಕೋಟಿ ರೂ. ಅನುದಾನ ಒದಗಿಸಲಾಗಿದೆ ಎಂದು ಹೇಳಿದರು.

ನೈಸರ್ಗಿಕ ಕೃಷಿ ಮೂಲಕ ಸಾವಯವ ಉತ್ಪನ್ನಕ್ಕೆ 10 ಕೋಟಿ ರೂ., ಕೃಷಿ ಸಂಜೀವಿನಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಪ್ರತೀ ಜಿಲ್ಲೆಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, 100 ಕೃಷಿ ಸಂಜೀವಿನಿ ವಾಹನಗಳನ್ನು ಲೋಕಾರ್ಪಣೆ ಮಾಡಲಾಗಿದೆ ಎಂದ ಅವರು, ಕಳಪೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಮಾರಾಟ ಮಾಡುವ ಮೂಲಕ ರೈತರನ್ನು ವಂಚಿಸುವುದನ್ನು ನಿಗ್ರಹಿಸಲು ಮೈಸೂರು ಮತ್ತು ಗುಲ್ಬರ್ಗಾದಲ್ಲಿ ಹೆಚ್ಚುವರಿ ಕೃಷಿ ಜಾಗೃತಿ ಕೋಶ (Agriculture Vigillance Cell)ಗಳನ್ನು ತೆರೆದಿರುವುದಾಗಿಯೂ ಸಚಿವರು ತಿಳಿಸಿದರು.



ರೈತರಿಗೆ ಕಳಪೆ ಬಿತ್ತನೆ ಬೀಜ ಪೂರೈಸುವವರ ವಿರುದ್ಧ ಒಟ್ಟು 276 ಪ್ರಕರಣ ದಾಖಲಿಸಲಾಗಿ 416 ಪರವಾನಗಿಗಳನ್ನು ರದ್ದುಗೊಳಿಸಲಾಗಿದೆಯಲ್ಲದೆ, 55 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ. ಆ ರೀತಿ ವಂಚನೆ ಮಾಡುತ್ತಿರುವುದು ಕಂಡು ಬಂದಲ್ಲಿ ಕೃಷಿ ಜಾಗೃತ ಕೋಶಕ್ಕೆ ಮಾಹಿತಿ ನೀಡುವಂತೆ ರೈತರಿಗೆ ಸಲಹೆ ನೀಡಿದರು.

ರಸಗೊಬ್ಬರ, ಬಿತ್ತನೆ ಬೀಜ, ಕೃಷಿ ಯಂತ್ರೋಪಕರಣಗಳು, ರಸಗೊಬ್ಬರಗಳ ಸಬ್ಸಿಡಿಯನ್ನು ಮುಂದುವರಿಸಲಾಗಿದ್ದು, ಸ್ಪ್ರಿಂಕ್ಲರ್‌ಗಳಿಗೆ ಶೇ.90ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಕೃಷಿ ಚಟುವಟಿಕೆಗಳಿಗೆ ಸರ್ಕಾರ ಎಲ್ಲ ರೀತಿಯ ನೆರವು ನೀಡುತ್ತಿದ್ದು, ರೈತರು ಸೌಲಭ್ಯಗಳನ್ನು ಬಳಸಿಕೊಂಡು ಉತ್ಪನ್ನ ಹೆಚ್ಚಿಸಿ ಲಾಭ ಗಳಿಸುವಂತೆಯೂ ಸಲಹೆ ನೀಡಿದ್ದಾರೆ. 2020–21ನೇ ಸಾಲಿನಲ್ಲಿ 160.28 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ 144.67 ಲಕ್ಷ ಟನ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಮುಂಗಾರು ಹಂಗಾಮಿನಲ್ಲಿ 82.67 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆ ಗುರಿ ಇದ್ದು, ಈವರೆಗೆ 36.47 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಬಿತ್ತನೆ ಮಾಡಲಾಗಿದೆ ಎಂದರು.

2022–23ನೇ ಸಾಲಿನ ಮುಂಗಾರು ಹಂಗಾಮಿಗೆ 26.76 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇದ್ದು, ಜುಲೈ 4ರವರೆಗೆ 11.91 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜು ಮಾಡಲಾಗಿದೆ. ಖಾಸಗಿ ಮಾರಾಟಗಾರರು ಹಾಗೂ ಸಹಕಾರ ಸಂಘಗಳಲ್ಲಿ ಒಟ್ಟು 6.41 ಲಕ್ಷ ಮೆಟ್ರಿಕ್ ಟನ್ ದಾಸ್ತಾನಿದ್ದು, ರಸಗೊಬ್ಬರದ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡ, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ, ಆಯುಕ್ತ ವಿ.ಶರತ್, ಜಲಾನಯನ ಪ್ರದೇಶ ಆಯುಕ್ತ ಡಾ. ಎಂ.ವಿ.ವೆಂಕಟೇಶ್, ನಿರ್ದೇಶಕ ಶ್ರೀನಿವಾಸ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಕೃಷಿ ಇಲಾಖೆ ಜಂಟಿ, ಉಪ ಹಾಗೂ ಸಹಾಯಕ ನಿರ್ದೇಶಕರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಿದ್ದರು.

ಮೀನಿನ ಹೆಜ್ಜೆ, ಜಿಟಿಡಿ ನಡೆ ಕಂಡುಹಿಡಿಯಲಾಗದು

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಸ್ಯ ಚಟಾಕಿ

ಮೈಸೂರು: ಸಮುದ್ರದಲ್ಲಿ ಮೀನಿನ ಹೆಜ್ಜೆ, ಜಿ.ಟಿ.ದೇವೇಗೌಡರ ನಡೆ ಎರಡನ್ನೂ ಕಂಡುಹಿಡಿಯಲಾಗದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಇಂದಿಲ್ಲಿ ಹಾಸ್ಯ ಚಟಾಕಿ ಹಾರಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ನಡೆಸಿದ ಸುದ್ದಿಗೋಷ್ಠಿಯಲ್ಲಿ 'ಇನ್ನೆರಡು ತಿಂಗಳಲ್ಲಿ ತಮ್ಮ ರಾಜಕೀಯ ನಡೆಯನ್ನು ನಿರ್ಧರಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳುತ್ತಿದ್ದಾರೆ. ಅವರನ್ನು ನಿಮ್ಮ ಪಕ್ಷಕ್ಕೇನಾದರೂ ಕರೆದುಕೊಳ್ಳುತ್ತೀರಾ' ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸೋಮಶೇಖರ್, 'ಸಮುದ್ರದಲ್ಲಿ ಮೀನಿನ ಹೆಜ್ಜೆ ಮತ್ತು ಜಿ.ಟಿ.ದೇವೇಗೌಡರ ನಡೆಯನ್ನು ಪತ್ತೆ ಮಾಡಲು ಸಾಧ್ಯವಿಲ್ಲ' ಎಂದು ಹಾಸ್ಯಭರಿತವಾಗಿ ನುಡಿದರು.

ಹಾಗಾದರೆ ಜಿಟಿಡಿ ನಡೆ ಬಗ್ಗೆ ನಿಮಗೆ ಸುಳಿವು ದೊರೆತಿದೆಯೇ ಎಂಬ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಓ... ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲ, ಅವರ ಬಗ್ಗೆ ಸಂಶೋಧನೆಯನ್ನೇ ಮಾಡಿದ್ದೇನೆ. ಈಗ ಆ ವಿಷಯ ಬಿಡಿ. ಕೃಷಿ ಸಚಿವರ ಸುದ್ದಿಗೋಷ್ಠಿ ವಿಚಾರವನ್ನು ಹೈಲೈಟ್ ಮಾಡಿ' ಎಂದು ಮಾರ್ಮಿಕವಾಗಿ ನುಡಿದರು. ಆ ವೇಳೆ ಅಲ್ಲಿಯೇ ಇದ್ದ ಜಿ.ಟಿ.ದೇವೇಗೌಡರು ಯಾವುದೇ ಪ್ರತಿಕ್ರಿಯೆ ನೀಡದೇ ನಗು–ನಗುತ್ತಲೇ ಇಲ್ಲಿ ವಿಷಯಾಂತರ ವಾಗೋದು ಬೇಡ ಎಂದಷ್ಟೇ ಹೇಳಿ ಸುಮ್ಮನಾದರು. ಮುಂಬೈ ಟೀಂನಂತೆ ಮತ್ತೊಂದು ತಂಡ ಕಟ್ಟುತ್ತೀರಾ ಎಂಬ ಸುದ್ದಿಗಾರರ ಪ್ರಶ್ನೆಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು, ಈಗ ಅದರ ಅಗತ್ಯವಿಲ್ಲ ಎಂದು ನಗು–ನಗುತ್ತಲೇ ಉತ್ತರಿಸಿದರು.

ಬೆಳೆ ಸಮೀಕ್ಷೆಗೆ ಪ್ರತೀ ಗ್ರಾಪಂಗೆ ಒಬ್ಬರಂತೆ 6000 ಮಂದಿ ನೇಮಕ: ಬಿ.ಸಿ.ಪಾಟೀಲ್

ಮೈಸೂರು: ರಾಜ್ಯದಲ್ಲಿ ಬೆಳೆ ಸಮೀಕ್ಷೆಗಾಗಿ ಪ್ರತೀ ಗ್ರಾಮ ಪಂಚಾಯ್ತಿಗೊಬ್ಬರಂತೆ 6000 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ರೈತ ತನ್ನ ಭೂಮಿಯಲ್ಲಿ ಬೆಳೆದ ಬೆಳೆಯ ನಿಖರತೆ ಅರಿಯಲು ಹಾಗೂ ನಷ್ಟ ಉಂಟಾದಾಗ ವಿಮಾ ಪರಿಹಾರ ಪಡೆಯಲು ಅನುಕೂಲವಾಗುವಂತೆ ಅಧಿಕಾರಿಗಳು ಪರಿಣಾಮಕಾರಿಯಾಗಿ ಸಮೀಕ್ಷೆ ನಡೆಸದಿರುವುದರಿಂದ ಹಾಗೂ ಸಿಬ್ಬಂದಿಗಳ ಕೊರತೆ ಇರುವ ಕಾರಣ, ಪ್ರತೀ ಗ್ರಾಪಂ ವ್ಯಾಪ್ತಿಗೊಬ್ಬರಂತೆ ಕೃಷಿ ವಿಷಯದಲ್ಲಿ ಡಿಪ್ಲೊಮಾ ಸರ್ಟಿಫಿಕೇಟ್ ಕೋರ್ಸ್ ಮಾಡಿರುವ ಯುವಕರನ್ನು 1 ವರ್ಷದ ಅವಧಿಗೆ ನೇಮಿಸಿಕೊಳ್ಳಲು ಇಲಾಖೆಯು ನಿರ್ಧರಿಸಿದೆ ಎಂದರು.

ರಾಜ್ಯದಲ್ಲಿ 6000 ಗ್ರಾಮ ಪಂಚಾಯ್ತಿಗಳಿದ್ದು, ಅಲ್ಲಿಗೆ ಒಬ್ಬರಂತೆ ನಿಯೋಜಿಸಿದಲ್ಲಿ 3 ಅಥವಾ 4 ತಿಂಗಳಲ್ಲಿ ಆ ಯುವಕನ ವ್ಯಾಪ್ತಿಗೆ ಬರುವ ಕೃಷಿ ಭೂಮಿಯ ಬೆಳೆ ಸಮೀಕ್ಷೆ ನಡೆಸಿ ಫೋಟೋ ಸಮೇತ ಸಮಗ್ರ ವರದಿ ನೀಡುತ್ತಾನೆ. ಉಳಿದ ಅವಧಿಯಲ್ಲಿ ಅವರನ್ನು ಇತರ ಕೆಲಸಗಳಿಗೂ ಬಳಸಿಕೊಳ್ಳಬಹುದಾಗಿದೆ ಎಂದು ತಾವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು.

ತಾತ್ಕಾಲಿಕವಾಗಿ ನೇಮಕಗೊಂಡವರು ಖಾಯಮಾತಿಗೆ ಒತ್ತಾಯಿಸಿ ಕೋರ್ಟ್ ಮೆಟ್ಟಿಲೇರುತ್ತಾರೆ. ಅಲ್ಲದೇ, ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆ ಎಂಬ ನೆಪವೊಡ್ಡಿ ಹಣಕಾಸು ಇಲಾಖೆಯವರು ಆಸಕ್ತಿ ತೋರುತ್ತಿಲ್ಲ. ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಮುಖ್ಯಮಂತ್ರಿಗಳ ಗಮನ ಸೆಳೆದು 6000 ಮಂದಿ ಬೆಳೆ ಸಮೀಕ್ಷೆಗಾರರ ನೇಮಿಸಿಕೊಳ್ಳಲು ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದರು.

ರೈತರಿಂದಲೇ ಮಾಡಿಸಿ: ಕಳೆದ ಎರಡು ವರ್ಷಗಳ ಹಿಂದೆಯೇ ಆರಂಭವಾದ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಅಧಿಕಾರಿಗಳಿಂದ ಸಾಧ್ಯವಾಗಿಲ್ಲವಾದ ಕಾರಣ ಡಿಪ್ಲೊಮಾ ಹೋಲ್ಡರ್ ನೇಮಕವಾಗುವವರೆಗೆ ರೈತರಿಂದಲೇ ಜಮೀನಿನ ಬೆಳೆ ಸಮೀಕ್ಷೆ ಮಾಡಿಸಿ ಆನ್‌ಲೈನ್‌ನಲ್ಲಿ ಮಾಹಿತಿ ಅಪ್‌ಲೋಡ್ ಮಾಡಿ ಎಂದು ಕೃಷಿ ಸಚಿವರು ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕೊರತೆ ಇಲ್ಲ, ಆತಂಕ ಬೇಡ: ರಾಜ್ಯದಲ್ಲಿ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಕೊರತೆ ಇಲ್ಲ. ಯೂರಿಯಾ ಡಿಎಪಿಯಂತಹ ರಸಗೊಬ್ಬರವನ್ನು ದಾಸ್ತಾನು ಮಾಡಿ ಕೆಲವರು ಕೃತಕ ಕೊರತೆ ಸೃಷ್ಟಿಸುತ್ತಿರುವುದರಿಂದ ರೈತರು ಆತಂಕಕ್ಕೀಡಾಗಿ ತಮ್ಮ ಮನೆಯ ಬಂಗಾರ ಅಡವಿಟ್ಟು ರಸಗೊಬ್ಬರ ಖರೀದಿಸುತ್ತಿರುವುದು ಕಂಡುಬರುತ್ತಿದೆ ಎಂದ ಬಿ.ಸಿ. ಪಾಟೀಲ್, ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನಿದೆ ಎಂದು ಪ್ರಚಾರ ಮಾಡಿ ಸಕಾಲದಲ್ಲಿ ರೈತರಿಗೆ ಪೂರೈಸಿ ಎಂದು ಅಧಿಕಾರಿಗಳಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಸೂಚನೆ ನೀಡಿದರು.

441 ಕೋಟಿ ರೂ. ಬೆಳೆ ವಿಮೆ: ರಾಜ್ಯದಲ್ಲಿ 441 ಕೋಟಿ ರೂ.ಗಳ ಬೆಳೆ ವಿಮೆ ಹಣವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ. ಬೆಳೆ ವಿಮೆ ಕಂಪನಿಯ ಅಧಿಕಾರಿಯೊಬ್ಬರನ್ನು ತಾಲೂಕು ಮತ್ತು ಜಿಲ್ಲಾ ಮಟ್ಟದ ಕೃಷಿ ಇಲಾಖೆ ಕಚೇರಿಯಲ್ಲಿ ಹಾಜರಿರುವಂತೆ ಹೇಳಿ. ಅವರು ಒಂದು ಬೋರ್ಡ್ ಹಾಕಿಕೊಂಡು ಕುಳಿತಿದ್ದರೆ, ರೈತರು ತಮ್ಮ ಬೆಳೆ ವಿಮೆ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಚಿವರು ಅಧಿಕಾರಿಗಳಿಗೆ ಸಲಹೆ ನೀಡಿದರು.

ತಂಬಾಕಿಗೆ ಪರ್ಯಾಯ ಬೆಳೆ

ತಂಬಾಕು ಬೆಳೆಯನ್ನು ಸಂಪೂರ್ಣ ಸ್ಥಗಿತಗೊಳಿಸಿ ಅತೀ ಹೆಚ್ಚು ಆದಾಯ ತರುವ ವಾಣಿಜ್ಯ ಬೆಳೆ ಬೆಳೆಯಲು ರೈತರ ಮನವೊಲಿಸಬೇಕು. ತಂಬಾಕಿನಿಂದಾಗುವ ದುಷ್ಪರಿಣಾಮಗಳು, ಆ ಬೆಳೆಗೆ ದುಬಾರಿ ವೆಚ್ಚ, ಶ್ರಮ, ನಷ್ಟವೂ ಹೆಚ್ಚಾಗಿರುವುದರಿಂದ ಪರ್ಯಾಯವಾಗಿ ತೋಟಗಾರಿಕಾ ಬೆಳೆ, ತೆಂಗು, ತರಕಾರಿ, ಬಾಳೆ, ಸೋಯಾದಂತಹ ಲಾಭದಾಯಕ ಬೆಳೆಗೆ ಪ್ರೋತ್ಸಾಹ ನೀಡುವಂತೆಯೂ ಸಚಿವ ಬಿ.ಸಿ.ಪಾಟೀಲ್ ಅಧಿಕಾರಿಗಳಿಗೆ ಸಲಹೆ ನೀಡಿದರು. ಈ ನಿಟ್ಟಿನಲ್ಲಿ ತಾವು ಪ್ರಯತ್ನಿಸುತ್ತಿರುವುದರಿಂದ ಮೈಸೂರು ಜಿಲ್ಲೆಯಲ್ಲಿ ಬೆಳೆಯುತ್ತಿದ್ದ ತಂಬಾಕು ಬೆಳೆಯ ಭೂಮಿಯ ಪ್ರಮಾಣ ಹಂತ ಹಂತವಾಗಿ ಕಡಿಮೆಯಾಗುತ್ತಿದ್ದು, ಈಗಾಗಲೇ 8ರಿಂದ 10 ಎಕರೆ ಪ್ರದೇಶದ ರೈತರು ತಂಬಾಕು ತ್ಯಜಿಸಿ ಬೇರೆ ಬೆಳೆ ಬಿತ್ತನೆ ಮಾಡಿದ್ದಾರೆ ಎಂದು ಕೃಷಿ ಅಧಿಕಾರಿಗಳು ಮಾಹಿತಿ ನೀಡಿದರು.

ಮುಂದಿನ 5 ದಿನ ಕೊಡಗಲ್ಲಿ ಭಾರೀ ಮಳೆ

ಮೈಸೂರು, ಮಂಡ್ಯ, ಚಾ.ನಗರದಲ್ಲಿ ತುಂತುರು ಮಳೆ

ಮೈಸೂರು,ಜು.5(ಆರ್‌ಕೆಬಿ)– ಭಾರತೀಯ ಹವಾಮಾನ ಮುನ್ಸೂಚನೆ ಪ್ರಕಾರ ಜು.6ರಿಂದ 10ರವರೆಗೆ ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ತುಂತುರು ಮಳೆ ಬೀಳಲಿದೆ.

ಕೊಡಗು ಜಿಲ್ಲೆಯಲ್ಲಿ ಜು.6ರಂದು 62 ಮಿ.ಮೀ., 7ರಂದು 16, 8ರಂದು 15, 9ರಂದು 17 ಮತ್ತು 10ರಂದು 15 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ.

ಈ ಐದು ದಿನಗಳ ಅವಧಿಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟು 21 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 16 ಮಿ.ಮೀ. ಮಳೆಯಾಗಲಿದೆ. ಈ ಐದು ದಿನಗಳ ಅವಧಿಯಲ್ಲಿ ಕೊಡಗಿನಲ್ಲಿ ಗರಿಷ್ಠ 21 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಇರಲಿದೆ. ಮೈಸೂರು, ಮಂಡ್ಯ, ಚಾಮರಾಜ ನಗರ ಜಿಲ್ಲೆಗಳಲ್ಲಿ ಗರಿಷ್ಠ 28–29 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಜು.11ರಂದು ಇನ್ಶೂರೆನ್ಸ್ ಕಂಪನಿ ಎದುರು ಪ್ರತಿಭಟನೆ

ಮೈಸೂರು,ಜು.5(ಪಿಎಂ)– ವಿಮೆ ಸಂಪೂರ್ಣ ಚಾಲ್ತಿಯಲ್ಲಿದ್ದರೂ ತಮ್ಮ ಕಾರು ಅಪಘಾತಕ್ಕೀಡಾದ ಸಂಬಂಧ ಇನ್ಶೂರೆನ್ಸ್ ಕ್ಲೈಮ್‌ಗೆ ಇನ್ಶೂರೆನ್ಸ್ ಕಂಪನಿ ವಿನಾಕಾರಣ ನಿರಾಕರಿಸುತ್ತಿದೆ ಎಂದು ಆರೋಪಿಸಿದ ಪಿ.ರೋಹಿತ್, ಇದನ್ನು ಖಂಡಿಸಿ ಜು.11ರಂದು ಕಂಪನಿಯ ಮೈಸೂರಿನ ಕಚೇರಿ ಎದುರು ಸಾಮೂಹಿಕ ನಾಯಕತ್ವದ ರೈತ ಸಂಘ, ದಲಿತ ಸಂಘರ್ಷ ಸಮಿತಿ ಬೆಂಬಲದೊಂದಿಗೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣದ ಎದುರಿರುವ ಕಂಪನಿಯ ಕಚೇರಿ ಎದುರು ಪ್ರತಿ ಭಟನೆ ನಡೆಸಲಾಗುವುದು. ಇನ್ಶೂರೆನ್ಸ್ ಚಾಲ್ತಿಯಲ್ಲಿದ್ದರೂ ಕ್ಲೈಮ್‌ಗೆ ಅವಕಾಶ ನೀಡುತ್ತಿಲ್ಲ. ಆ ಮೂಲಕ ನನಗೆ 16 ಲಕ್ಷ ರೂ. ವಂಚಿಸಲು ಯತ್ನಿಸಲಾಗುತ್ತಿದೆ ಎಂದು ಆರೋಪಿಸಿದರು. ಚೇತನ್, ಲಕ್ಷ್ಮೀನಾರಾಯಣ ಗೋಷ್ಠಿಯಲ್ಲಿದ್ದರು.

ಕಾಳಸಂತೆಕೋರರ ಮಟ್ಟ ಹಾಕಿ...

- ವಂಚನೆ ಪ್ರಕರಣ ದಾಖಲಿಸಲು ಕೃಷಿ ಸಚಿವ ಬಿ.ಸಿ.ಪಾಟೀಲ್ ಸೂಚನೆ
- ನಾಗನಹಳ್ಳಿಯಲ್ಲಿ ಜಾಗೃತ ಕೋಶದ ವಿಭಾಗೀಯ ಕಚೇರಿ ಉದ್ಘಾಟನೆ



ಸ್ವತಃ ಕೃಷಿಕರೇ ಆಗಿದ್ದ ಸಚಿವ ಬಿ.ಸಿ.ಪಾಟೀಲ್ ನಡೆಸಿದ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮ ಯಶಸ್ವಿಯಾಗಿದೆ. ರೈತರಿಗೆ ಏನೇನು ಸಹಾಯ, ಸಹಕಾರ ಮಾಡಬಹುದು ಎಂದು ಸಿಎಂ ಜೊತೆ ಮಾತನಾಡಿ ಪ್ರಾಮಾಣಿಕವಾಗಿ ಕೃಷಿಕರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ.

–ಎಸ್.ಟಿ.ಸೋಮಶೇಖರ್

ಮೈಸೂರು, ಜು.5(ಆರ್‌ಕೆಬಿ)– ರೈತ ಸಮುದಾಯಕ್ಕೆ ಕಂಟಕವಾಗಿರುವ ಕಾಳಸಂತೆಕೋರರ ವಿರುದ್ಧ ಕಡ್ಡಾಯವಾಗಿ ವಂಚನೆ ಪ್ರಕರಣ ದಾಖಲಿಸುವಂತೆ ಜಾಗೃತ ಕೋಶದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಐಪಿಸಿ 420ರಡಿ ವಂಚನೆ ಪ್ರಕರಣ ದಾಖಲಿಸಿ ಕಾಳಸಂತೆಕೋರರ ಹೆಡೆಮುರಿ ಕಟ್ಟಲು ಅಧಿಕಾರಿಗಳಿಗೆ ಪೂರ್ಣ ಅಧಿಕಾರ ನೀಡಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಜಂಟಿಯಾಗಿ ಮಂಗಳವಾರ ಆಯೋಜಿಸಿದ್ದ ಜಾಗೃತ ಕೋಶದ ವಿಭಾಗೀಯ ಕಚೇರಿಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ರೈತರಿಗೆ ತೊಂದರೆ ನೀಡುವ ಕಾಳಸಂತೆಕೋರರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವ ಉದ್ದೇಶದಿಂದಲೇ ಜಾಗೃತ ಕೋಶ ರಚಿಸಿದ್ದು, ಮೈಸೂರು ಮತ್ತು ಕಲಬುರ್ಗಿಯಲ್ಲಿ ವಿಭಾಗೀಯ ಕಚೇರಿಗಳನ್ನು ತೆರೆಯಲಾಗಿದೆ. ಹೀಗಾಗಿ ಜಾಗೃತ ಕೋಶದ ಅಧಿಕಾರಿಗಳು ರೈತರಿಗೆ ತೊಂದರೆ ನೀಡುವ ಗೊಬ್ಬರ, ಕ್ರಿಮಿನಾಶಕದ ಅಂಗಡಿಗಳ ಮಾಲೀಕರಿಗೆ ಸಿಂಹಸ್ವಪ್ನವಾಗಿದ್ದು, ಅಂತಹ ಕಾಳಸಂತೆಕೋರರ ಹೆಡೆಮುರಿ ಕಟ್ಟಿದ್ದಾರೆ ಎಂದರು.

ಎರಡೂವರೆ ವರ್ಷಗಳಲ್ಲಿ 27 ಕೋಟಿಯ ಕಳಪೆ ಬಿತ್ತನೆ ಬೀಜಗಳು, ಕೀಟನಾಶಕಗಳನ್ನು ವಶಪಡಿಸಿಕೊಂಡು ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಕೀಟನಾಶಕ ಅಂಶಗಳು ಕಂಡುಬಂದ ಜೈವಿಕ ಉತ್ಪನ್ನಗಳ ಕುರಿತು 282 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ. ಜಾಗೃತ ಕೋಶದಿಂದ ದಾಖಲಿಸಲ್ಪಟ್ಟ 26 ಪ್ರಕರಣಗಳಲ್ಲಿ ನ್ಯಾಯಾಲಯ 15.55 ಲಕ್ಷಗಳ ದಂಡವನ್ನು ಮಾರಾಟಗಾರರು ಮತ್ತು ಉತ್ಪಾದಕರಿಗೆ ವಿಧಿಸಲಾಗಿದೆ. ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳ ಆದೇಶ ಮತ್ತು ಕಾಯ್ದೆಗಳ ಉಲ್ಲಂಘನೆ ಮಾಡಿದ ಕೃಷಿ ಪರಿಕರಗಳ ಮಾರಾಟಗಾರರ ಒಟ್ಟು 215 ಪರವಾನಗಿಗಳನ್ನು ಅಮಾನತು ಮಾಡಲಾಗಿದೆ. 22 ಪರವಾನಗಿಗಳನ್ನು ರದ್ದುಪಡಿಸಲಾಗಿದೆ ಎಂದರು.

ಕಾಳಸಂತೆಕೋರರೊಂದಿಗೆ ಯಾವುದೇ ಕಾರಣಕ್ಕೂ ರಾಜೀ ಮಾಡಿಕೊಳ್ಳಬಾರದು. ಅದು ತಾಯಿಗೆ ದ್ರೋಹ ಮಾಡಿದಂತಾಗುತ್ತದೆ. ಹಾಗಾಗಿ ಉತ್ತಮ ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ವಾರ್ಷಿಕ ಸುಮಾರು 22 ಸಾವಿರ ಕೋಟಿ ರೂ. ಕೃಷಿ ಪರಿಕರಗಳು, ಬಿತ್ತನೆ ಬೀಜಗಳು, ಕೀಟನಾಶಕಗಳ ವಹಿವಾಟು ನಡೆಯುತ್ತದೆ. ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳು ದೊರೆಯದೆ ಹೋದರೆ ರೈತರ ಒಂದು ವರ್ಷದ ಶ್ರಮದ ಜೊತೆಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ದೇಶದ ಬೆನ್ನೆಲುಬಾದ ಕೃಷಿಕರಿಗೆ ಯಾರೂ ಮೋಸ ಮಾಡಬಾರದು ಎಂದು ಮನವಿ ಮಾಡಿದರು.

ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಹೆಚ್.ಡಿ.ಕೋಟೆ ಭಾಗದಲ್ಲಿ ಕಳಪೆ ಹತ್ತಿ ಬೀಜದಿಂದ ರೈತರು ತೊಂದರೆಗೊಳಗಾಗಿದ್ದರು. ಮೈಸೂರು ಜಿಲ್ಲೆಯಲ್ಲಿ ಕಳಪೆ ಬಿತ್ತನೆ ಬೀಜ ವಿರೋಧಿಸಿ ಪ್ರತಿಭಟನೆ ನಡೆಯುತ್ತಿತ್ತು. ಇಂದು ಅಂತಹ ಯಾವುದೇ ದೂರುಗಳಿಲ್ಲ. ಉತ್ತಮ ಗುಣಮಟ್ಟದ ಬಿತ್ತನೆ ಬೀಜ ನೀಡಲಾಗುತ್ತಿದೆ. ಇದಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಕಾರ್ಯದಕ್ಷತೆ ಕಾರಣ ಎಂದರು.

ಕೃಷಿ ಇಲಾಖೆಯ ಜಾಗೃತ ಕೋಶದ ವಿಭಾಗೀಯ ಕಚೇರಿಯನ್ನು ತಮ್ಮ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಅರಂಭಿಸಿದ್ದಕ್ಕೆ ಸಚಿವರನ್ನು ಅಭಿನಂದಿಸಿದ ಅವರು, ದೇಶದ ಕೃಷಿ ಕ್ಷೇತ್ರದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ನಮ್ಮಲ್ಲಿ ಎಷ್ಟು ಎಕರೆ ಜಮೀನಿದೆ ಎಂಬುದು ಮುಖ್ಯವಲ್ಲ. ಅಷ್ಟರಲ್ಲಿಯೇ ಎಷ್ಟು ಬೆಳೆ ಬೆಳೆಯಬೇಕು ಎಂಬುದು ಮುಖ್ಯ. ಒಳ್ಳೆಯ ಬಿತ್ತನೆ ಬೀಜಗಳನ್ನು ರೈತರೇ ಬೆಳೆದುಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಶಿವಯೋಗಿ ಸಿ.ಕಳಸದ, ಇಲಾಖೆ ಆಯುಕ್ತ ಬಿ.ಶರತ್, ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಡಾ.ಬಿ.ವೈ.ಶ್ರೀನಿವಾಸ್, ಕೃಷಿ ಇಲಾಖೆ ನಿರ್ದೇಶಕ ಡಾ.ಸಿ.ಎನ್.ನಂದಿನಿ ಕುಮಾರಿ, ಜಾಗೃತ ಕೋಶದ ಅಪರ ಕೃಷಿ ನಿರ್ದೇಶಕ ಡಾ. ಕೆ.ಜಿ.ಅನೂಪ್, ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಎನ್.ಶಿವಲಿಂಗಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾಗೌಡ, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪ ಗೌಡ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ಅಧ್ಯಕ್ಷ ಅಪ್ಪಣ್ಣ, ಜಿ.ಪಂ.ಮಾಜಿ ಸದಸ್ಯ ದಿನೇಶ್, ನಾಗನಹಳ್ಳಿ ಗ್ರಾಪಂ ಅಧ್ಯಕ್ಷ ಎನ್.ಎಂ.ಭಾಸ್ಕರ್, ಉಪಾಧ್ಯಕ್ಷೆ ನಾಗರತ್ನ ಇನ್ನಿತರರು ಉಪಸ್ಥಿತರಿದ್ದರು.

ಭತ್ತದ ಬಿತ್ತನೆ ಬೀಜ ಪೂರೈಸಲು ಸಚಿವರಲ್ಲಿ ಜಿಟಿಡಿ ಮನವಿ



ಮೈಸೂರು: ತಡವಾಗಿರುವ ಮುಂಗಾರು ಹಂಗಾಮಿಗೆ ಅವಶ್ಯಕತೆ ಇರುವ ಬಿತ್ತನೆ ಭತ್ತದ ಬೀಜ ಪೂರೈಸುವಂತೆ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರಲ್ಲಿ ಮನವಿ ಮಾಡಿದರು.

ತಾಲೂಕಿನಲ್ಲಿ ತಡವಾದ ಮುಂಗಾರು ಹಂಗಾಮಿಗೆ ಭತ್ತದ ಬಿತ್ತನೆ ಬೀಜ ಒದಗಿಸುವಂತೆ ರೈತರು ಹಲವಾರು ಬಾರಿ ನನಗೆ ಮನವಿ ಮಾಡಿದ್ದಾರೆ. ಆದ್ದರಿಂದ ಕೃಷಿ ಸಚಿವರು ಮೈಸೂರಿನಲ್ಲಿ ನನ್ನ ಕ್ಷೇತ್ರಕ್ಕೆ ಬಂದಿರುವುದರಿಂದ ಅವರಲ್ಲಿ ಸ್ಥಳದಲ್ಲಿಯೇ ಮನವಿ ಮಾಡಿದ್ದಾಗಿ ತಿಳಿಸಿದರು. ರೈತರ ಬೇಡಿಕೆಗೆ ಅನುಗುಣವಾಗಿ ಚಾಮುಂಡೇಶ್ವರಿ ಕ್ಷೇತ್ರದ ರೈತರಿಗೆ ಸುಮಾರು 870 ಕ್ವಿಂಟಾಲ್ ಬಿತ್ತನೆ ಬೀಜ ಒದಗಿಸುವಂತೆ ಕೋರಿದರು.

ರೈತರಿಗೆ ಅವಶ್ಯಕತೆ ಇರುವ JR-64, Jyothi, MTU-1001, MTU-1010, Jaya, JGL-1798, RNR-15048, Thank, BR-2655, DRH-836 ಭತ್ತದ ಬಿತ್ತನೆ ಬೀಜವನ್ನು ಒದಗಿಸುವಂತೆ ಕೋರಿರುವುದಾಗಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್, ನಾಗನಗಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಭಾಸ್ಕರ್ ಹಾಗೂ ಹಲವಾರು ಮುಖಂಡರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಇವರು : "ಇದು ಟ್ರಾವೆಲಿಂಗ್ ಸೂಟ್"
ಅವರು : "ಟ್ರಾವೆಲಿಂಗ್ ಹೇಗೆ?"
ಇವರು : "ಮೊದಲು ಇದನ್ನು ಧರಿಸಿದ್ದು ನನ್ನ ತಾತ. ಆಮೇಲೆ ನನ್ನ ತಂದೆ. ಈಗ ನಾನು"

ಮೈಸೂರು ಮಿತ್ರ

ಬುಧವಾರ, 6 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆಯಿದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೆ ತಾನೇ ಒದಗುತ್ತದೆ.

–ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಳಿಗೆ ಚೆಂಬು ಹೋದ ಮೇಲೆ ಮಳಿಗೆ ಬಾಗಿಲು ಮುಚ್ಚಿದ ಹಾಗೆ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಬಲಿಪಶುಗಳು...!?



ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಅವರನ್ನು ಕಳೆದ ಮೇ ತಿಂಗಳ 27 ರಂದು "ಕ್ರೂಸಿ ಹಡಗು ಮಾದಕ ವಸ್ತು ದಾಳಿ'' (Cruise ship drug bust) ಪ್ರಕರಣದಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಖುಲಾಸೆಗೊಳಿಸಲಾಯಿತು.

ಈ ತೀರ್ಪು ಹೊರಬಿದ್ದ ತಕ್ಷಣವೇ ಚಿತ್ರ ನಿರ್ಮಾಪಕ ಸಂಜಯ್ ಗುಪ್ತ "ಆರ್ಯನ್ ಖಾನ್ ಈ ಪ್ರಕರಣದಲ್ಲಿ ಆಗಲೂ ಹಾಗೂ ಈಗಲೂ ಅಮಾಯಕ ಎಂದು ಬಾಂಬೆ ಹೈಕೋರ್ಟ್ ಹೇಳುತ್ತದೆ. ಆದರೆ ಆರ್ಯನ್ ಖಾನ್ ಮತ್ತು ಅವರ ಕುಟುಂಬ ಅನುಭವಿಸಿದ ಯಾತನೆಗೆ ಯಾರು ಪರಿಹಾರ ನೀಡುತ್ತಾರೆ" ಎಂದು ಟ್ವೀಟ್ ಮಾಡಿದ್ದರು.

ಶೇಕಡಾ 62ರಷ್ಟು ವಿಚಾರಣಾಧೀನ ಕೈದಿಗಳನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಇದೊಂದು ಮೂಲ ಪ್ರಶ್ನೆಯಾಗಿದೆ. ಸಾಮಾನ್ಯವಾಗಿ, ಇಂತಹ ವಿಚಾರಣಾಧೀನ ಕೈದಿಗಳು ನಿರ್ದೋಷಿಗಳಾಗಿ ಹೊರ ಬರುತ್ತಾರೆ ಇಲ್ಲವೇ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಅಂತಹವರ ವಿರುದ್ಧದ ಪ್ರಕರಣಗಳು ವಜಾ ಆಗುತ್ತವೆ.

ಆದರೆ ಪ್ರಕರಣಗಳ ವಿಚಾರಣೆ ಮುಗಿಯುವವರೆಗೆ ಆಗಿಂದಾಗ ಅವರು ಕೋರ್ಟ್‌ಗಳಿಗೆ ಅಲೆಯಬೇಕಾಗಿರುತ್ತದೆ. ಇಲ್ಲವೇ ಅವರನ್ನು ಜೈಲುಗಳಲ್ಲಿ ಬಂಧನದಲ್ಲಿಡಲಾಗಿರುತ್ತದೆ. ಹೀಗೆ ಕಳೆದುಕೊಂಡ ಅವರ ಅಮೂಲ್ಯವಾದ ಸಮಯಕ್ಕೆ ಹಾಗೂ ಯಾತನೆಗೆ ಯಾರು ಪರಿಹಾರ ಕಲ್ಪಿಸುತ್ತಾರೆ?

ಅತ್ಯಾಚಾರ ಪ್ರಕರಣದಲ್ಲಿ 2001ರಲ್ಲಿ ಜೈಲು ಸೇರಿದ್ದ ಉತ್ತರ ಪ್ರದೇಶದ ವಿಷ್ಣು ತಿವಾರಿಯನ್ನು ಕಳೆದ ವರ್ಷ ಆರೋಪದಿಂದ ಮುಕ್ತಗೊಳಿಸಲಾಯಿತು. ಅದೊಂದು ಸುಳ್ಳು ಕೇಸ್, ಆದರೆ ಅವರು 20 ವರ್ಷಗಳಷ್ಟು ದೀರ್ಘಕಾಲ ಜೈಲುವಾಸ ಅನುಭವಿಸಿದ್ದರು.

1968ರಲ್ಲಿ ಫೈಜಾಬಾದಿನಲ್ಲಿ ತನ್ನ ಅತ್ತಿಗೆಯನ್ನು ಕೊಲೆಗೈದ ಆರೋಪದ ಮೇಲೆ ಜೈಲು ಸೇರಿದ್ದ ಜಗಜೀವನ್ ರಾಮ್ ಯಾದವ್‌ದು ಮತ್ತೊಂದು ಹೀನಾಯ ಪ್ರಕರಣ. ಈತ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವತ್ತೂ ವಿಚಾರಣೆಯನ್ನೇ ಎದುರಿಸಲಿಲ್ಲ. ಏಕೆಂದರೆ, ಸಂಬಂಧಪಟ್ಟ ಅಧಿಕಾರಿಗಳು ಆತನಿಗೆ ಸಂಬಂಧಪಟ್ಟ ದಾಖಲೆಗಳನ್ನೇ ಕಳೆದು ಹಾಕಿದ್ದರು! ಆದಾಗ್ಯೂ, ಸುದೀರ್ಘ 38 ವರ್ಷಗಳ ತನಕ, ಅಧಿಕಾರಿಗಳು ಅತನ ದಾಖಲೆಗಳನ್ನು ಹುಡುಕುವ ತನಕ ಆತನನ್ನು ಜೈಲಿನಲ್ಲಿಟ್ಟಿದ್ದರು. ಈತನ ಬಂಧನವಾದಾಗ ಅವನಿಗೆ ಎರಡು ವರ್ಷದ ಗಂಡು ಮಗುವಿತ್ತು. ಆತನಿಗೆ 2006ರಲ್ಲಿ ಜಾಮೀನು ದೊರೆತಾಗ ಇವನ ವಯಸ್ಸು 70 ವರ್ಷಗಳಾಗಿದ್ದು, ಆತನ ಎರಡು ವರ್ಷದ ಮಗ 40 ವರ್ಷದವನಾಗಿದ್ದ!

ಇದಕ್ಕಿಂತ ಹೆಚ್ಚಿನ ಅನ್ಯಾಯ ಮತ್ತು ಕ್ರೂರತೆ ಇದೆಯಾ? ಇದೊಂದು ರೀತಿ ಬದುಕಿದ್ದೂ ಸತ್ತ ಹಾಗೆ. ಸರ್ವೋಚ್ಚ ನ್ಯಾಯಾಲಯವು ಆತನಿಗೆ ಜಾಮೀನು ನೀಡಿತ್ತೇ ಹೊರತು ಬೇರೇನೂ ಇಲ್ಲ. ಆತನ "ದಾಖಲೆಗಳನ್ನು ಕಳೆದ" ಅಧಿಕಾರಿಗಳಿಗೆ ಶಿಕ್ಷೆ ಇಲ್ಲ ಹಾಗೂ ಆತನನ್ನು 38 ವರ್ಷಗಳಷ್ಟು ಸುದೀರ್ಘ ಕಾಲ ಜೈಲಿನಲ್ಲಿಡಲಾಗಿತ್ತು. ಇಷ್ಟಾದರೂ ಅವನಿಗೆ ಯಾವ ಪರಿಹಾರವೂ ಇಲ್ಲ.

ನಮ್ಮ ನ್ಯಾಯ ದಾನ ವ್ಯವಸ್ಥೆ ಎಷ್ಟು ಅಮಾನವೀಯವಾಗಿರಬಹುದು ಎಂಬುದಕ್ಕೆ ಇವು ಉದಾಹರಣೆಗಳಾಗಬಹುದು. ನಮ್ಮ ಪೊಲೀಸ್ ಅಧಿಕಾರಿಗಳು ಮತ್ತು ತನಿಖಾ ಸಂಸ್ಥೆಗಳು ಎಷ್ಟೊಂದು ನಿರ್ದಯಿಗಳಲ್ಲವೇ?

ಅಂತಹ ಅಸಮರ್ಥ ಹಾಗೂ ಸಂವೇದನಾರಹಿತ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು, ಸರ್ಕಾರ ಹಾಗೂ ಅದರ ಅಂಗ ಸಂಸ್ಥೆಗಳಿಂದ ಅನ್ಯಾಯಕ್ಕೆ ಒಳಗಾಗಿ ಬಲಿಪಶುಗಳಾಗಿದ್ದಂತಹವರಿಗೆ ಪರಿಹಾರ ಕಲ್ಪಿಸಲು ನಮ್ಮ ನ್ಯಾಯಾಲಯಗಳಿಗೆ ಇದೇ ಸುಸಮಯ. ದುರದೃಷ್ಟಕರ ಸಂಗತಿಯೆಂದರೆ, ಖ್ಯಾತನಾಮರು ತೊಂದರೆಗೆ ಸಿಲುಕಿದಾಗ ಮಾತ್ರ ಇಂತಹ ಪ್ರಶ್ನೆಗಳು ನಮ್ಮ ನಾಯಕರ ಮನಸ್ಸಿನಲ್ಲಿ ಉದ್ಭವಿಸುತ್ತವೆ.

ಈ ವೇಳೆ, 2013ರಲ್ಲಿ ನಡೆದಂತಹ ಘಟನೆಯನ್ನು ನೆನಪಿಸಿಕೊಳ್ಳಬಹುದು. ಆಗ ನಮ್ಮ ಸಂಸದರು, 1993ರ ಮುಂಬೈ ಸ್ಫೋಟ ಪ್ರಕರಣದಲ್ಲಿ ಬಾಲಿವುಡ್ ನಟ ಸಂಜಯ್ ದತ್‌ರವರಿಗೆ ಕ್ಷಮಾದಾನ ದೊರಕಿಸಿ ಕೊಡಲು ಪರಿಶ್ರಮಪಡುತ್ತಿದ್ದರು. ಅಚ್ಚರಿಯ ಸಂಗತಿಯೆಂದರೆ ಮೊದಲಿಗೆ ಇದಕ್ಕಾಗಿ ಬೆಂಬಲ ಅರ್ಜಿಯನ್ನು ಸಲ್ಲಿಸಿದವರು ಬೇರ್‍ಯಾರೂ ಆಗಿರದೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇ ಕಟ್ಜುವೇ ಆಗಿದ್ದರು! ಸದರಿ ಪ್ರಕರಣದಲ್ಲಿ ಆರೋಪಿ ಸಂಜಯ್ ದತ್‌ರವರು "ಬಹಳಷ್ಟು ನೊಂದಿದ್ದಾರೆ, ತೀವ್ರ ಯಾತನೆ ಮತ್ತು ಅವಮಾನ ಅನುಭವಿಸಿದ್ದಾರೆ" ಎಂದು ನ್ಯಾಯಮೂರ್ತಿ ಕಟ್ಜು ಹೇಳಿದ್ದರು.

> **6** 1968ರಲ್ಲಿ ಫೈಜಾಬಾದಿನಲ್ಲಿ ತನ್ನ ಅತ್ತಿಗೆಯನ್ನು ಕೊಲೆಗೈದ ಆರೋಪದ ಮೇಲೆ ಜೈಲು ಸೇರಿದ್ದ ಜಗಜೀವನ್ ರಾಮ್ ಯಾದವ್‌ದು ಮತ್ತೊಂದು ಹೀನಾಯ ಪ್ರಕರಣ. ಈತ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವತ್ತೂ ವಿಚಾರಣೆಯನ್ನೇ ಎದುರಿಸಲಿಲ್ಲ. ಏಕೆಂದರೆ, ಸಂಬಂಧಪಟ್ಟ ಅಧಿಕಾರಿಗಳು ಆತನಿಗೆ ಸಂಬಂಧಪಟ್ಟ ದಾಖಲೆಗಳನ್ನೇ ಕಳೆದು ಹಾಕಿದ್ದರು! ಆದಾಗ್ಯೂ, ಸುದೀರ್ಘ 38 ವರ್ಷಗಳ ತನಕ, ಅಧಿಕಾರಿಗಳು ಅತನ ದಾಖಲೆಗಳನ್ನು ಹುಡುಕುವ ತನಕ ಆತನನ್ನು ಜೈಲಿನಲ್ಲಿಟ್ಟಿದ್ದರು.

ಇದಕ್ಕೆ ಎರಡು ವರ್ಷಗಳ ಹಿಂದಷ್ಟೇ ಪತ್ರಿಕೆಗಳು ದೇಶದಲ್ಲಿ ಶೇಕಡಾ 70ರಷ್ಟು ಕೈದಿಗಳು ಯಾವುದೇ ಅಪರಾಧಕ್ಕೆ ಶಿಕ್ಷೆಗೆ ಒಳಗಾಗಿಲ್ಲ, ಆದರೂ ಅವರಿನ್ನೂ ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿ ಬಂಧಿಗಳಾಗಿದ್ದಾರೆ ಎಂದು ವರದಿ ಮಾಡಿದ್ದವು. ಆವಾಗ ನಮ್ಮ ಸಂಸದರು ಹಾಗೂ ನ್ಯಾಯಮೂರ್ತಿ ಕಟ್ಜು ಅವರಲ್ಲಿದ್ದ ಸಂವೇದನಾಶೀಲತೆ ಎಲ್ಲಿ ಹೋಗಿತ್ತು? ಆಗ ಇವರಲ್ಲಿ ಯಾರೊಬ್ಬರಾದರೂ ಇಂತಹ ಕೈದಿಗಳ ಬಿಡುಗಡೆ ಇಲ್ಲವೇ ಅವರಿಗೆ ಪರಿಹಾರ ಕಲ್ಪಿಸುವುದರ ಬಗ್ಗೆ ಮಾರ್ಗೋಪಾಯಗಳ ಕುರಿತು ಏಕೆ ಬಾಯಿ ಬಿಡಲಿಲ್ಲ?

ಸರ್ಕಾರ ಯಾವ ರೀತಿಯಲ್ಲಿ ತನ್ನ ವೈಯಕ್ತಿಕ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವಲ್ಲಿ ಜನರ ಹಣವನ್ನು ಹೇಗೆ ಪೋಲು ಮಾಡುತ್ತದೆ ಎಂಬ ಬಗ್ಗೆ ಮಾತನಾಡುವುದಾದರೆ, ಬಾಂಬೆ ಹೈಕೋರ್ಟು, ಬೃಹನ್ ಮುಂಬಯಿ ಮಹಾನಗರ ಪಾಲಿಕೆಯು (ಬಿಎಂಸಿ) ಬಾಲಿವುಡ್ ನಟಿ ಕಂಗನಾ ರಾನಾವುತ್‌ಗೆ ಸೇರಿದ ಕಚೇರಿಯನ್ನು ನೆಲಸಮಗೊಳಿಸಲು ನೀಡಿದ್ದ ಆದೇಶವನ್ನು ರದ್ದುಗೊಳಿಸಿ, ಸದರಿ ನಟಿಗೆ 2 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡುವಂತೆ ಬಿಎಂಸಿಗೆ ಆದೇಶಿಸಿದ ಪ್ರಕರಣ ಇಲ್ಲಿ ನನಗೆ ನೆನಪಿಗೆ ಬರುತ್ತದೆ.

ನಮ್ಮ ಹಣದ ವಿಷಯದಲ್ಲಿ ನಮ್ಮದೇ ರಾಜಕಾರಣಿಗಳು ಮತ್ತು ಅಧಿಕಾರಸ್ಥರು ಯಾವ ರೀತಿ ಬೇಜವಾಬ್ದಾರಿಯಾಗಿ ನಡೆದುಕೊಳ್ಳುತ್ತಾರೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಬಲ್ಲದು. ಬಿಎಂಸಿಯು, ನ್ಯಾಯಾಲಯದಲ್ಲಿ 2 ಕೋಟಿ ರೂಪಾಯಿಗಳ ಪರಿಹಾರ ನೀಡುವಂತಹ ಪ್ರಕರಣದಲ್ಲಿ ತನ್ನನ್ನು ಪ್ರತಿನಿಧಿಸಲು ಹಾಗೂ ಸದರಿ ಪ್ರಕರಣದಲ್ಲಿ ಸದರಿ ನಟಿಗೆ 2 ಕೋಟಿ ರೂಪಾಯಿಗಳ ಪರಿಹಾರ ಪಾವತಿಸದೇ ಇರುವಂತೆ ನೋಡಿಕೊಳ್ಳಲು ಅಸ್ಪಿ ಚಿನೊಯ್ ಎಂಬ ವಕೀಲರನ್ನು ನೇಮಿಸಿಕೊಂಡಿತ್ತು. ಈ ಪ್ರಕರಣದಲ್ಲಿ ಬಿಎಂಸಿ ಸೋತಿತು. ಆದರೆ ಸದರಿ ವಕೀಲರಿಗೆ ನ್ಯಾಯಾಲಯದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ಶುಲ್ಕವಾಗಿ ಬಿಎಂಸಿಯು ಎಷ್ಟು ಶುಲ್ಕ ನೀಡಿರಬಹುದು ಹೇಳಿ?

ವಕೀಲ ಚಿನೊಯ್‌ಗೆ ಬಿಎಂಸಿಯು 82.50 ಲಕ್ಷ ರೂಪಾಯಿಗಳನ್ನು ಪಾವತಿಸಿತು! ಬಹುತೇಕ ಪರಿಹಾರ ಮೊತ್ತದ ಶೇಕಡಾ 50ರಷ್ಟು!

ಕ್ಷುಲ್ಲಕ ಪ್ರಕರಣಗಳಲ್ಲಿ ತೆರಿಗೆದಾರರ ಅಷ್ಟೊಂದು ಹಣವನ್ನು ವ್ಯಯ ಮಾಡುತ್ತಿರುವಾಗ, ಆ ಹಣವನ್ನು ಸಂಸಾರವನ್ನು ನಿರ್ವಹಿಸಲು ಕಷ್ಟಪಡುತ್ತಿರುವ ಬಡ ಆರೋಪಿಗಳ ಕುಟುಂಬಗಳ ಪಾರು ಮಾಡಲು ಅಥವಾ ಉಳಿಸಲು ಏಕೆ ಬಳಸಿಕೊಳ್ಳಬಾರದು? ಈ ಕೆಲಸವನ್ನು ನಟ ಸಲ್ಮಾನ್ ಖಾನ್ ಮಾಡಬಹುದಾದರೆ ಸರ್ಕಾರದಿಂದ ಏಕೆ ಸಾಧ್ಯವಿಲ್ಲ? ಸಲ್ಮಾನ್ ಖಾನ್‌ರ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಒಮ್ಮೆ ಉತ್ತರಪ್ರದೇಶದ 400 ವಿಚಾರಣಾಧೀನ ಕೈದಿಗಳ ಮುಕ್ತಿಗಾಗಿ 40 ಲಕ್ಷ ರೂಪಾಯಿಗಳನ್ನು ಪಾವತಿಸಿತ್ತು.

ಭಾರತೀಯ ಬಾಹ್ಯಾಕಾಶ ಸಂಸ್ಥೆಯಲ್ಲಿ (ಇಸ್ರೊ) ವಿಜ್ಞಾನಿಯಾಗಿದ್ದ ನಂಬಿ ನಾರಾಯಣ್‌ರಂತೆ ಜನ ಪರಿಹಾರ ಕೋರಿ ಪ್ರಕರಣಗಳನ್ನು ದಾಖಲಿಸಲು ಇದು ಸಕಾಲ. 1994ರಲ್ಲಿ ನಂಬಿ ನಾರಾಯಣ್ ಅವರನ್ನು ಬೇಹುಗಾರಿಕೆ ಪ್ರಕರಣದಲ್ಲಿ ಅಕ್ರಮವಾಗಿ ಸಿಲುಕಿಸಲಾಗಿತ್ತು. ಅಂದು ಪ್ರಕರಣದ ವಿಚಾರಣೆಯನ್ನು ಸಿಬಿಐ ನಡೆಸಿತ್ತು. ನಂತರ ಅವರನ್ನು ಖುಲಾಸೆಗೊಳಿಸಲಾಯಿತು. ಆದರೆ ಅಂದಿನ ರಾಜ್ಯ ಸರ್ಕಾರ ಪ್ರಕರಣದ ಪುನರ್ ತನಿಖೆಗೆ ಆದೇಶಿಸಿತ್ತು. ಆದರೆ ಆ ಆದೇಶವನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತು. ಆದರೂ ಪೊಲೀಸ್ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ಆದರೆ, 2018ರಲ್ಲಿ ಸದರಿ ನಂಬಿ ನಾರಾಯಣ್ ಅವರಿಗೆ ಸುಪ್ರೀಂಕೋರ್ಟ್ 50 ಲಕ್ಷ ರೂ. ಪರಿಹಾರ ಘೋಷಿಸಿತು ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಲುವಾಗಿ ಮಾರ್ಗೋಪಾಯಗಳನ್ನು ಸೂಚಿಸಲು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತು. ಇನ್ನಷ್ಟೇ ಕ್ರಮ ಕೈಗೊಳ್ಳಬೇಕಿದೆ.

ಸರ್ಕಾರದ ಔದಾಸೀನ್ಯದ ಬಲಿಪಶುಗಳು ಹಾಗೂ ಅವರ ಕುಟುಂಬ ವರ್ಗದವರು ಸಮಾಜದಿಂದ ಬಹಿಷ್ಕಾರವನ್ನು ಎದುರಿಸಬೇಕಾಗುತ್ತದೆ. ಅಂತಹವರ ಮಕ್ಕಳು, ತಂದೆಯಿಲ್ಲದೆ ಬೆಳೆಯಬೇಕಾಗುತ್ತದೆ. ತಾಯಿಯೇ ಹೊಟ್ಟೆಪಾಡಿಗೆ ಕೆಲಸ ಮಾಡಿ, ತನ್ನ ಗಂಡನನ್ನು ಜೈಲಿನಿಂದ ಬಿಡಿಸಲು ವಕೀಲರಿಗೆ ಶುಲ್ಕವನ್ನು ನೀಡಬೇಕಾಗುತ್ತದೆ. ಯಾರೊಬ್ಬ ನಿಗೋ ಸೇರಬೇಕಾದ ಹಣವನ್ನು ಈ ಅಪರಾಧಕ್ಕೆ ತೆರಬೇಕಾಗುತ್ತಿದೆ ಹಾಗೂ ಇದು ಸರ್ಕಾರ ತನ್ನ ಅಧಿಕಾರಿಗಳ ಮೂಲಕ ನಾಗರಿಕರ ವಿರುದ್ಧ ಎಸಗಿದ ಅಪರಾಧವಾಗಿದೆ.

ಸರ್ಕಾರವು ಬೆಲೆಯನ್ನು ತೆರಬೇಕು ಹಾಗೂ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಬೇಕಾಗುತ್ತದೆ. ಆದರೆ ಅವರು ಹಾಗೆ ಮಾಡುತ್ತಾರೆಯೇ? ಇಲ್ಲವೇ ಇಲ್ಲ. ನಮ್ಮದು ಪ್ರಬುದ್ಧಮಾನವಾದ, ದಯಾಳುವಾದ ಮತ್ತು ಮಾನವೀಯ ಮುಖ ಹೊಂದಿದ ಪ್ರಜಾಪ್ರಭುತ್ವವಲ್ಲ. ನಾವೆಂದೂ ಹಾಗೆ ಇಲ್ಲ. ಆ ರೀತಿ ಮುಂದೆಯೂ ಇರುವುದಿಲ್ಲವೇನೋ ಎಂದು ಭಯವಾಗುತ್ತದೆ.

email: vikram@starofmysore.com

ನಿಮ್ಮ ಪತ್ರಗಳು

ಇಲಾಖೆಯೇ ಗುರುತಿಸಿ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಲಿ

ಮಾನ್ಯರೆ,

ಪ್ರತಿವರ್ಷ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ತಮ್ಮ ದುಡಿಮೆಯುದ್ದಕ್ಕೂ ಮಕ್ಕಳ ಹಾಗೂ ಶಾಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಶಿಕ್ಷಕರಿಗೆ ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಈ ರೀತಿಯ ಪ್ರಶಸ್ತಿಗಳು ಶಿಕ್ಷಕರ ಸಾಮರ್ಥ್ಯಕ್ಕೆ ಸಂದ ಗೌರವವಾಗಿದ್ದು ಇದರಿಂದ ಶಿಕ್ಷಕರ ಕಾರ್ಯದಕ್ಷತೆ ಹಾಗೂ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದಂತಾಗುತ್ತದೆ.

ಆದರೆ ಬೇಸರದ ಸಂಗತಿಯೆಂದರೆ ಪ್ರಸ್ತುತ ಶಿಕ್ಷಕರು ತಾವು ಪಡೆಯುವ ಪ್ರಶಸ್ತಿಗೆ ತಾವೇ ಅರ್ಜಿ ಸಲ್ಲಿಸಬೇಕಾದ ಅನಿವಾರ್ಯತೆ ಇದೆ. ಇದು ತಪ್ಪಬೇಕು. ಸ್ವಾಭಿಮಾನಿಯಾಗಿರುವ ಶಿಕ್ಷಕರು ತಾವೇ ಅರ್ಜಿ ಹಾಕಿ ತಮಗೆ ಪ್ರಶಸ್ತಿ ಕೊಡಿ ಅಂತ ಕೇಳುವುದು ತರವಲ್ಲ. ಇಲಾಖೆಯ ಈ ಕ್ರಮ ಸಾಧುವಲ್ಲ. ಏಕೆಂದರೆ ಶಿಕ್ಷಕ ತನ್ನ ವೃತ್ತಿ ಬದುಕಿನಲ್ಲಿ ರೂಢಿಸಿಕೊಂಡು ಬಂದ ಪ್ರಾಮಾಣಿಕತೆ, ನಿಷ್ಠೆ ಹಾಗೂ ಕಾರ್ಯದಕ್ಷತೆಯನ್ನು ಶಿಕ್ಷಣ ಇಲಾಖೆಯೇ ಗುರುತಿಸಿ ಪ್ರಶಸ್ತಿ ನೀಡಿದರೆ ಉತ್ತಮ ಶಿಕ್ಷಕ ಪ್ರಶಸ್ತಿಯ ಮೌಲ್ಯ ಮತ್ತಷ್ಟು ಹೆಚ್ಚುತ್ತದೆ. ಅಲ್ಲದೇ ಎಷ್ಟೋ ಜನ ಶಿಕ್ಷಕರು ತಮಗೆ ಪ್ರಶಸ್ತಿ ಪಡೆಯಲು ಅರ್ಹತೆ ಇಲ್ಲದಿದ್ದರೂ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಸಲ್ಲಿಸಿ, ತಮಗೆ ಗೊತ್ತಿರುವ ಪ್ರಭಾವಿ ರಾಜಕಾರಣಿಗಳಿಂದ, ಅಧಿಕಾರಿಗಳ ಮೇಲೆ ಒತ್ತಡ ಹಾಕಿಸಿ ಪ್ರಶಸ್ತಿ ಪಡೆಯುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಇದರಿಂದ ನಿಷ್ಠಾವಂತ ಪ್ರಾಮಾಣಿಕ ಶಿಕ್ಷಕರಿಗೆ ಅನ್ಯಾಯವಾಗುತ್ತಿದ್ದು, ಯೋಗ್ಯರಲ್ಲದವರು ಕೂಡ ಪ್ರಶಸ್ತಿಗೆ ಪೈಪೋಟಿ ನಡೆಸುತ್ತಿರುವುದರಿಂದ ಪ್ರಶಸ್ತಿಯ ಮೌಲ್ಯವು ಕೂಡ ಅಪವಿತ್ರವಾಗುತ್ತಿದೆ. ಹೀಗಾಗಿ ಸರ್ಕಾರ ಇನ್ನು ಮುಂದೆಯಾದರೂ ಪ್ರಸ್ತುತ ಇರುವ ಶಿಕ್ಷಕ ಪ್ರಶಸ್ತಿಯ ಆಯ್ಕೆಯ ಮಾನದಂಡವನ್ನು ಬದಲಿಸಿ ಸಭ್ಯ ಪ್ರಾಮಾಣಿಕ ಹಾಗೂ ಯೋಗ್ಯ ಶಿಕ್ಷಕರನಷ್ಟೇ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಕಟ್ಟಡದಲ್ಲಿರುವ ಮರವನ್ನು ಕತ್ತರಿಸಿ..!!

ಮಾನ್ಯರೆ,



ಮೈಸೂರು ನಗರದ ಹಾರ್ಡಿಂಗ್ ಸರ್ಕಲ್ ಹತ್ತಿರವಿರುವ, ನಗರ ಪಾಲಿಕೆಗೆ ಸೇರಿರುವ ಕಟ್ಟಡದ ಮೇಲೆ ಅನೇಕ ವರ್ಷಗಳಿಂದ ಆಲದ ಗಿಡಗಳು ಮರವಾಗಿ ಬೆಳೆದಿದ್ದು, ದಿನದಿಂದ ದಿನಕ್ಕೆ ಕಟ್ಟಡಕ್ಕೆ ಹಾನಿಯಾಗುವ ಪರಿಸ್ಥಿತಿ ಬಂದಿದೆ. ಈ ಕಟ್ಟಡವು ಹಳೆಯದಾಗಿದ್ದು, ಬಿರುಕು ಬಿಟ್ಟು ಇನ್ನೇನು ಕೆಲವೇ ದಿನಗಳಲ್ಲಿ ಕುಸಿದು ಬೀಳುವ ಸ್ಥಿತಿಯಲ್ಲಿದೆ. ಕಟ್ಟಡದ ಸುತ್ತಲೂ ಗಿಡಗಂಟಿಗಳು ಬೆಳೆದಿವೆ. ಇಷ್ಟು ದೊಡ್ಡ ಮರ ಬೆಳೆದಿರುವುದು ನಗರ ಪಾಲಿಕೆಯ ಗಮನಕ್ಕೆ ಬಾರದಿರುವುದೇ ವಿಪರ್ಯಾಸದ ಸಂಗತಿಯಾಗಿದೆ. ಈ ಮರವನ್ನು ಕತ್ತರಿಸಿದರೆ ಪಾಲಿಕೆ ಯಾವುದಕ್ಕಾದರೂ ಉಪಯೋಗಕ್ಕೆ ಈ ಕಟ್ಟಡವನ್ನು ಬಳಸಿಕೊಳ್ಳಬಹುದು. ಅನಾಹುತವಾಗುವುದಕ್ಕೂ ಮುಂಚೆ ಎಚ್ಚೆತ್ತುಕೊಂಡು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಈ ಮರವನ್ನು ಕತ್ತರಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ., ನಂಜೀಪುರ, ಸರಗೂರು ತಾ.

ವನ ಮಹೋತ್ಸವ ನಿತ್ಯೋತ್ಸವವಾಗಲಿ

ಮಾನ್ಯರೆ,

ಕರ್ನಾಟಕ ಅರಣ್ಯ ಇಲಾಖೆ ಜುಲೈ 1 ರಿಂದ 7 ರವರೆಗೆ ವನ ಮಹೋತ್ಸವವನ್ನು ಆಚರಿಸುತ್ತಿದೆ. ಈ ನಿಟ್ಟಿನಲ್ಲಿ ಅರಣ್ಯ ಹಾಗೂ ಅದರ ಪ್ರಾಮುಖ್ಯತೆ ಕುರಿತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದೆ. ಇದು ನಿಜಕ್ಕೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಉತ್ತಮ ಯೋಜನೆ. ಆಧುನಿಕ ಜಗತ್ತಿನಲ್ಲಿ ಜನಸಂಖ್ಯೆ ಹೆಚ್ಚಳವಾಗಿ ಪ್ರಕೃತಿ ಸಂಪತ್ತಿನ ಮೇಲೆ ಆಕ್ರಮಣ ಅತಿಯಾಗಿ ಪರಿಸರ ಮಾಲಿನ್ಯ ಹೆಚ್ಚಾಗಿದೆ. ನೈಸರ್ಗಿಕ ಸಂಪನ್ಮೂಲಗಳು ಕ್ಷೀಣಿಸುತ್ತಿವೆ. ಇದು ಮುಂದೊಂದು ದಿನ ಮನುಕುಲದ ಅವನತಿಗೆ ಕೂಡ ಕಾರಣವಾಗಬಹುದು.

ಅರಣ್ಯ ಪ್ರಕೃತಿಯ ಅತಿಮುಖ್ಯ ಸಂಪತ್ತು. ಅದನ್ನು ಸಂರಕ್ಷಿಸಿ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು. ಕಾಡಿಲ್ಲದೆ ನಾಡಿಲ್ಲ, ನಮ್ಮೆಲ್ಲರ ಜೀವದ ಉಸಿರು ಕಾಡು. ಮರ–ಗಿಡಗಳನ್ನು ಬೆಳೆಸಿ ಕಾಡನ್ನು ಸಂರಕ್ಷಿಸಿದರೆ ಮಾತ್ರ ನಮ್ಮ ಮುಂದಿನ ಪೀಳಿಗೆಯವರು ಬದುಕಲು ಸಾಧ್ಯ...

ನಮ್ಮ ಅರಣ್ಯಗಳು ಔಷಧೀಯ ಸಸ್ಯಗಳ ಅಗರವಾಗಿದ್ದು, ನಮ್ಮ ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ಉಪಯೋಗಿಸುವ ಹೆಚ್ಚಿನ ಗಿಡಮೂಲಿಕೆಗಳು ಕಾಡಿನಲ್ಲೇ ದೊರಕುವುದು. ಆದ್ದರಿಂದ ಅರಣ್ಯ ಸಂರಕ್ಷಣೆ ಮಾಡಿದರೆ ಗಿಡಮೂಲಿಕೆಗಳನ್ನೂ ಸಂರಕ್ಷಿಸಿದಂತೆ.

ಕೋವಿಡ್ ಸಮಯದಲ್ಲಿ ಹೆಚ್ಚು ಕಾಡಿದ ಸಮಸ್ಯೆ ಎಂದರೆ ಆಮ್ಲಜನಕದ ಕೊರತೆ. ಇದರಿಂದ ಆದ ತೊಂದರೆ, ಪ್ರಾಣಹಾನಿ ಅಷ್ಟಿಷ್ಟಲ್ಲ. ಅರಣ್ಯವನ್ನು ರಕ್ಷಿಸಿದರೆ ಮರಗಿಡಗಳನ್ನು ಉಳಿಸಿ ಬೆಳೆಸಿದರೆ ಉತ್ತಮ ಗಾಳಿ ಜೊತೆಗೆ ಮಳೆ ಹಾಗೂ ಭೂಮಿಯ ಅಂತರ್ಜಲ ಹೆಚ್ಚಿ ಪರಿಸರದ ಸಮತೋಲನ ಕಾಪಾಡಿ ನಾವೆಲ್ಲರೂ ನೆಮ್ಮದಿಯಿಂದ ಬಾಳಲು ಸಾಧ್ಯ. ಇಲ್ಲವಾದಲ್ಲಿ ಶುದ್ಧ ನೀರಿನ ಅಭಾವದ ಜೊತೆಗೆ ಶುದ್ಧ ಗಾಳಿಯನ್ನು ಖರೀದಿಸುವ ದಿನ ತುಂಬಾ ದೂರವಿಲ್ಲ.

– ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು

ಮಹಾರಾಜ ಕಾಲೇಜು ಆವರಣ ಸ್ವಚ್ಛಗೊಳಿಸಿ

ಮಾನ್ಯರೆ,

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಗಿಡ –ಗಂಟಿಗಳು ಬೃಹದಾ ಕಾರವಾಗಿ ಬೆಳೆದು ನಿಂತಿವೆ. ಇಲ್ಲಿ ಪ್ರತಿದಿನವೂ ವಿದ್ಯಾರ್ಥಿಗಳು ಓಡಾಡುತ್ತಿರುತ್ತಾರೆ. ಬೆಳೆದು ನಿಂತಿರುವ ಗಿಡ–ಗಂಟಿಗಳ ಮಧ್ಯೆ ವಿಷಕಾರಿ ಹಾವುಗಳು ಸೇರುವುದು ಸಹಜ. ಹಾಗೂ ಕಾಲೇಜಿನ ಆವರಣದಲ್ಲಿ ಮದ್ಯದ ಬಾಟಲಿಗಳು ಕಂಡು ಬಂದಿದೆ ಮತ್ತು ಕಾಲೇಜಿನ ಕೊಠಡಿಯೊಳಗೆ ಸರಿಯಾಗಿ ಕಸ ಸ್ವಚ್ಛಗೊಳಿಸುತ್ತಿಲ್ಲ. ಹಾಗಾಗಿ ಇದರ ಬಗ್ಗೆ ಗಮನ ಹರಿಸಿ ಕ್ರಮ ಕೈಗೊಳ್ಳುವಂತೆ ಮನವಿ.

–ಮಹಾಂತೇಶ್. ಬಿ, ಮಹಾರಾಜ ಕಾಲೇಜು

ಇಸ್ಕಾನ್ ದೇವಸ್ಥಾನ ಕೇಂದ್ರೀಯ ರೇಷ್ಮೆ ಸಂಶೋಧನಾ ಕೇಂದ್ರದವರೆಗಿನ ರಾಜಕಾಲುವೆ ಕಾಮಗಾರಿಗೆ ಚಾಲನೆ

ಶಾಶ್ವತ ಪರಿಹಾರದ ನಿಟ್ಟಿನಲ್ಲಿ ಕಾಮಗಾರಿ ಆರಂಭ: ಶಾಸಕ ರಾಮದಾಸ್

ಮೈಸೂರು, ಜು.5(ಎಸ್‌ಪಿಎನ್)– ಜಯನಗರದ ಇಸ್ಕಾನ್ ದೇವಸ್ಥಾನದಿಂದ ಕೇಂದ್ರೀಯ ರೇಷ್ಮೆ ಸಂಶೋಧನಾ ಕೇಂದ್ರದವರೆಗಿನ ರಾಜಕಾಲುವೆ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಮಂಗಳವಾರ ಗುದ್ದಲಿ ಪೂಜೆ ನೆರವೇರಿಸಿದರು.



ನಂತರ ಮಾತನಾಡಿದ ಅವರು, ಬಹಳ ವರ್ಷಗಳಿಂದ ಬಾಕಿ ಉಳಿದಿದ್ದ ರಾಜಕಾಲುವೆ ಕಾಮಗಾರಿಗೆ ಇಂದು ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಮಳೆಗಾಲದಲ್ಲಿ ಇಸ್ಕಾನ್ ದೇವಸ್ಥಾನದಿಂದ ಐಶ್ವರ್ಯ ಬಡಾವಣೆ, ಚಿಕ್ಕಹರದನಹಳ್ಳಿ, ಸಾರಾ ಬಡಾವಣೆ, ಸೂರ್ಯ ಬಡಾವಣೆ, ಅಯೋಧ್ಯ ನಗರ ಹಾಗೂ ಕೇಂದ್ರೀಯ ರೇಷ್ಮೆ ಹುಳು ಸಂಶೋಧನಾ ಕೇಂದ್ರದವರೆಗೆ ರಾಜಕಾಲುವೆ ನೀರು ಸರಾಗವಾಗಿ ಹೋಗದ ಕಾರಣ ಸುತ್ತಮುತ್ತಲಿನ ಬಡಾವಣೆಗಳಿಗೆ ನೀರು ನುಗ್ಗಿ ಸಮಸ್ಯೆ ಉಂಟಾಗುತ್ತಿತ್ತು. ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಈ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ನಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಚಾಮರಾಜ ಜೋಡಿ ರಸ್ತೆಯ ಸರ್ಕಾರಿ ಪಿಯು ಕಾಲೇಜು ಪಕ್ಕದಿಂದ ರಾಜಕಾಲುವೆ ಪ್ರಾರಂಭವಾದರೆ ಶ್ರೀರಾಂಪುರದವರೆಗೆ ನೀರು ಹರಿದು ಮಳೆಗಾಲದಲ್ಲಿ ಸಮಸ್ಯೆ ಆಗುತ್ತಿತ್ತು. ಈ ಕಾಮಗಾರಿಗೆ 93 ಕೋಟಿ ರೂ. ಅನುದಾನಕ್ಕೆ ಮನವಿ ಸಲ್ಲಿಸಲಾಗಿತ್ತು. ಕೊರೊನಾ ಆರ್ಥಿಕ ಸಂಕಷ್ಟ ನಡುವೆಯೂ ರಾಜ್ಯ ಸರ್ಕಾರ ಮುಡಾ ವತಿಯಿಂದ 47 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದರು.

ಈಗಾಗಲೇ ಈ ಕಾಮಗಾರಿಯು ಟೆಂಡರ್ ಪ್ರಕ್ರಿಯೆ ಮುಗಿಯುವ ಹಂತದಲ್ಲಿದ್ದು, ಈ ಭಾಗದ ರಾಜ ಕಾಲುವೆಯ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ನಗರ ಪಾಲಿಕೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ ಇತರೆ ಜನಪ್ರತಿನಿಧಿಗಳ ಸಹಕಾರದಿಂದ ಶಾಶ್ವತ ಪರಿಹಾರ ದೊರಕುತ್ತಿರುವುದು ಸಂತಸ ತಂದಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಮೈಸೂರು ನಗರ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಸದಸ್ಯರಾದ ಚಂಪಕ, ಜಿಎಸ್‌ಎಸ್ ಶ್ರೀ ಹರಿ, ಮಾಯ ಜಗದೀಶ್, ರೂಪ , ಗೋಪಾಲ್, ಪ್ರದೀಪ್, ಕೃಷ್ಣ, ಸಂಪತ್, ಗಿರೀಶ್, ಸತೀಶ್, ಅನಿಲ್ ಹಾಗೂ ಸ್ಥಳೀಯ ಬಡಾವಣೆಯ ನಿವಾಸಿಗಳು ಮತ್ತು ಮುಡಾ ಮತ್ತು ನಗರಪಾಲಿಕೆ ಅಧಿಕಾರಿಗಳು ಹಾಜರಿದ್ದರು.

ಪ್ರತಿಭಾ ಪುರಸ್ಕಾರ ಅರ್ಜಿ ಆಹ್ವಾನ

ಮೈಸೂರು, ಜು.5–2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ'ಕ್ಕಾಗಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಸ್ವ–ವಿವರ ಹಾಗೂ ದಾಖಲಾತಿಗಳೊಂದಿಗೆ ಮಹಾಸಭಾ ವೆಬ್‌ಸೈಟ್‌ನಲ್ಲಿ ಜು.7ರಿಂದ 20ರವರೆಗೆ ಅರ್ಜಿ ಸಲ್ಲಿಸಬೇಕು. ಆನ್‌ಲೈನ್‌ನಲ್ಲಿ ಬಂಧ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು ಎಂದು ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ದೂ.ಸಂ: 080–23618400/23602177 ಅನ್ನು ಸಂಪರ್ಕಿಸಬಹುದು.

ಉದಯಪುರ ಟೈಲರ್ ಹತ್ಯೆ: ಮತ್ತೊಬ್ಬ ಆರೋಪಿಯನ್ನು ಜುಲೈ 12ರವರೆಗೆ ಎನ್‌ಐಎ ವಶಕ್ಕೆ ನೀಡಿದ ಕೋರ್ಟ್

ಜೈಪುರ: ಉದಯಪುರದಲ್ಲಿ ಟೈಲರ್ ಕನ್ಹಯ್ಯಲಾಲ್ ಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮತ್ತೊಬ್ಬ ಆರೋಪಿಯನ್ನು ಜುಲೈ 12 ರವರೆಗೆ ಎನ್‌ಐಎ ವಶಕ್ಕೆ ನೀಡಿ ಎನ್‌ಐಎ ವಿಶೇಷ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ಆರೋಪಿ ಮೊಹಮ್ಮದ್ ಮೊಹ್ಸಿನ್‌ನನ್ನು ಬಿಗಿ ಭದ್ರತೆಯ ನಡುವೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯ ಅಧಿಕಾರಿಗಳು ಇಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ಆರೋಪಿಯ ವಿಚಾರಣೆ ನಡೆಸಿದ ನಂತರ ನ್ಯಾಯಾಲಯವು ಮೊಹಮ್ಮದ್ ಮೊಹ್ಸಿನ್‌ನನ್ನು ಜುಲೈ 12 ರವರೆಗೆ ಎನ್‌ಐಎ ವಶಕ್ಕೆ ನೀಡಿದೆ ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಟಿಪಿ ಶರ್ಮಾ ತಿಳಿಸಿದ್ದಾರೆ. ಕನ್ಹಯ್ಯಲಾಲ್ ಅವರನ್ನು ಕೊಲ್ಲುವ ಸಂಚು ಮತ್ತು ಅವರ ಅಂಗಡಿಯ ವಿಚಕ್ಷಣಾ ಕಾರ್ಯದಲ್ಲಿ ಭಾಗಿಯಾಗಿದ್ದಕ್ಕಾಗಿ ಮೊಹ್ಸಿನ್‌ನನ್ನು ಸೋಮವಾರ ಬಂಧಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ದೆಹಲಿ ಸಿಎಂ ಕೇಜ್ರಿವಾಲ್ ಮನೆ ಮೇಲೆ ದಾಳಿ ಪ್ರಕರಣ; ಬಿಜೆಪಿ ಸಂಸದ ತೇಜಸ್ವಿ ಸೂರ್ಯ ವಿಚಾರಣೆ

ನವದೆಹಲಿ: ಮಾರ್ಚ್‌ನಲ್ಲಿ ಪ್ರತಿಭಟನೆ ವೇಳೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಮನೆ ಮೇಲೆ ದಾಳಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರನ್ನು ದೆಹಲಿ ಪೊಲೀಸರು ಮಂಗಳವಾರ ಎರಡು ಗಂಟೆಗಳ ಕಾಲ ತೀವ್ರ ವಿಚಾರಣೆ ನಡೆಸಿದರು. 31 ವರ್ಷದ ತೇಜಸ್ವಿ ಸೂರ್ಯ ಅವರನ್ನು 10 ದಿನಗಳ ಹಿಂದೆ ಪ್ರತಿಭಟನೆಯಲ್ಲಿ ಅವರ ಪಾತ್ರದ ಕುರಿತು ವಿಚಾರಣೆ ನಡೆಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಈಗ 2ನೇ ಬಾರಿ ವಿಚಾರಣೆ ಒಳಪಡಿಸಿದ್ದಾರೆ. ಕೇಜ್ರಿವಾಲ್ ವಿರುದ್ಧದ ಪ್ರತಿಭಟನೆ ವೇಳೆ ಹಲವಾರು ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ಭೇದಿಸಿ ಕೇಜ್ರಿವಾಲ್ ಮನೆ ಮೇಲೆ ದಾಳಿ ನಡೆಸಿದ್ದರು. ಮಾರ್ಚ್ 30ರಂದು ವಿವಾದಾತ್ಮಕ ಚಲನಚಿತ್ರ 'ದಿ ಕಾಶ್ಮೀರ್ ಫೈಲ್ಸ್' ಕುರಿತು ಅರವಿಂದ್ ಕೇಜ್ರಿವಾಲ್ ಅವರ ಹೇಳಿಕೆಗಳನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಕೇಜ್ರಿವಾಲ್ ನಿವಾಸದ ಬಳಿ ಘೋಷಣೆ ಕೂಗಿದ ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ತಳ್ಳಿ, ಗೇಟ್‌ಗಳಿಗೆ ಬಣ್ಣ ಎಸೆದಿದ್ದರು. ಅಲ್ಲದೆ ಸಿಸಿ ಕ್ಯಾಮೆರಾಗಳನ್ನು ಧ್ವಂಸ ಗೊಳಿಸಿದ್ದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ತೇಜಸ್ವಿ ಸೂರ್ಯ ಅವರಿಗೆ ಪೊಲೀಸರು ಎರಡು ಬಾರಿ ನೋಟಿಸ್ ನೀಡಿದ್ದರು. ನಾನು ದೆಹಲಿಯಲ್ಲಿದ್ದಾಗ ವಿಚಾರಣೆ ಎದುರಿಸಲು ಸಿದ್ಧ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಪೊಲೀಸರಿಗೆ ತಿಳಿಸಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಜು.5– ಮೈಸೂರಿನ ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ಜೆಪಿನಗರ ಹಾಗೂ ಹೂಟಗಳ್ಳಿ ಶಾಖೆಯಲ್ಲಿ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರವನ್ನು ಜು.8ರವರೆಗೆ ಏರ್ಪಡಿಸಲಾಗಿದೆ. ಇದರಲ್ಲಿ ಶಸ್ತ್ರ ಚಿಕಿತ್ಸೆ ಅಗತ್ಯವಿರುವವರು ಬಿಪಿಎಲ್ ಕಾರ್ಡ್ ತಂದರೆ ವಿಶೇಷ ರಿಯಾಯಿತಿ ಉಂಟು. ಆಸಕ್ತರು ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸೈಲೆಂಟ್ ಶೋರ್ಸ್ ರಸ್ತೆ ಹೂಟಗಳ್ಳಿ, ಮೊ. 88844 88262/0821–2953658 ಹಾಗೂ ನಂ. 69, ಎ ಬ್ಲಾಕ್, ಜೆಪಿನಗರ ಮೇನ್ ರೋಡ್, ದೂ.0821–4056837 ಸಂಪರ್ಕಿಸಲು ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸದ್ಗುರು ಜಗ್ಗಿ ವಾಸುದೇವ್ ಅವರ ವಿಶೇಷ ಸಂದರ್ಶನ

ಭೂಮಿಯ ಮೇಲೆ ನಮ್ಮ ಪಯಣ ಸೀಮಿತವಷ್ಟೇ...!



"ಈ ಭೂಗ್ರಹದ ಮೇಲೆ ನಾವು ಸೀಮಿತ ಅವಧಿಯನ್ನು ಮಾತ್ರ ಹೊಂದಿದ್ದೇವೆ" ಮೈಸೂರಿನ ಗುರುವೇ ಆಗಿರುವ ಸದ್ಗುರು ಜಗ್ಗಿ ವಾಸುದೇವ್ ಇತ್ತೀಚೆಗೆ 30,000 ಕಿಲೋಮೀಟರ್ ಪ್ರಯಾಣ ಮಾಡಿ, 27 ದೇಶಗಳನ್ನು ಏಕ ವ್ಯಕ್ತಿಯಾಗಿ ಮೋಟಾರ್ ಬೈಕಿನಲ್ಲಿ ಸುತ್ತಿ ಭೂಮಾತೆಯ ಉಸಿರಾದ ಪವಿತ್ರ ಮಣ್ಣನ್ನು ಉಳಿಸುವ ಸಂದೇಶ ಸಾರಿದ್ದಾರೆ. ಈ ನೂರು ದಿನಗಳ ಯಾತ್ರೆಯು, ಲಂಡನ್ನಿನ ಟ್ರಾಫಲ್ಗರ್ ಚೌಕದಿಂದ ಪ್ರಾರಂಭಗೊಂಡು ಕಳೆದ ಜೂನ್ 19ರಂದು ಮೈಸೂರಿನ ಮಾನಸ ಗಂಗೋತ್ರಿ ಬಯಲು ರಂಗಮಂದಿರಕ್ಕೆ ಮೋಟಾರ್ ಬೈಕ್‌ನಲ್ಲೇ ಆಗಮಿಸಿ, ಕಿಕ್ಕಿರಿದ ಸಭೆಯನ್ನು ಉದ್ದೇಶಿಸಿ ಮಾತನಾಡುವುದರೊಂದಿಗೆ ಸಮಾಪ್ತಿಯಾಯಿತು. ಸದ್ಗುರುಗಳ ಭಾಷಣದ ನಂತರ, 'ಮೈಸೂರು ಮಿತ್ರ' ದಿನಪತ್ರಿಕೆಯ ಪರವಾಗಿ ಸುಜಾತ ರಾಜ್‌ಪಾಲ್ ಅವರೊಂದಿಗೆ ನಡೆಸಿದ ವಿಶೇಷ ಸಂದರ್ಶನದ ಪ್ರಮುಖ ಅಂಶಗಳು ನಮ್ಮ ಓದುಗರಿಗಾಗಿ...

ಸಂದರ್ಶಕರು: ಸುಜಾತ ರಾಜ್‌ಪಾಲ್

ಮೈಸೂರು ಮಿತ್ರ : *ಮೈಸೂರಿನೊಂದಿಗೆ ನಿಮಗೆ ಸುದೀರ್ಘ ಕಾಲದ ಸಂಪರ್ಕವಿದೆ. ಈ ಸಾಂಸ್ಕೃತಿಕ ನಗರಿಯ ಯಾವ ಒಂದು ಸಂಗತಿಯನ್ನೂ ಬದಲಾಯಿಸಲು ನೀವು ಇಷ್ಟಪಡುವುದಿಲ್ಲ?*

ಸದ್ಗುರು ಜಗ್ಗಿ ವಾಸುದೇವ್ : ಮೈಸೂರಿನ ಬಗ್ಗೆ ನನಗೆ ವಿಚಿತ್ರವಾದ ಆಕರ್ಷಣೆ ಇದೆ. ಈ ನಗರಕ್ಕೆ ವಿಶಿಷ್ಟವಾದ ದಿವ್ಯ ಪ್ರಭೆಯಿದೆ. ಯಾವುದೇ ಬೆಲೆ ತೆತ್ತಾದರೂ ಸರಿ, ನಾವಿದನ್ನು ಸಂರಕ್ಷಿಸಬೇಕು ಹಾಗೂ ಈ ನಗರವನ್ನು ಅತೀ ವೇಗವಾಗಿ ಬೆಳೆಯುತ್ತಿರುವ ಬೇರೆ ಜನಜಂಗುಳಿ ನಗರದಂತಾಗಲೂ ಯಾವುದೇ ಕಾರಣಕ್ಕೂ ಬಿಡಬಾರದು. ಈಗಾಗಲೇ ಈ ನಗರಕ್ಕೆ ನಾವು ಸಾಕಷ್ಟು ಹಾನಿಯನ್ನು ಮಾಡಿದ್ದೇವೆ. ಆದರೂ ಈ ನಗರದ ಸೊಬಗನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂರಕ್ಷಿಸಲು ಪ್ರಯತ್ನಿಸೋಣ.

ಮೈಸೂರು ಮಿತ್ರ : *ಇತ್ತೀಚೆಗೆ ನಾವು ತಂದೆಯಂದಿರ ದಿನವನ್ನು ಆಚರಿಸಿದ್ದೇವೆ ಮತ್ತು ವಿವಿಧ ಸಂಬಂಧಗಳಿಗೆ ಅರ್ಪಿತವಾದ ಬೇರೆ ಬೇರೆ ದಿನಗಳೂ ಇವೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?*

ಸದ್ಗುರು: ತಂದೆಯರಿಗಾಗಿ ಒಂದೇ ದಿನವೇ (ನಸು ನಗುತ್ತಾ). ಇದನ್ನು ವಾಣಿಜ್ಯ ದೃಷ್ಟಿಯಿಂದ ಮುಂದಕ್ಕೆ ತರಲಾಗಿದೆ. ಅಮೇರೀಕರಣಗೊಂಡ ಬದುಕಿನ ರೀತಿ ವಿವಿಧ ವ್ಯಕ್ತಿಗಳಿಗೆ ಅರ್ಪಿತವಾದ ದಿನಗಳಿವೆ. ಹಾಗಾದರೆ ಸಾಮಾನ್ಯ ಮನುಷ್ಯನಿಗೆ ಅರ್ಪಿತವಾದ ದಿನ ಯಾವುದು? ಭಾರತೀಯ ಸಂಬಂಧಗಳು ವಿಭಿನ್ನವಾಗಿವೆ. ಆದರೆ, ದುರದೃಷ್ಟವಶಾತ್, ನಾವೂ ಇದಕ್ಕೆ ಬಲಿಯಾಗಿದ್ದೇವೆ. ಭಾರತದಲ್ಲಿ ಸಹ ತಂದೆಯವರ ಹಾಗೂ ತಾಯಂದಿರ ದಿನಗಳ ಕಾರ್ಡುಗಳನ್ನು ಮಾರಲಾಗುತ್ತದೆ ಮತ್ತು ಉಪಾಹಾರ ಮಂದಿರಗಳು (ರೆಸ್ಟೋರೆಂಟ್‌ಗಳು) ಇಂತಹ ದಿನಗಳಲ್ಲಿ ವಿಶೇಷ ರಿಯಾಯಿತಿ ನೀಡಿ ಕುಟುಂಬದ ಜೊತೆ ಸಮಯ ಕಳೆಯಲು ಗ್ರಾಹಕರನ್ನು ಆಕರ್ಷಿಸುತ್ತವೆ. ನಿಮ್ಮ ತಂದೆ ಅಥವಾ ತಾಯಿಗೆ ನಿಮ್ಮ ಹೃದಯದಲ್ಲಿ ಪ್ರೀತಿ ಬರೀ ಒಂದೇ ದಿನಕ್ಕೆ ಸೀಮಿತವೇಕೆ? ನಾವು ಪ್ರೀತಿ ಹಾಗೂ ಉದ್ಯೋಗದಿಂದ ವಂಚಿತನಾದ ಬೇರೊಬ್ಬನ ಬಗ್ಗೆ ಯೋಚಿಸಬೇಕು ಹಾಗೂ ಅಂತಹ ದಿನ ಅಂತಹ ಸಂಬಂಧಗಳಿಗೆ ನಿಗದಿಯಾದ ದಿನವಾಗಬಾರದು.

ಮೈಸೂರು ಮಿತ್ರ : *ಇತ್ತೀಚಿನ ದಿನಗಳಲ್ಲಿ ತಂದೆ ತಾಯಿ ತಮ್ಮ ಮಕ್ಕಳಿಗೆ ಒಂದು ಹೊರೆ ಎಂದು ಭಾವಿಸಲಾಗಿದೆ. ಒಂದು ಸಮಾಜವಾಗಿ, ಹಿರಿಯ ತಂದೆತಾಯಿಗಳು ನೆಮ್ಮದಿಯ ಜೀವನವನ್ನು ಸಾಗಿಸಲು ನಾವು ಏನನ್ನಾದರೂ ಮಾಡಬಹುದೇ?*

ಸದ್ಗುರು: ಇಂತಹ ಸಮಸ್ಯೆಯನ್ನು ಈಗ ಮೊದಲನೆಯ ತಲೆಮಾರಿನ ಜನ ಎದುರಿಸುತ್ತಿದ್ದಾರೆ. ಉದ್ಯೋಗದ ಕಾರಣದಿಂದ, ಬಹುತೇಕ ಯುವಜನರು, ತಾವು ಹುಟ್ಟಿದ ಸ್ಥಳದಿಂದ ಬೇರೆ ಕಡೆಗೆ ಹೋಗಬೇಕಾಗುತ್ತದೆ. ತಾವು ಹೋಗುವಾಗ, ತಮಗೆ ಇಷ್ಟವಿದ್ದರೂ ಸಹ, ತಮ್ಮ ತಂದೆ ತಾಯಿಗಳನ್ನು ಸಹ ಜೊತೆಯಲ್ಲಿ ಕರೆದುಕೊಂಡು ಹೋಗಲಾಗುವುದಿಲ್ಲ. ಅನೇಕ ಪ್ರಸಂಗಗಳಲ್ಲಿ, ತಂದೆ ತಾಯಿಗಳೇ ಮಕ್ಕಳ ಜೊತೆ ಹೋಗಲು ಇಷ್ಟಪಡುವುದಿಲ್ಲ, ಏಕೆಂದರೆ ತಮ್ಮ ಸುತ್ತ ಮುತ್ತಲಿನ ಸ್ಥಳದಲ್ಲೇ ಅವರು ನೆಮ್ಮದಿಯಿಂದ ಇರುತ್ತಾರೆ. ಒಂದು ನಿರ್ದಿಷ್ಟ ವಯಸ್ಸಾದ ಮೇಲೆ, ಹೊಂದಿಕೊಳ್ಳುವ ಸಾಮರ್ಥ್ಯ ಅಥವಾ ಮನೋಸ್ಥಿತಿ ಅವರಲ್ಲಿ ಕುಗ್ಗುತ್ತದೆ. ನನ್ನಂತೆ ಅಲೆಮಾರಿಯಾಗದ ಹೊರತು (ಒಳಗೊಳಗೆ ನಗುತ್ತಾ), ನನ್ನ ತಂದೆಯವರು ಮೈಸೂರಿನಲ್ಲಿ ಜೀವಿಸಿದ್ದರು ಹಾಗೂ ಸಾಧ್ಯವಾದಾಗಲೆಲ್ಲಾ ನಾನು ಅವರನ್ನು ಭೇಟಿ ಮಾಡುತ್ತಿದ್ದೆ. ಇತ್ತೀಚೆಗೆ, ಹಿರಿಯ ನಾಗರಿಕರಿಗಾಗಿಯೇ ಮೀಸಲಾದ ಹಲವಾರು ಖಾಸಗಿ ಆಸ್ತಿಗಳು (ಸ್ವತ್ತುಗಳು) ನಿರ್ಮಾಣಗೊಂಡಿವೆ. ಆದರೆ, ಹಿರಿಯ ನಾಗರಿಕರಿಗಾಗಿಯೇ ಮೀಸಲಾದ ಒಂದು ನಗರವನ್ನು ಹೊಂದುವುದು ಬಹಳ ಒಳ್ಳೆಯದು. ಇಲ್ಲಿ ಹಿರಿಯ ನಾಗರಿಕರು ಸುರಕ್ಷಿತವಾಗಿ, ಸ್ವತಂತ್ರವಾಗಿ ಓಡಾಡಿಕೊಂಡಿರಬಹುದು. ಅಂತಹ ನಗರವು ಎಲ್ಲಾ ರೀತಿಯ ಸೌಕರ್ಯಗಳನ್ನು ಹೊಂದಿರಬೇಕು. ಹಾಗೂ ಯಾವೊಬ್ಬರೂ ಯಾವುದಕ್ಕೂ ಹೊರಗೆ ಹೋಗುವಂತಿರಬಾರದು (ಅವರು ಇಷ್ಟಪಟ್ಟರೆ ಮಾತ್ರ ಹೋಗಬಹುದು). ನನದೊಂದು ಪರಿಕಲ್ಪನೆಯನ್ನು ಪ್ರಸ್ತಾಪಿಸಿದ್ದೇನೆ. ಅದೇನೆಂದರೆ, ಐವತ್ತು ಎಕರೆ ಪ್ರದೇಶದಲ್ಲಿ ಒಂದು ಕಟ್ಟಡವನ್ನು ಒಂದು ಎಕರೆಯಲ್ಲಿ ನಿರ್ಮಿಸುವುದು ಹಾಗೂ ಉಳಿದ 49 ಎಕರೆ ಪ್ರದೇಶವನ್ನು ಅರಣ್ಯವಾಗಿ ಪರಿವರ್ತಿಸುವುದು. ಈ ಪರಿಕಲ್ಪನೆಯು ಕಾರ್ಯಸಾಧುವೇ ಎಂಬುದು ನನಗೆ ತಿಳಿದಿಲ್ಲ. ಆದರೆ ಹಿರಿಯ ನಾಗರಿಕರಿಗೆ ಇದೊಂದು ಮಾದರಿಯ ಸನ್ನಿವೇಶವಾಗುತ್ತದೆ.

ಮೈಸೂರು ಮಿತ್ರ : *ಹಿಂದಿನ ತಲೆಮಾರಿನ ಮಕ್ಕಳಿಗೆ ಹೋಲಿಸಿದರೆ, ಇಂದಿನ ಮಕ್ಕಳು ಯಾವ ರೀತಿಯಲ್ಲಿ ಇದ್ದಾರೆ ?*

ಸದ್ಗುರು : ಇವತ್ತು, ಮಕ್ಕಳು ಮನೆಗಳಿಂದ ಕಾಲ್ತೆಗೆದರೆ ಅವರು ನೇರವಾಗಿ ಬೀದಿಗೆ ಬರುತ್ತಾರೆ. ಏಕೆಂದರೆ ಸುತ್ತಮುತ್ತ ಅವರಿಗೆ ಆಟವಾಡಲು ಅಥವಾ ಅವರ ಇನ್ನಿತರೆ ದೈಹಿಕ ವ್ಯಾಯಾಮಕ್ಕೆ ಸೂಕ್ತವಾದ ಸ್ಥಳ ಇರುವುದಿಲ್ಲ. ಮಕ್ಕಳ ಸಮಗ್ರವಾದ ಬೆಳವಣಿಗೆಗೆ ಯಾವುದೇ ಅಡೆತಡೆ ಇಲ್ಲದೆ ಆಟವಾಡುವಂತಿರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಅದು ಸಾಧ್ಯವಿಲ್ಲ. ಮಕ್ಕಳು ಮರ ಹತ್ತದೆ, ಚೇಷ್ಟೆಗಳನ್ನು ಮಾಡದಿದ್ದರೆ, ನೀವೇ ಹೇಳಿ ಅದ್ಯಾವ ರೀತಿಯ ಬಾಲ್ಯ?

ನಾವು ಈಗಾಗಲೇ ನಮ್ಮ ಮಕ್ಕಳಿಗೆ ಸಾಕಷ್ಟು ನಷ್ಟ ಉಂಟು ಮಾಡಿದ್ದೇವೆ ಹಾಗೂ ಭವಿಷ್ಯದಲ್ಲಿ ಇದಕ್ಕಾಗಿ ನಾವು ದೊಡ್ಡ ಬೆಲೆಯನ್ನೇ ತೆರಬೇಕಾಗುತ್ತದೆ. ಹಾಲಿ ಮಕ್ಕಳು ವಾಸಿಸುವಂತಹ ಕ್ಲಿಷ್ಟಕರ ವಾತಾವರಣದಿಂದ, ಮುಂದಿನ 15–20 ವರ್ಷಗಳಲ್ಲಿ ಮನೋವೈಜ್ಞಾನಿಕ ಸಮಸ್ಯೆಗಳು ಹೆಚ್ಚಿ ಅವುಗಳನ್ನು ಪರಿಹರಿಸಲು ಕಷ್ಟವಾಗುವ ಸನ್ನಿವೇಶ ಎದುರಾಗಬಹುದು.

ಮೈಸೂರು ಮಿತ್ರ : *ನಿಜವಾದ ಅರ್ಥದಲ್ಲಿ, ನಮ್ಮ ಮಹಿಳಾ ಸಬಲೀಕರಣವನ್ನು ಯಾವ ರೀತಿ ಮಾಡಬಹುದು.?*

ಸದ್ಗುರು: ನಮ್ಮ ದೇಶದಲ್ಲಿ ಕಾನೂನು ಪುರುಷರಿಗೆ ಮತ್ತು ಮಹಿಳೆಯರಿಗೆ ಒಂದೇ ಆಗಿದೆ. ನಮ್ಮ ಸಮಾಜವು ಪರಿವರ್ತನೆಯ ಹಂತದಲ್ಲಿದೆ. ಹಿಂದೆಲ್ಲಾ, ಮಹಿಳೆಯರು ಗೃಹ ಕೃತ್ಯಗಳನ್ನಷ್ಟೇ ನೋಡಿ ಕೊಳ್ಳುತ್ತಿದ್ದರು. ಪುರುಷರು ಹೊರಗೆ ದುಡಿಯಲು ಹೋಗುತ್ತಿದ್ದರು. ಆದರೆ ಈಗ ಮಹಿಳೆಯರು ಸಹ ದುಡಿಯುತ್ತಿದ್ದಾರೆ. ಎಲ್ಲಾ ಕಡೆಯೂ ಅವರಿದ್ದಾರೆ. ಅದರ ಬಗ್ಗೆ ತಪ್ಪು ಅಥವಾ ಸರಿ ಎಂಬುದಿಲ್ಲ. ಅದು ಸಮಯದ ಅವಶ್ಯಕತೆ ಆಗಿದೆ. ಇಡೀ ದೇಶವೇ ಸಂಕ್ರಮಣದ ಹಾದಿಯಲ್ಲಿದೆ. ಹೀಗಾಗಿ ಅಂತಹ ಸ್ಥಿತ್ಯಂತರ ಸಮಸ್ಯೆಗಳು ಇರುವುದು ಸಹಜ. ಶೈಕ್ಷಣಿಕವಾಗಿ, ಹುಡುಗಿಯರು, ಹುಡುಗರಿಗಿಂತ ಚೆನ್ನಾಗಿ ಓದುತ್ತಿದ್ದಾರೆ, ಅವರ ಬುದ್ಧಿಶಕ್ತಿಯು ಉತ್ತಮವಾಗಿದೆ. ಆದ್ದರಿಂದ, ಮುಂದಿನ ಇಪ್ಪತ್ತು ವರ್ಷಗಳಲ್ಲಿ, ವಾಸ್ತವ ಸಂಗತಿಗಳು ಬೇರೆ ಆಗಬಹುದು. ಮಹಿಳೆಯರು ಪ್ರವರ್ಧಮಾನಕ್ಕೆ ಬಂದು ತಮಗೆ ಸಮಾಜದಲ್ಲಿ ಸಿಗಬೇಕಾದ ಸ್ಥಾನಮಾನಗಳನ್ನು ಪಡೆಯುವ ದಿನಗಳಿಗಾಗಿ ಕಾದು ನೋಡಿ.

ಮೈಸೂರು ಮಿತ್ರ : *ಇಂದಿನ ಡಿಜಿಟಲ್ ಗೊಂದಲ ಮತ್ತು ಚಟಗಳನ್ನು ಯಾವ ರೀತಿಯಲ್ಲಿ ಎದುರಿಸಬೇಕು?*

ಸದ್ಗುರು : ಜನರು ಫೋನುಗಳು, ಟೀ, ಗಾಸಿಪ್ ಇತ್ಯಾದಿಗಳಿಗೆ ದಾಸರಾಗಿದ್ದಾರೆ. ಚಟ ಎಂದರೆ, ನೀವು ನಿಮಗೆ ಗೊತ್ತಾಗದ ರೀತಿಯಲ್ಲಿ ಬೇರ್‍ಯಾವುದರಿಂದಲೋ ಆಳಲ್ಪಡುತ್ತೀರಿ. ಜಾಗೃತರಾಗುವುದಕ್ಕಿಂತ ಬೇರೆ ರೀತಿಯ ಪರಿಹಾರವಿಲ್ಲ.ನಾವು ಪ್ರಜ್ಞಾವಂತರಲ್ಲದೆ ಹೋದರೆ, ನಮ್ಮನ್ನು ನಾವೇ ನಾಶ ಮಾಡಿಕೊಳ್ಳುತ್ತೇವೆ. ಒಂದು ಜಾಗೃತ್ರಾಹ ನಮ್ಮೆಲ್ಲಾ ತೊಂದರೆಗಳಿಗೂ ಪರಿಹಾರ. ನಾವು ಪ್ರಪಂಚ ಜಾಗೃತವಾಗಬೇಕೆಂದು ಬಯಸಿದರೆ, ನಾವು ಜನರ ಜಾಗೃತಿಯ ಬಗ್ಗೆ ಹೇಳುತ್ತಿದ್ದೇವೆ ಅಂದುಕೊಳ್ಳಬೇಕು. ಈ ದಿಕ್ಕಿನಲ್ಲಿ, ನಾವು ಒಂದು "ಕಾನ್ಶಿಯಸ್ ಪ್ಲಾನೆಟ್ ಸೆಂಟರ್"ಅನ್ನು ಹಾರ್ವರ್ಡ್ ಮೆಡಿಕಲ್ ಸ್ಕೂಲಿನಲ್ಲಿ ಪ್ರಾರಂಭಿಸಿದ್ದು, ಮನುಷ್ಯರ ಪ್ರಜ್ಞಾವಂತಿಕೆಯನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಬೇಕು ಮತ್ತು ಮಾಗುವಿಕೆ ಮತ್ತು ಚೇತರಿಕೆಯ ಬಗ್ಗೆ ಮಾರ್ಗೋಪಾಯಗಳ ಅನ್ವೇಷಣೆ ನಡೆಸಿದ್ದೇವೆ.

ಮೈಸೂರು ಮಿತ್ರ : *ಇತ್ತೀಚಿನ ದಿನಗಳಲ್ಲಿ ವಿವಿಧ ರೀತಿಯ ಆಹಾರ ಅಭ್ಯಾಸಗಳಿವೆ. ತಮಗೆ ಯಾವ ರೀತಿಯ ಆಹಾರ ಶೈಲಿ ಉತ್ತಮವೆಂದು ಜನ ಹೇಗೆ ಕಂಡುಕೊಳ್ಳುತ್ತಾರೆ ?*

ಸದ್ಗುರು : ಜನರು ವಿಲಕ್ಷಣವಾಗಿ ಪರಿಗಣಿತ ರೀತಿಯ ಆಹಾರಗಳನ್ನು ತಿನ್ನಬಾರದು. ಆಹಾರದ ಬಗ್ಗೆ ನಾನೊಂದು ಪುಸ್ತಕ ಹೊರತರಲಿದ್ದೇನೆ. ಆದ್ದರಿಂದ ಅದರ ಬಗ್ಗೆ ಮಾತನಾಡುವುದಿಲ್ಲ (ಒಳಗೊಳಗೆ ನಗುತ್ತ). ಹಿಂದೆ ಬಹುತೇಕ ಜನರು ರಾಗಿ, ಜೋಳ, ಜವೆ ಅಥವಾ ಇತರೆ ಸಿರಿಧಾನ್ಯಗಳನ್ನು ಉಪಯೋಗಿಸುತ್ತಿದ್ದರು. ಆದರೆ ಈಗ ನಾವು ಮುಖ್ಯವಾಗಿ ಬಿಳಿಯ ಅನ್ನವನ್ನು ತಿನ್ನುತ್ತಿದ್ದೇವೆ. ಬಡ ಜನರ ಆಹಾರ ಎಂದು ಪರಿಗಣಿಸಲ್ಪಟ್ಟಿರುವ ರಾಗಿ ನಿಜವಾಗಿ ಅತ್ಯುತ್ತಮ ಆಹಾರವಾಗಿದೆ.

ಈ ವರ್ಷವನ್ನು ಸಿರಿಧಾನ್ಯಗಳ ವರ್ಷ ಎಂದು ಘೋಷಿಸಲಾಗಿದೆ. ಬಿಳಿಯ ಅನ್ನದಿಂದ ಪ್ರಭಾವಿತರಾಗಿ ಅದಕ್ಕೆ ಒಗ್ಗಿಕೊಂಡಿರುವ ಜನರನ್ನು ಸಿರಿಧಾನ್ಯಗಳು ಆಕರ್ಷಿಸಲಾರವು. ಅಂತಹ ಪ್ರವೃತ್ತಿ ಬದಲಾಗಬೇಕಿದೆ. ಹಿಂದಿನ ಕಾಲದಲ್ಲಿ, ನಾವು ಚೆನ್ನಾಗಿ ತಿನ್ನುತ್ತಿದ್ದೆವು. ಆದರೆ ನಮಗೆ ತಿನ್ನಲು ಸಾಕಷ್ಟು ಆಹಾರ ಇರುತ್ತಿರಲಿಲ್ಲ. ಆದರೆ ಈಗ ಆಹಾರದ ಉತ್ಪಾದನೆ ಹೆಚ್ಚಾಗಿದೆ, ಅದೇ ರೀತಿ ಜನಸಂಖ್ಯೆ ಕೂಡ ಹೆಚ್ಚಿದೆ. ನನ್ನ ಮುತ್ತಜ್ಜಿ 113 ವರ್ಷಗಳ ಕಾಲ ಬದುಕಿದ್ದರು. ಏಕೆಂದರೆ ಆ ಕಾಲಗಳಲ್ಲಿ ಜನರು ಮುಖ್ಯವಾಗಿ ಸಿರಿಧಾನ್ಯಗಳನ್ನು ಸೇವಿಸುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಆಹಾರ ಫ್ಯಾಷನ್ ಆಗಿಬಿಟ್ಟಿದೆ ಹಾಗೂ ಇದು ಬದಲಾಗುತ್ತಾ ಹೋಗುತ್ತಿದೆ. ನೀವು ಏನನ್ನು ತಿನ್ನುತ್ತೀರಿ ಎನ್ನುವುದರ ಜೊತೆಗೆ ಯಾವ ರೀತಿಯಲ್ಲಿ ತಿನ್ನುತ್ತೀರಿ ಎಂಬುದು ಸಹ ಮುಖ್ಯವಾಗುತ್ತದೆ. ಆರೋಗ್ಯದ ಬಗ್ಗೆ ಅತಿಯಾದ ಕಾಳಜಿ ವಹಿಸುವುದು ಸಹ ಒಂದು ಕಾಯಿಲೆಯೇ. ನಾವು ಹುಟ್ಟಿದ್ದೇವೆ ಮತ್ತು ಒಂದು ದಿನ ಸಾಯುತ್ತೇವೆ. ಆದ್ದರಿಂದ ನಮ್ಮ ತಲೆಗಳಲ್ಲಿ ಆಮ್ಲವನ್ನು ಏಕೆ ಉತ್ಪತ್ತಿ ಮಾಡಿಕೊಳ್ಳಬೇಕು.


ಮೈಸೂರು ಮಿತ್ರ : *ಶಾಶ್ವತವಾದ ಸುಖವನ್ನು, (ಆನಂದವನ್ನು) ನಾವು ಹೇಗೆ ಪಡೆಯಬಹುದು ?*

ಸದ್ಗುರು: ಮಾನವರೇ ಶಾಶ್ವತರಲ್ಲ. ಆದ್ದರಿಂದ ಅವರಿಗೆ ಶಾಶ್ವತ ಸುಖ ಹೇಗೆ ದೊರಕಬಲ್ಲದು. ನಾವು ಆಕಸ್ಮಿಕವಾಗಿ ಜನಿಸುತ್ತೇವೆ. ಆದ್ದರಿಂದ ಒಂದಲ್ಲಾ ಒಂದು ದಿನ ಅದು ಮುಗಿಯಲೇಬೇಕು. ಈ ಭೂಗ್ರಹದಲ್ಲಿ ನಮಗೆ ಸೀಮಿತವಾದ ಸಮಯವಿದೆ. ಆದರೆ ದುರದೃಷ್ಟವಶಾತ್, ನಾವು ಯಾವಾಗಲೂ ಇಲ್ಲಿಯೇ ಇರುತ್ತೇವೆ ಎಂಬುದಾಗಿಯೇ ಯೋಚಿಸುತ್ತೇವೆ. ನಮ್ಮ ಬದುಕು ಸವೆದು ಹೋಗುತ್ತಿದೆ (ಮುಗಿದು ಹೋಗುತ್ತಿದೆ) ಎಂಬುದನ್ನು ನಾವು ಅರಿತರೆ, ನಾವು ನಮ್ಮಷ್ಟಕ್ಕೆ ಉತ್ತಮ ರೀತಿಯಲ್ಲಿ ಸಂಘಟಿತರಾಗಬಹುದು ಹಾಗೂ ನಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಬಹುದು. ನಮ್ಮ ಮರಣಾಧೀನದ (ಅಶಾಶ್ವತ) ಸ್ಥಿತಿಯ ಬಗ್ಗೆ ಜಾಗೃತರಾಗಿರುವುದು ಅತ್ಯಂತ ಮುಖ್ಯವಾಗಿದೆ. ಇದು ನಮ್ಮ ಬದುಕನ್ನು ಹಸನಾಗಿಸಲು ಸಹಕಾರಿಯಾಗುತ್ತದೆ. ■



ಸದ್ಗುರುಗಳನ್ನು ಸಂದರ್ಶಿಸುತ್ತಿರುವ ಸುಜಾತ ರಾಜ್‌ಪಾಲ್

ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್‌ಗೆ ಪ್ರವೇಶ



ಬೆಂಗಳೂರು, ಜು. 5(ಕೆ.ಎಂ.ಶಿ)–ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2022–23ನೇ ಶೈಕ್ಷಣಿಕ ಸಾಲಿನಲ್ಲಿ (ಜುಲೈ ಆವೃತ್ತಿ) ವಿವಿಧ ಕೋರ್ಸುಗಳಿಗೆ ಪ್ರವೇಶಾತಿಯನ್ನು ಆರಂಭಿಸಿದೆ. ಈ ಕೋರ್ಸುಗಳಿಗೆ ನಿಗದಿತ ಶುಲ್ಕ ತುಂಬಿ, ಮಲ್ಲೇಶ್ವರಂನಲ್ಲಿರುವ ಮಹಿಳಾ ಪ್ರಾದೇಶಿಕ ಕೇಂದ್ರದ ಮೂಲಕವು ಪ್ರವೇಶ ಪಡೆಯಬಹುದಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ. ಈ ಬಗ್ಗೆ ಮಂಗಳವಾರ ಮಾಧ್ಯಮ ಪ್ರಕಟಣೆ ನೀಡಿರುವ ಅವರು, 'ರಾಜ್ಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಮಾತ್ರ ದೂರಶಿಕ್ಷಣ ನೀಡಲು ನಿಯಮಾನುಸಾರ ಅರ್ಹತೆ ಪಡೆದಿರುವ ಏಕೈಕ ಸಂಸ್ಥೆಯಾಗಿದೆ. ಆದ್ದರಿಂದ ಆಸಕ್ತರು, ಇತರೆ ಸಂಸ್ಥೆಗಳ ಜಾಹೀರಾತು/ಸುಳ್ಳು ಮಾಹಿತಿಗಳನ್ನು ನಂಬಿ, ಮೋಸ ಹೋಗಬಾರದು' ಎಂದು ಸ್ಪಷ್ಟಪಡಿಸಿದ್ದಾರೆ.

ಆಸಕ್ತರು ಮುಕ್ತ ವಿ.ವಿ.ಯ ಅಧಿಕೃತ ಜಾಲತಾಣ www.ksoumysuru.ac.in ಗೆ ಭೇಟಿ ನೀಡಿ, ಅಲ್ಲಿ ಪ್ರವೇಶಾತಿ ಪೋರ್ಟಲ್ ಮೂಲಕ ತಮಗೆ ಆಸಕ್ತಿ ಇರುವ ಕೋರ್ಸುಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡಬೇಕು. ನಂತರ, ಮಲ್ಲೇಶ್ವರಂ 4ನೇ ಮುಖ್ಯರಸ್ತೆಯ 13ನೇ ಅಡ್ಡರಸ್ತೆಯಲ್ಲಿರುವ ಸರಕಾರಿ ಪದವಿಪೂರ್ವ ಬಾಲಕಿಯರ ಕಾಲೇಜು ಆವರಣದಲ್ಲಿರುವ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ತೆರಳಿ, ಶುಲ್ಕ ಪಾವತಿಸಿ, ಪ್ರವೇಶಾತಿ ಪ್ರಕ್ರಿಯೆ ಮುಗಿಸಿಕೊಳ್ಳಬೇಕು ಎಂದು ಅವರು ಮಾಹಿತಿ ನೀಡಿದ್ದಾರೆ.

ನಿಯಮಾವಳಿ ಪ್ರಕಾರ, ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ವಿದ್ಯಾರ್ಥಿನಿಯರಿಗೆ, ರಕ್ಷಣಾ ಪಡೆಗಳ ನಿವೃತ್ತ ಸಿಬ್ಬಂದಿ/ಯೋಧರಿಗೆ, ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ಕೊಡಲಾಗುವುದು. ಜತೆಗೆ, ಕೋವಿಡ್ ಪಿಡುಗಿನಲ್ಲಿ ತಂದೆ–ತಾಯಿಗಳನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ, ತೃತೀಯ ಲಿಂಗಿಗಳಿಗೆ ಹಾಗೂ ದೃಷ್ಟಿಹೀನರಿಗೆ ಪೂರ್ಣ ಶುಲ್ಕ ವಿನಾಯಿತಿ ಇರಲಿದೆ. ಈ ಪೈಕಿ, ದೃಷ್ಟಿಹೀನರಿಗೆ ಬಿ.ಎಡ್ ಮತ್ತು ಎಂಬಿಎ ಕೋರ್ಸುಗಳನ್ನು ಹೊರತುಪಡಿಸಿ, ಉಳಿದ ಕೋರ್ಸುಗಳಿಗೆ ಈ ವಿನಾಯಿತಿ ಸಿಗುತ್ತದೆ ಎಂದು ಅವರು ವಿವರಿಸಿದ್ದಾರೆ. ಯುಜಿಸಿ ನಿಯಮಗಳ ಪ್ರಕಾರ, ವಿದ್ಯಾರ್ಥಿಗಳು ಭೌತಿಕವಾಗಿ ಒಂದು ಪೂರ್ಣಾವಧಿ ಕೋರ್ಸ್ ಮತ್ತು ದೂರಶಿಕ್ಷಣದಲ್ಲಿ ಒಂದು ಕೋರ್ಸನ್ನು ಏಕಕಾಲದಲ್ಲಿ ಅಧ್ಯಯನ ಮಾಡಲು ಅವಕಾಶವಿದೆ. ಆದ್ದರಿಂದ ಆಸಕ್ತರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅಶ್ವತ್ಥನಾರಾಯಣ ಮನವಿ ಮಾಡಿಕೊಂಡಿದ್ದಾರೆ. ವಿವರಗಳಿಗೆ ಸಂಪರ್ಕಿಸಿ: 08–23448811, 97411–97921, 96203–95584 ಮತ್ತು 77608–48564.

ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ವಿವಿಧ ಕೋರ್ಸ್‌ಗೆ ಇಗ್ನೋದಿಂದ ಅರ್ಜಿ ಆಹ್ವಾನ

ಮೈಸೂರು,ಜು.5(ಪಿಎಂ)–ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದಿಂದ (ಇಗ್ನೋ) 2022ರ ಸಾಲಿಗೆ ಸ್ನಾತಕ, ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ಡಿಪ್ಲೊಮಾ ಸೇರಿದಂತೆ ವಿವಿಧ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಇಗ್ನೋ ಬೆಂಗಳೂರು ಪ್ರಾದೇಶಿಕ ಕೇಂದ್ರದ ಸಹಾಯಕ ಪ್ರಾದೇಶಿಕ ನಿರ್ದೇಶಕಿ ಡಾ.ಹೆಚ್.ಸಿ.ಹೇಮಮಾಲಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದಡಿ ಕೇಂದ್ರೀಯ ವಿವಿಯಾಗಿ ಇಗ್ನೋ ಕಾರ್ಯನಿರ್ವಹಿಸುತ್ತಿದೆ. ಪ್ರತಿ ರಾಜ್ಯದ ರಾಜಧಾನಿ ಮತ್ತು ಪ್ರಮುಖ ನಗರಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಇಗ್ನೋ ಹೊಂದಿದ್ದು, ಅಂತೆಯೇ ಬೆಂಗಳೂರಿನಲ್ಲೂ ಪ್ರಾದೇಶಿಕ ಕೇಂದ್ರ ಹೊಂದುವ ಮೂಲಕ ಮೈಸೂರು ಸೇರಿದಂತೆ ದಕ್ಷಿಣ ಕರ್ನಾಟಕದಲ್ಲಿ ತನ್ನ ಕಾರ್ಯವ್ಯಾಪ್ತಿ ಹೊಂದಿದೆ ಎಂದರು.

ದೂರಶಿಕ್ಷಣದ ಮೂಲಕ ಶಿಕ್ಷಣ ನೀಡುವ ನಮ್ಮ ವಿವಿಯ ಎಲ್ಲಾ ಪದವಿಗಳು, ಬೇರೆಲ್ಲಾ ವಿವಿಗಳ ಪದವಿಗೆ ಸಮಾನ. ಮೈಸೂರು ಹಾಗೂ ಮೈಸೂರು ಸುತ್ತಮುತ್ತಲ ಜಿಲ್ಲೆಗಳ ಶೈಕ್ಷಣಿಕ ಅರ್ಹತೆ ಹೊಂದುವ ಆಕಾಂಕ್ಷಿಗಳಿಗೆ 1987ರಲ್ಲಿ ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಯ ಅಧ್ಯಯನ ಕೇಂದ್ರ ಪ್ರಾರಂಭಿಸಲಾಗಿದೆ. ಇಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಕೌನ್ಸಿಲಿಂಗ್ ತರಗತಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.


ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜು.30 ಕಡೆ ದಿನ. ಅರ್ಜಿ ಸಲ್ಲಿಸಲು ವಿವಿಯ ವೆಬ್‌ಸೈಟ್‌ಗೆ (www.ignou.ac.in/ignou.samarth.edu.in) ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ಶೇಷಾದ್ರಿ ಅಯ್ಯರ್ ರಸ್ತೆಯ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಇಗ್ನೋ ಅಧ್ಯಯನ ಕೇಂದ್ರಕ್ಕೆ ಮಧ್ಯಾಹ್ನ 3.30ರಿಂದ ಸಂಜೆ 5.30ರೊಳಗೆ ಭೇಟಿ ನೀಡಬಹುದು. ದೂರವಾಣಿ ಸಂಖ್ಯೆ 0821–2423374, 99012 36476 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ವಿವಿಯ ಸಿಬ್ಬಂದಿಯಾದ ಪ್ರೊ.ಆರ್.ಸಿದ್ದರಾಜು, ರಮೇಶ್, ರವಿ ಗೋಷ್ಠಿಯಲ್ಲಿದ್ದರು.



ರಾಜ್ಯ ಸರ್ಕಾರದ ಭರವಸೆ ಹಿನ್ನೆಲೆಯಲ್ಲಿ ಮುಷ್ಕರವನ್ನು ಕೈಬಿಟ್ಟ ಪೌರ ಕಾರ್ಮಿಕರು ಮಂಗಳವಾರ ದಿನವಿಡೀ ಮೈಸೂರು ನಗರದೆಲ್ಲೆಡೆ ಸಮರೋಪಾದಿ ಸ್ವಚ್ಛತಾ ಕಾರ್ಯ ನಡೆಸಿದರು. ಸೇವೆ ಖಾಯಂಗೆ ಆಗ್ರಹಿಸಿ, ರಾಜ್ಯಾದ್ಯಂತ ಜು.1ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗಿತ್ತು. ವಿಶೇಷ ಸಮಿತಿ ವರದಿ ನೀಡಿದ 3 ತಿಂಗಳೊಳಗೆ ಖಾಯಂಗೊಳಿಸುವ ಪ್ರಕ್ರಿಯೆ ಆರಂಭಿಸುವುದಾಗಿ ಸರ್ಕಾರ ಭರವಸೆ ನೀಡಿದ್ದರಿಂದ ಸೋಮವಾರ ಮುಷ್ಕರ ಕೈಬಿಡಲಾಯಿತು.

ಪಿಎಸ್‌ಐ ನೇಮಕಾತಿ ಪ್ರಕರಣದ ತನಿಖೆಯಲ್ಲಿ ಗೃಹ ಸಚಿವರು ಪ್ರಾಮಾಣಿಕ

ಸಿಎಂ ಬೊಮ್ಮಾಯಿ ಸಮರ್ಥನೆ



ಬೆಂಗಳೂರು, ಜು. 5(ಕೆ.ಎಂ.ಶಿ)–ಪಿಎಸ್‌ಐ ನೇಮಕಾತಿ ಪ್ರಕರಣ ಗಮನಕ್ಕೆ ಬಂದ ತಕ್ಷಣವೇ ಪ್ರಾಥಮಿಕ ತನಿಖೆ ಮಾಡಿಸಿ, ಕೂಡಲೇ ಸಿಐಡಿ ತನಿಖೆಗೆ ವಹಿಸಲಾಯಿತು. ಅತ್ಯಂತ ಪ್ರಾಮಾಣಿಕವಾಗಿ, ದಕ್ಷತೆಯಿಂದ ಗೃಹ ಸಚಿವರು ಕೆಲಸ ಮಾಡಿದ್ದಾರೆ. ಅವರ ಪ್ರಾಮಾಣಿಕತೆ ಮತ್ತು ದಕ್ಷತೆ ಇರುವುದರಿಂದಲೇ ಪ್ರಕರಣ ಹೊರಬಂದಿದೆ. ಗೃಹ ಸಚಿವರ ರಾಜಿನಾಮೆ ಕೇಳಲು ಕಾಂಗ್ರೆಸ್‌ಗೆ ನೈತಿಕ ಹಕ್ಕಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ತಮ್ಮ ನಿವಾಸದ ಬಳಿ ಇಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರ ಕಾಲದಲ್ಲಿ ಪಿಎಸ್‌ಐ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ಪ್ರಕರಣ ದಾಖಲಾಗಿ ಹಿರಿಯ ಪೋಲಿಸ್ ಅಧಿಕಾರಿ ಆರೋಪಿಯಾಗಿದ್ದರು. ಮುಂದೆ ಏನಾಯಿತು ಬಂಧನ ದೂರದ ಮಾತು, ಅವರನ್ನು ವಿಚಾರಣೆಯೂ ಮಾಡಲಿಲ್ಲ.

ಇಂಥ ದಿಟ್ಟ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂದರೆ, ಅಧಿಕಾರಿಗಳಿಗೆ ಯಾವುದೇ ಮುಲಾಜಿಗೆ ಒಳಗಾಗದೆ ತನಿಖೆ ಕೈಗೊಳ್ಳಲು ಮುಕ್ತ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಲಾಗಿದೆ.

ನಮಗೆ ಇಂಥ ಚಟುವಟಿಕೆಗಳ ಬಗ್ಗೆ ಜೀರೋ ಟಾಲರೆನ್ಸ್ ಇದೆ ಹಾಗೂ ವ್ಯವಸ್ಥೆಯನ್ನು ಸ್ವಚ್ಛಗೊಳಿಸಲು ದೊಡ್ಡವರಾಗಲೀ, ಸಣ್ಣವರಾಗಲೀ ಸ್ವಚ್ಛ ಮಾಡುವ ಕೆಲಸ ನಿರಂತರವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಈ ಕೆಲಸ ಮಾಡಿದ್ದೇವೆ. ಕಾಂಗ್ರೆಸ್ ಇದ್ದಿದ್ದರೆ, ಇದೇ ಪ್ರಕರಣವನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುತ್ತಿದ್ದರು. ಹಿಂದೆ ಹೀಗೆ ಮಾಡಿದ್ದಾರೆ. ವಿವರಗಳನ್ನು ಕೊಡಲು ನಾನು ಸಿದ್ಧ. ಯಾರ ರಾಜೀನಾಮೆಯನ್ನು ಕೇಳುವ ಹಕ್ಕು ಅವರಿಗಿಲ್ಲ ಎಂದರು.

ಪ್ರಕರಣದಲ್ಲಿ 50 ಜನರನ್ನು ಬಂಧಿಸಲಾಗಿದ್ದು, 20 ಜನ ಪೊಲೀಸ್ ಅಧಿಕಾರಿಗಳೇ ಇದ್ದಾರೆ. ಯಾರನ್ನು, ಯಾವುದನ್ನೂ ಮುಚ್ಚಿಡುವ ಪ್ರಯತ್ನ ಮಾಡಿಲ್ಲ. ಬಹಳ ನಿಯತ್ತಿನಿಂದ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಯಾರೂ ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ. ಅವರು ಇದ್ದುದ್ದರಿಂದಲೇ ಇದೊಂದು ಅಂತಿಮ ಘಟ್ಟ ಮುಟ್ಟಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಗೃಹ ಸಚಿವರು ಸದನವನ್ನು ತಪ್ಪು ದಾರಿಗೆ ಎಳೆದಿದ್ದರಿಂದ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಆ ಸಂದರ್ಭದಲ್ಲಿ ಮಾಹಿತಿ ಇರಲಿಲ್ಲ. ಮಾಹಿತಿ ಗೊತ್ತಾದ ಬಳಿಕ ಏನು ಮಾಡಿದರು, ಎಷ್ಟು ದಕ್ಷತೆಯಿಂದ ಮಾಡಿದರು ಎನ್ನುವುದು ಮುಖ್ಯವಾಗುತ್ತದೆ ಎಂದರು. ವಿರೋಧಪಕ್ಷದವರು ಗಾಳಿಯಲ್ಲಿ ಹೇಳಿಕೆ ನೀಡುವುದಲ್ಲ. ಸರ್ಕಾರ ಗಂಭೀರವಾಗಿ ಪರಿಗಣಿಸಿರದಿದ್ದರೆ, ಪ್ರಕರಣ ಹೊರಗೆ ಬರುತ್ತಿರಲಿಲ್ಲ. ಸಿಐಡಿ, ಎಸಿಬಿ ಒಳ್ಳೆ ಕೆಲಸ ಮಾಡಿದ್ದಾರೆ. ಎಲ್ಲಿ ಪುರಾವೆ ಇದೆಯೋ ಅಲ್ಲಿ ತನಿಖೆ ಮಾಡಲಾಗಿದೆ. ಪುರಾವೆ ಇಲ್ಲದೆ ಏನೂ ಮಾಡಲಾಗುವುದಿಲ್ಲ ಎಂದರು.

ಪಿಎಸ್‌ಐ ನೇಮಕಾತಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ; ಎಡಿಜಿಪಿ ಬಂಧನ

ಮುಖ್ಯಮಂತ್ರಿ, ಗೃಹ ಸಚಿವರ ರಾಜೀನಾಮೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹ


- ಮೊದಲಿನಿಂದಲೂ ಹಗರಣ ಮುಚ್ಚಿಹಾಕುವ ಯತ್ನ ನಡೆದಿತ್ತು
- ಸದನಕ್ಕೂ ತಪ್ಪು ಮಾಹಿತಿ ನೀಡಿ; ಜನರಿಗೂ ತಪ್ಪು ಸಂದೇಶ ನೀಡಲಾಯಿತು

ಬೆಂಗಳೂರು, ಜು.5(ಕೆ.ಎಂ.ಶಿ)–ಪಿಎಸ್‌ಐ ಅಕ್ರಮ ಪ್ರಕರಣದಲ್ಲಿ ಎಡಿಜಿಪಿ ಅಮೃತ್ ಪೌಲ್ ಅವರ ಬಂಧನವಾಗಿದ್ದು, ಸರ್ಕಾರ ಈ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ. ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ರಾಜ್ಯಪಾಲರೇ ರಾಜ್ಯ ಸರ್ಕಾರವನ್ನು ವಜಾಗೊಳಿಸಿ, ರಾಜ್ಯದ ಮಾನ ಉಳಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿಂದು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಈಗ ನಡೆದಿರುವ ಬೆಳವಣಿಗೆ ಕರ್ನಾಟಕಕ್ಕೆ ಕಪ್ಪು ಚುಕ್ಕೆಯಾಗಿದೆ. ಚುಕ್ಕೆ ಚಿಕ್ಕದಾಗಿ ಕಾಣುತ್ತಿರಬಹುದು. ಆದರೆ ಇದರಿಂದ ರಾಜ್ಯದ ಆಡಳಿತ ಹಾಗೂ ಘನತೆಗೆ ಮಸಿ ಬಳಿದಂತಾಗಿದೆ. ಈ ಸಮಯದಲ್ಲಿ ಜನಸಾಮಾನ್ಯರ ರಕ್ಷಣೆಗೆ ಬಂದಿರುವ ನ್ಯಾಯಾಂಗಕ್ಕೆ ಸಾಷ್ಟಾಂಗ ನಮಸ್ಕರಿಸುವೆ. ಆದರೆ ರಾಜ್ಯದಲ್ಲಿ ನ್ಯಾಯಾಂಗಕ್ಕೂ ರಕ್ಷಣೆ ಇಲ್ಲದಂತಾಗಿದೆ.

ನ್ಯಾಯಮೂರ್ತಿಗಳು ತಮ್ಮ ಸ್ಥಾನಕ್ಕೆ ಕಂಟಕ ಬಂದಿರುವ ರೀತಿ ದುಗುಡ ಹೇಳಿಕೊಂಡಿದ್ದಾರೆ. ಪ್ರತಿ ಸಂದರ್ಭದಲ್ಲಿ ನ್ಯಾಯಾಲಯ ಏನು ಹೇಳಿದೆ, ಸರ್ಕಾರ ಏನು ಬಯಸಿದೆ, ಈ ಹಗರಣದಲ್ಲಿ ಮಾಹಿತಿ ನೀಡದೇ ಮುಚ್ಚಿಹಾಕಲು ಹೇಗೆ ಪ್ರಯತ್ನಿಸಿದೆ ಎಂಬುದು ದಾಖಲೆಗಳಿಂದ ಜಗಜ್ಜಾಹೀರಾಗಿದೆ.

545 ಪಿಎಸ್‌ಐ ಹುದ್ದೆಗಳಿಗೆ 1.20 ಲಕ್ಷ ಯುವಕರು ಅರ್ಜಿ ಹಾಕಿ, ಅದರಲ್ಲಿ 52 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅರ್ಹರಾಗುತ್ತಾರೆ. ಸುಮಾರು 300 ಹುದ್ದೆಗಳ ನೇಮಕ ಅಕ್ರಮವಾಗಿ ಆಗಿದೆ. ಪಿಎಸ್‌ಐ ನೇಮಕ ಅಕ್ರಮದಲ್ಲಿ ಅಂಗಡಿ ಓಪನ್ ಆಗಿತ್ತು. ಉಪ್ಪಿನಂಗಡಿ ಓಪನ್ ಇದ್ದ ಕಾರಣಕ್ಕೆ ಅದನ್ನು ಕೊಳ್ಳಲು ಯುವಕರು ಹೋಗಿದ್ದರು. ಅಂಗಡಿ ತೆಗೆಯದಿದ್ದರೆ ಯುವಕರು ಹೋಗುತ್ತಿದ್ದರೆ? ಈ ಉಪ್ಪಿನಂಗಡಿ ಯಾರದ್ದು? ಎಂಬ ತನಿಖೆ ಆಗಬೇಕು. ಆದರೆ ಸರ್ಕಾರ ಈ ಅಕ್ರಮದಲ್ಲಿ ಶಾಮೀಲಾಗಿ ಕೇವಲ ಖರೀದಿ ಮಾಡಿದವರನ್ನು ಮಾತ್ರ ಬಂಧಿಸಿ, ದೊಡ್ಡವರನ್ನು ಬಿಟ್ಟಿದೆ. ಈಗ ಎಡಿಜಿಪಿ ವಿಚಾರಣೆ ಮಾಡಿದ್ದು, ಹಿರಿಯ ಐಪಿಎಸ್ ಅಧಿಕಾರಿಯನ್ನು ಬಂಧಿಸಿದ್ದಾರೆ. ಬಂಧಿಸಿದ ಅರ್ಧಗಂಟೆಯಲ್ಲಿ ಆರೋಗ್ಯ ಪರೀಕ್ಷೆಗೆ ಕಳಿಸುತ್ತೀರಲ್ಲ, ನಿಮಗೆ ನಾಚಿಕೆ ಆಗುವುದೇ ಇಲ್ಲವೇ? ಯಾವುದೇ ವಿಚಾರಣೆ ಮಾಡಬೇಕಾದರೆ, ಅವರ ಹೇಳಿಕೆ, ಅವರ ಕೆಳ ಅಧಿಕಾರಿಗಳ ಹೇಳಿಕೆ, ಸರಿಯಾಗಿದೆಯೇ, ಇಲ್ಲವೇ ಎಂದು ಸುದೀರ್ಘ ಚರ್ಚೆ ನಡೆಸಿ ದಾಖಲಾತಿ ಸಂಗ್ರಹಿಸಿದ ನಂತರ ಅವರನ್ನು ವೈದ್ಯರ ಪರೀಕ್ಷೆಗೆ ಕಳುಹಿಸುವುದು ವಾಡಿಕೆ. ಕೋರ್ಟ್ ಹೇಳಿತೆಂದು ಅರ್ಧಗಂಟೆಯಲ್ಲಿ ಬಂಧಿಸಲಾಗಿದೆ. ಎಡಿಜಿಪಿ ಅವರ ಬಂಧನ ಕೇವಲ ನ್ಯಾಯಾಂಗ ಹಾಗೂ ಜನರ ಕಣ್ಣೊರೆಸುವ ತಂತ್ರವಾಗಿದೆ. ಬೇರೊಂದು ಪ್ರಕರಣದಲ್ಲಿ ಅಲೋಕ್ ಕುಮಾರ್ ಅವರನ್ನು ದಿನವಿಡೀ ವಿಚಾರಣೆ ಮಾಡಿದ್ದೀರಿ. ರಾಹುಲ್ ಗಾಂಧಿ ಅವರಿಗೆ 50 ತಾಸುಗಳ ವಿಚಾರಣೆ ಮಾಡಿದ್ದೀರಿ. ಆದರೆ ಈ ಪ್ರಕರಣದಲ್ಲಿ ಕೇವಲ ಅರ್ಧ ಗಂಟೆಯಲ್ಲಿ ವಿಚಾರಣೆ ಮುಗಿಸಿದ್ದೀರಿ.



ಈ ಪ್ರಕರಣದಲ್ಲಿ ಸುಮಾರು 300 ರಿಂದ 500 ಕೋಟಿಯಷ್ಟು ಅವ್ಯವಹಾರ ನಡೆದಿದೆ ಎಂಬ ಮಾತುಗಳು ಕೇಳಿ ಬಂದಿವೆ. ಇದೆಲ್ಲದರ ಸಂಪೂರ್ಣ ವಿಚಾರಣೆ ಮಾಡದೇ ಅವರನ್ನು ಬಂಧಿಸಿ ವಿಚಾರಣೆ ಮುಕ್ತಾಯಗೊಳಿಸಲು ಮುಂದಾಗಿದ್ದಾರೆ. ನಿನ್ನೆ ಡಿಸಿ ಹಾಗೂ ಎಡಿಜಿಪಿ ಬಂಧಿಸಲಾಗಿದೆ ನಾವು ಈ ಹಿಂದೆಯೇ ಹಗರಣದಲ್ಲಿ ಇವರ ಕೈವಾಡವಿದೆ, ಕ್ರಮ ಕೈಗೊಳ್ಳುವಂತೆ ಹೇಳಿದ್ದೆವು. ಈ ಎಲ್ಲ ಅಕ್ರಮಗಳಿಗೂ ಸರ್ಕಾರವೇ ನೇರ ಹೊಣೆ. ಹೀಗಾಗಿ ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಈ ಪ್ರಕರಣದ ವಿಚಾರಣೆಯನ್ನು ನ್ಯಾಯಾಂಗ ತನಿಖೆ ನಡೆಸಬೇಕು. ಈ ಬಗ್ಗೆ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದಾರೆ.

ಇನ್ನು ಸದನದಲ್ಲಿ ಈ ನೇಮಕಾತಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಸದನದಲ್ಲಿ ಆರು ಬಾರಿ ಸುಳ್ಳು ಹೇಳಿ, ತಪ್ಪು ಮಾಹಿತಿ ನೀಡಿ ರಾಜ್ಯದ ದಾರಿ ತಪ್ಪಿಸಿದ ಗೃಹ ಸಚಿವರ ಮೇಲೆಯೂ ಕೇಸು ದಾಖಲಿಸಬೇಕು. ಅವರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಈ ಪ್ರಕರಣವನ್ನು ನಮ್ಮ ಪಕ್ಷದ ವಕ್ತಾರರು ಬಯಲಿಗೆಳೆದರೆ ಅವರಿಗೆ ನಾಲ್ಕು ಬಾರಿ ನೋಟೀಸ್ ಕೊಟ್ಟಿದ್ದಾರೆ. ಈ ರೀತಿ ಇತಿಹಾಸದಲ್ಲಿ ಎಲ್ಲೂ ನಡೆದಿರಲಿಲ್ಲ ಎಂದರು.

ಕೊಡಗಿನಲ್ಲಿ ಮುಂದುವರೆದ ಮಳೆ ಅಬ್ಬರ

ಜಿಲ್ಲೆಗೆ ಎನ್‌ಡಿಆರ್‌ಎಫ್ ತಂಡ ಭೇಟಿ; ಪರಿಶೀಲನೆ

● ಇಂದು ಬೆಳಗ್ಗೆವರೆಗೂ ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ● ಭಾಗಮಂಡಲದ ಬಳಿ ರಸ್ತೆಗೆ ಉರುಳಿದ ಬಂಡೆ, ಯಾವುದೇ ಅಪಾಯವಿಲ್ಲ ● ರಸ್ತೆಗಳ ಮೇಲೆ ಐದು ಅಡಿಗೂ ಹೆಚ್ಚು ನೀರು, ಬೋಟ್ ವ್ಯವಸ್ಥೆ ● ಜಲವುಕ್ಕಿ ರಾಷ್ಟ್ರೀಯ ಹೆದ್ದಾರಿಗೆ ಹಾನಿ ● ಬಾವಿ, ಗುಡ್ಡ ಕುಸಿತ, ರಸ್ತೆ ಸಂಚಾರಕ್ಕೆ ಅಡ್ಡಿ


ಎನ್‌ಡಿಆರ್‌ಎಫ್ ಅಧಿಕಾರಿಗಳು ಮಡಿಕೇರಿಯಲ್ಲಿ ಸ್ಥಳ ಪರಿಶೀಲನೆ ನಡೆಸುತ್ತಿರುವುದು.

ಮಡಿಕೇರಿ, ಜು.5– ಕೊಡಗಿನಾದ್ಯಂತ ಕಳೆದ ಮೂರ್ನಾಲ್ಕು ದಿನಗಳಿಂದ ಭಾರೀ ಗಾಳಿಯೊಂದಿಗೆ ಮಳೆ ಅಬ್ಬರಿಸುತ್ತಿದ್ದು, ಜನಜೀವನ ಅಸ್ತವ್ಯಸ್ಥವಾಗಿದೆ. ಜಿಲ್ಲೆಯಾದ್ಯಂತ ಬುಧವಾರ ಬೆಳಗ್ಗೆ 8.30ರವರೆಗೆ ಮತ್ತೆ "ಆರೆಂಜ್ ಅಲರ್ಟ್" ಘೋಷಣೆ ಮಾಡಲಾಗಿದೆ. ಗಾಳಿ ಮಳೆಗೆ ಮುರಿದು ಬಿದ್ದ ಮರಗಳಿಂದ ವಿದ್ಯುತ್ ಕಂಬಗಳಿಗೂ ಹಾನಿಯಾಗಿದ್ದು, ಹಲವು ಗ್ರಾಮಗಳು ಕಗ್ಗತ್ತಲಿನಲ್ಲಿ ಮುಳುಗಿವೆ.

ಈ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ನಿಬಾಯಿಸಿ, ಸಮರೋಪಾದಿಯಲ್ಲಿ ತುರ್ತು ಕಾರ್ಯಗಳನ್ನು ನಿರ್ವಹಿಸಲು ಎನ್‌ಡಿಆರ್‌ಎಫ್ ತಂಡ ಜಿಲ್ಲೆಗೆ ಆಗಮಿಸಿದ್ದು, ಕೆಲವು ಪ್ರದೇಶಗಳಿಗೆ ಅಧಿಕಾರಿಗಳು ಭೇಟಿ ನೀಡಿ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಕಳೆದ 24 ಗಂಟೆ ಅವಧಿಯಲ್ಲಿ ಮಡಿಕೇರಿ ತಾಲೂಕಿನ ಸಂಪಾಜೆಗೆ 144 ಮಿ.ಮೀ., ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಯಲ್ಲಿ 111 ಮಿ.ಮೀ ಹಾಗೂ ಪೊನ್ನಂಪೇಟೆ ತಾಲೂಕಿನ ಹುದಿಕೇರಿಯಲ್ಲಿ 89.2 ಮಿ.ಮೀ ಮಳೆ ದಾಖಲಾಗಿದೆ. ಮಡಿಕೇರಿ ತಾಲೂಕು ವ್ಯಾಪ್ತಿಯಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾರಂಗಿ ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿದೆ. ಹಾರಂಗಿ ಜಲಾಶಯದಿಂದ 12,886ಕ್ಯೂಸೆಕ್ ನೀರನ್ನು ನದಿಗೆ ಹರಿಯ ಬಿಡಲಾಗಿದೆ. ಇದರಿಂದ ಕಾವೇರಿ ನದಿ ಹಾಗೂ ಹಾರಂಗಿ ಜಲಾಶಯದ ನೀರು ಸಂಗಮವಾಗುವ ಕಣಿವೆಯಲ್ಲಿ ಪ್ರವಾಹ ಆತಂಕ ಮನೆ ಮಾಡಿದೆ.

ಭಾರಿ ಮಳೆಯಿಂದಾಗಿ ಭಾಗಮಂಡಲದ ತ್ರಿವೇಣಿ ಸಂಗಮ ಭರ್ತಿಯಾಗಿದ್ದು, ಕ್ಷಣ ಕ್ಷಣಕ್ಕೂ ನೀರಿನ ಮಟ್ಟ ಏರುತ್ತಿದೆ. ತ್ರಿವೇಣಿ ಸಂಗಮ ತುಂಬಿರುವ ಹಿನ್ನೆಲೆ ಮಡಿಕೇರಿ–ಭಾಗಮಂಡಲ ರಸ್ತೆಗೆ ನದಿ ನೀರು ನುಗ್ಗಿದೆ. ಈ ರಸ್ತೆಯಲ್ಲಿ ಒಂದು ಅಡಿಯಷ್ಟು ನೀರು ಹರಿಯುತ್ತಿದ್ದು, ವಾಹನ ಜನ ಸಂಚಾರ ಎಂದಿನಂತಿದೆ. ನಾಪೋಕ್ಲು–ಭಾಗಮಂಡಲ ರಸ್ತೆಗಳ ಮೇಲೆ 5 ಅಡಿ ನೀರು ಹರಿಯುತ್ತಿದ್ದು ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳದಲ್ಲಿ ಗೃಹ ರಕ್ಷಕ ದಳದ ನುರಿತ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು, ಜನರ ಸಂಚಾರಕ್ಕೆ ಬೋಟ್ ವ್ಯವಸ್ಥೆ ಮಾಡಲಾಗಿದೆ.

ರಸ್ತೆಗೆ ಉರುಳಿದ ಬಂಡೆ: ಭಾಗಮಂಡಲ ತಲಕಾವೇರಿ ರಸ್ತೆಯ ಬೆಟ್ಟದ ಮೇಲಿಂದ ಬಂಡೆಯೊಂದು ರಸ್ತೆಗೆ ಉರುಳಿ ಬಿದ್ದಿದೆ. ಯಾವುದೇ ವಾಹನ ಸಂಚಾರ ಇಲ್ಲದ ಕಾರಣ ದೊಡ್ಡ ಅನಾಹುತವೊಂದು ತಪ್ಪಿದಂತಾಗಿದೆ. ಕಂದಾಯ ಇಲಾಖೆ ಸಿಬ್ಬಂದಿಗಳು ಮತ್ತು ಸ್ಥಳೀಯರ ಸಹಕಾರದಿಂದ ಬಂಡೆಯನ್ನು ತೆರವುಗೊಳಿಸಲಾಗಿದೆ.

ಎನ್‌ಡಿಆರ್‌ಎಫ್ ತಂಡ ಭೇಟಿ: ಮಳೆಯಿಂದ ಮದೆನಾಡು ಸಮೀಪದ ಕರ್ತೋಜಿಯಲ್ಲಿ ರಾಷ್ಟ್ರೀಯ ಹೆದ್ದಾರಿ 275ನಲ್ಲಿ ರಸ್ತೆ ಬದಿಯಲ್ಲಿ ಉಬ್ಬು ಕಂಡು ಬಂದಿದ್ದ ಸ್ಥಳಕ್ಕೆ ಎನ್‌ಡಿಆರ್‌ಎಫ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಸ್ಥಳದಲ್ಲಿ ತಾತ್ಕಾಲಿಕ ದುರಸ್ಥಿ ಕಾರ್ಯ ನಡೆಸಲಾಗುತ್ತಿದೆ. ಭೂಮಿ ಒಳಗಿನಿಂದ ಅಂತರ್ ಜಲ ಉಕ್ಕಿ ಕೆಸರು ಮಣ್ಣಿನ ರಾಡಿ ರಸ್ತೆ ಮೇಲೆ ಹರಿಯುತ್ತಿರುವ ಪರಿಣಾಮ ಹೆದ್ದಾರಿಗೆ ಹಾನಿ ಸಂಭವಿಸಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಂಗಳೂರು ವಿಭಾಗದ ಹಿರಿಯ ಇಂಜಿನಿಯರ್ ಜೆ.ಎನ್. ಹೆಗ್ಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಳೆಗಾಲ ಮುಕ್ತಾಯವಾದ ಬಳಿಕ ಮಣ್ಣಿನ ಪರೀಕ್ಷೆ ನಡೆಸಿ ಶಾಶ್ವತ ತಡೆಗೋಡೆ ಕಾಮಗಾರಿ ನಡೆಸಲಾಗುತ್ತದೆ ಎಂದು ಅವರು ಇದೇ ವೇಳೆ ತಿಳಿಸಿದರು. ಮಂಗಳೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯ 2ನೇ ಮೊಣ್ಣಂಗೇರಿ ಬಳಿ ಗುಡ್ಡ ಕುಸಿತವಾಗಿದ್ದು, ಕೆಲ ಕಾಲ ರಸ್ತೆ ಸಂಚಾರಕ್ಕೆ ತೊಡಕಾಗಿತ್ತು. ಮಣ್ಣು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಈ ಭಾಗದಲ್ಲಿ ಮತ್ತಷ್ಟು ಭೂ ಕುಸಿಯುವ ಸಾಧ್ಯತೆಗಳು ಕಂಡು ಬಂದಿದೆ.

ಜಿಲ್ಲೆಯಲ್ಲಿ ಇಂದು ಶಾಲಾ–ಕಾಲೇಜುಗಳಿಗೆ ರಜೆ

ಮಡಿಕೇರಿ,ಜು.5: ಕೊಡಗು ಜಿಲ್ಲೆಯಾದ್ಯಂತ ಎಡೆಬಿಡದೆ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಜು.6ರಂದು ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಈ ಕುರಿತು ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ ಆದೇಶ ಹೊರಡಿಸಿದ್ದಾರೆ. ಮಳೆಯ ಬಿರುಸನ್ನು ಆಧರಿಸಿ ಮುಂದಿನ ತೀರ್ಮಾನವನ್ನು ಜಿಲ್ಲಾಡಳಿತ ತೆಗೆದುಕೊಳ್ಳಲಿದೆ ಎಂದು ತಿಳಿದು ಬಂದಿದೆ. ಮಳೆ ಸುರಿಯುತ್ತಿದ್ದರೂ ಕೂಡ ಮಕ್ಕಳಿಗೆ ರಜೆ ನೀಡದಿರುವ ಕುರಿತು ಪೋಷಕರಿಂದ ಅಸಮಾಧಾನ ವ್ಯಕ್ತವಾಗಿತ್ತು.



ರಸ್ತೆ ಸಂಚಾರ ಕಡಿತ ಸಾಧ್ಯತೆ: ನಾಪೋಕ್ಲು ವ್ಯಾಪ್ತಿಯಲ್ಲೂ ಧಾರಾಕಾರ ಮಳೆಯಾಗುತ್ತಿದ್ದು, ಕಾವೇರಿ ನದಿ ನೀರಿನಲ್ಲಿ ಭಾರೀ ಏರಿಕೆ ಕಂಡು ಬಂದಿದ್ದು ಕೆಲವು ಪ್ರದೇಶಗಳಲ್ಲಿ ರಸ್ತೆ ಸಂಪರ್ಕ ಕಡಿತವಾಗುವ ಲಕ್ಷಣಗಳು ಕಂಡು ಬರುತ್ತಿದೆ. ಬಾಡಗ ಬಾಣಂಗಾಲ ಸೇರಿದಂತೆ ಕೊಡಗಿನ ಹಲವೆಡೆ ವಿದ್ಯುತ್ ಕಂಬಗಳು ನೆಲಕ್ಕುರುಲಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಕುಶಾಲನಗರದಿಂದ ಮಡಿಕೇರಿಗೆ ವಿದ್ಯುತ್ ಸರಬರಾಜಾಗುವ 66 ಕೆ.ವಿ ವಿದ್ಯುತ್ ಲೈನ್‌ಗೂ ಹಾನಿಯಾಗಿದ್ದು ಮಡಿಕೇರಿ ನಗರದಲ್ಲೂ ವಿದ್ಯುತ್ ಕಡಿತ ಉಂಟಾಗಿದೆ.



ಬಾವಿ ಕುಸಿತ: ಶ್ರೀಮಂಗಲ ಹೋಬಳಿಯ ಕುರ್ಚಿ ಗ್ರಾಮದಲ್ಲಿ ಎ.ಸಿ. ಕಾಳಯ್ಯ ಎಂಬವರ ಮನೆ ಆವರಣದಲ್ಲಿರುವ ನೀರಿನ ಬಾವಿ ಒಳಭಾಗಕ್ಕೆ ಕುಸಿದು ಬಿದ್ದಿದೆ. ಶ್ರೀಮಂಗಲ ಉಪ ತಹಶೀಲ್ದಾರ್, ಕಂದಾಯ ಇಲಾಖೆ ಸಿಬ್ಬಂದಿಗಳು, ಗ್ರಾಮ ಲೆಕ್ಕಿಗರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಗೋಡೆ ಕುಸಿತ, ವೃದ್ಧೆಗೆ ಗಾಯ: ಸುಂಟಿಕೊಪ್ಪದ ಪಂಪ್‌ಹೌಸ್ ರಸ್ತೆಯ ಅಂಬೇಡ್ಕರ್ ಬಡಾವಣೆಯ ನಿವಾಸಿ ನಂದಿನಿ ಎಂಬವರಿಗೆ ಸೇರಿದ ವಾಸದ ಮನೆಯ ಗೋಡೆ ಮಳೆಯಿಂದ ಭಾಗಶಃ ಕುಸಿದಿರುವ ಬಗ್ಗೆ ವರದಿಯಾಗಿದೆ. ಶನಿವಾರಸಂತೆ ಸುಳುಗಳಲೆ ಕಾಲೋನಿಯಲ್ಲಿ ಭಾರಿ ಮಳೆಗೆ ಮನೆಯೊಂದರ ಬಾತ್ ರೂಂ ಗೋಡೆ ಬಿದ್ದು ವೃದ್ಧೆಯೊಬ್ಬರಿಗೆ ಗಂಭೀರ ಗಾಯವಾಗಿದೆ. ಸ್ನಾನ ಗೃಹಕ್ಕೆ ಬೆಳಗೆ ಎಂದಿನಂತೆ ತೆರಳಿದ್ದ ವಸಂತಮ್ಮ(70) ಎಂಬುವರ ಮೇಲೆ ಸ್ನಾನದ ಮನೆಯ ಗೋಡೆ ಕುಸಿದು ಗಂಭೀರವಾಗಿ ಗಾಯವಾಗಿದೆ. ಎರಡು ಕಾಲು ಹಾಗೂ ಮುಖ ಮತ್ತು ಕಣ್ಣಿಗೆ ತೀವ್ರವಾಗಿ ಪೆಟ್ಟಾಗಿದ್ದು, ಗಾಯಾಳು ವಸಂತಮ್ಮ ಅವರನ್ನು ಹಾಸನದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಸಂಪಾಜೆ, ಮದೆನಾಡು, ಕೊಯನಾಡು ಭಾಗದಲ್ಲೂ ವ್ಯಾಪಕ ಮಳೆ ಸುರಿಯುತ್ತಿದ್ದು, ಪಯಶ್ವಿನಿ ನದಿಯಲ್ಲಿ ನೀರಿನ ಮಟ್ಟ ಏರಿಕೆ ಕಂಡಿದೆ. ಸಂಪಾಜೆ ಬಳಿ ಉಕ್ಕಿ ಹರಿಯುತ್ತಿರುವ ನದಿ ನೀರಿನಲ್ಲೇ ಗ್ರಾಮಸ್ಥರು ಪಟ್ಟಣಕ್ಕೆ ಬರಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಜೀಪೊಂದು ರಭಸದಿಂದ ಉಕ್ಕಿ ಹರಿಯುತ್ತಿರುವ ನದಿ ನೀರಿನಲ್ಲಿ ಸಂಚರಿಸುತ್ತಿದ್ದು, ಗ್ರಾಮಸ್ಥರ ಭವಣೆಗೆ ಸಾಕ್ಷಿ ಹೇಳುತ್ತಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರ

ಬೂದಿ ಮುಚ್ಚಿದ ಕೆಂಡದಂತಿರುವ ಬಿಜೆಪಿ ಭಿನ್ನಮತ

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜು.5– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ(ಬಿಜೆಪಿ)ಯಲ್ಲಿ ಭಿನ್ನಮತ ಭುಗಿಲೆದಿದ್ದು, ಪಕ್ಷದ ನಿಷ್ಠಾವಂತ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಆಕ್ರೋಶ ಬೂದಿ ಮುಚ್ಚಿದ ಕೆಂಡದಂತಿದೆ.



ಕ್ಷೇತ್ರದಲ್ಲಿ ಬಿಜೆಪಿ ಪಕ್ಷದಲ್ಲಿ ನಾಯಕತ್ವದ ಕೊರತೆ ಎದುರಾಗಿದ್ದು, ಪಕ್ಷ ನಾವಿಕ ನಿಲ್ಲದ ಹಡಗಿನಂತಾಗಿದೆ.

ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆ, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಹೆಚ್ಚು ಮತಗಳು ಲಭ್ಯವಾಗಿಲ್ಲ. ನಾಯಕತ್ವ ಕೊರತೆಯೇ ಪಕ್ಷದ ಅಭ್ಯರ್ಥಿಗಳು ಸೋಲು ಅನುಭವಿಸಲು ಕಾರಣವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸಮನ್ವಯತೆ ಕೊರತೆ: ಕ್ಷೇತ್ರದಲ್ಲಿ ಬಿಜೆಪಿ ಪರವಾದ ಮತದಾರರು ಹೆಚ್ಚಾಗಿದ್ದರೂ ಸಹ ಒಬ್ಬರ ನಾಯಕತ್ವದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗದೇ ಇರುವುದು ಕಂಡು ಬಂದಿದೆ. ಕ್ಷೇತ್ರದಿಂದ ಸ್ಪರ್ಧಿಸಲು ಹೆಚ್ಚಿನ ಸಂಖ್ಯೆಯಲ್ಲಿ ಆಕಾಂಕ್ಷಿಗಳು ಇದ್ದಾರೆ. ಈ ಆಕಾಂಕ್ಷಿಗಳ ನಡುವೆ ಪರಸ್ಪರ ಹೊಂದಾಣಿಕೆ, ಸಮನ್ವಯತೆ ಇಲ್ಲದೆ ಇರುವುದು ಪಕ್ಷದ ಸಂಘಟನೆಗೆ ತೊಡಕಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ.

ಹುಮ್ಮಸ್ಸು ತೋರದ ಕಾರ್ಯಕರ್ತರು: ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದರೂ ಜಿಲ್ಲಾ ಕೇಂದ್ರದ ಚಾಮರಾಜನಗರ ಕ್ಷೇತ್ರದಲ್ಲಿ ತಮ್ಮ ಪಕ್ಷ ಆಡಳಿತದಲ್ಲಿದೆ ಎಂಬ ಹುಮ್ಮಸ್ಸು ಪಕ್ಷದ ಕಾರ್ಯಕರ್ತರಲ್ಲಿ ಕಂಡು ಬರುತ್ತಿಲ್ಲ. ಜಿಲ್ಲೆಯ ಉಸ್ತುವಾರಿ ಸಚಿವರಾಗಿ ನೇಮಕಗೊಳ್ಳುವವರು ಹೊರ ಜಿಲ್ಲೆಯವರಾಗಿರುವುದರಿಂದ ಅವರು ಪಕ್ಷ ಸಂಘಟನೆಯಲ್ಲಿ ಅಷ್ಟೊಂದು ಪರಿಣಾಮಕಾರಿಯಾಗಿ ತೊಡಗಿಕೊಳ್ಳದೇ ಇರುವುದು ತಿಳಿದು ಬರುತ್ತಿದೆ. ಸಭೆ ಸಮಾರಂಭ ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಾತ್ರ ಉಸ್ತುವಾರಿ ಸಚಿವರು ಪಾಲ್ಗೊಳ್ಳುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವಾಗಿದೆ.

ಜಿಲ್ಲಾ ಘಟಕದ ವಿಫಲತೆ: ಕ್ಷೇತ್ರದಲ್ಲಿ ಬಿಜೆಪಿ ಲಿಂಗಾಯತ ಹೆಚ್ಚಿನ ಮತದಾರರನ್ನು ಹೊಂದಿದ್ದು, ಆ ಸಮುದಾಯದವರನ್ನು ಮತ್ತಷ್ಟು ಸಂಘಟಿಸಿ ಪಕ್ಷಕ್ಕೆ ಹೆಚ್ಚಿನ ಲಾಭ ಪಡೆಯುವಲ್ಲಿ ಪಕ್ಷದ ಜಿಲ್ಲಾ ಘಟಕ ವಿಫಲವಾಗಿದೆ ಎಂಬ ಆರೋಪ ಕೇಳಿ ಬರುತ್ತಿದೆ. ಇದಕ್ಕೆ ಪೂರಕ ಎಂಬಂತೆ ಚಾಮರಾಜನಗರ ಮಂಡಲ ಅಧ್ಯಕ್ಷರನ್ನು ಏಕಾಏಕಿ ಬದಲಾವಣೆ ಮಾಡಲಾಯಿತು. ಈಗ ಪಕ್ಷದ ಜಿಲ್ಲಾ ಸಮಿತಿಯು ಯಾವುದೇ ಪಕ್ಷ ವಿರೋಧಿ ಚಟುವಟಿಕೆಯನ್ನು ನಿಖರವಾಗಿ ತಿಳಿಸದೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ಎಸ್.ವಿಜಯೇಂದ್ರ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪಿ.ಎನ್. ದಯಾನಿಧಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದು ಕ್ಷೇತ್ರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದು ಪಕ್ಷದಲ್ಲಿ ಎಲ್ಲವೂ ಸರಿ ಇಲ್ಲ ಎಂಬುದನ್ನು ಬಹಿರಂಗಗೊಳಿಸಿದೆ.

ಲಿಂಗಾಯತ ಸಮುದಾಯದಲ್ಲಿ ಅಸಮಾಧಾನ: ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ನಾಗವಳ್ಳಿಯಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಅವರು ಬಿಜೆಪಿ ಹಾಗೂ ಬಿ.ಎಸ್. ಯಡಿಯೂರಪ್ಪ ಅವರನ್ನು ಟೀಕೆ ಮಾಡಿದರು. ಈ ವೇಳೆ ಸಮಾರಂಭದಲ್ಲಿ ಹಾಜರಿದ್ದ ತಾಲೂಕು ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಪಿ.ಎನ್. ದಯಾನಿಧಿ ಸರ್ಕಾರಿ ಕಾರ್ಯಕ್ರಮದಲ್ಲಿ ಬೇರೆ ಪಕ್ಷ ಹಾಗೂ ಪಕ್ಷದ ನಾಯಕರನ್ನು ಟೀಕೆ ಮಾಡುವುದು ಸರಿಯಲ್ಲ ಎಂದು ಬಹಿರಂಗವಾಗಿ ವೇದಿಕೆಯಲ್ಲಿಯೇ ವಿರೋಧಿಸಿ, ಸಿದ್ದರಾಮಯ್ಯ ಅವರ ಕೆಂಗಣ್ಣಿಗೆ ಗುರಿಯಾಗಿ ಬಂಧನಕ್ಕೊಳಗಾಗಿದ್ದರು. ದಯಾನಿಧಿ ಅವರಿಗೆ ಇರುವ ಪಕ್ಷ ನಿಷ್ಠೆಗೆ ಆ ದಿನಗಳಲ್ಲೇ ಈಗಿನ ಸಂಸದೆ ಶೋಭಾ ಕರಂದ್ಲಾಜೆ ಹಾಗೂ ಶಾಸಕ ಸಿ.ಟಿ.ರವಿ ಅವರು ದಯಾನಿಧಿ ಅವರನ್ನು ಅಭಿನಂದಿಸಿದ್ದರು. ಇಂತಹ ಪಕ್ಷ ನಿಷ್ಠೆವುಳ್ಳ ವ್ಯಕ್ತಿಯನ್ನು ಯಾವುದೇ ನೋಟಿಸ್ ನೀಡದೆ ಏಕಾಏಕಿ ಉಚ್ಚಾಟನೆ ಮಾಡಿರುವುದು ಕ್ಷೇತ್ರಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಅಲ್ಲದೆ ಲಿಂಗಾಯತ ಸಮುದಾಯದಿಂದ ಮುಖಂಡರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಕ್ಷೇತ್ರದಲ್ಲಿ ಹಿನ್ನಡೆ: ಕ್ಷೇತ್ರದಲ್ಲಿ ಕಳೆದ ಮೂರು ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿ ಕಡಿಮೆ ಮತಗಳ ಅಂತರದಲ್ಲಿ ಸೋಲು ಅನುಭವಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲೂ ಚಾಮರಾಜನಗರ ವಿಧಾನಸಭಾ ಕ್ಷೇತದಲ್ಲಿ ಬಿಜೆಪಿ ಅಭ್ಯರ್ಥಿಗೆ 10 ಸಾವಿರಕ್ಕೂ ಹೆಚ್ಚು ಮತಗಳ ಮುನ್ನಡೆ ದೊರೆಕಿದೆ. ಆದರೆ ಸ್ಥಳೀಯ ಚುನಾವಣೆಗಳಾದ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಎಪಿಎಂಸಿ ಹಾಗೂ ಚಾಮುಲ್ ಚುನಾವಣೆಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಕಂಡಿಲ್ಲ. ಇದು ಕ್ಷೇತ್ರದಲ್ಲಿ ಬಿಜೆಪಿಯ ಹಿನ್ನಡೆಯನ್ನು ಎತ್ತಿ ತೋರಿಸುತ್ತಿದೆ.

ಪ್ರಸ್ತುತ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದು, ಪಕ್ಷದ ರಾಜ್ಯ ನಾಯಕರು ಕ್ಷೇತ್ರದ ಬಗ್ಗೆ ಗಮನಹರಿಸಬೇಕು. ಕ್ಷೇತ್ರದ ಪಕ್ಷ ಮುಖಂಡರಲ್ಲಿ ಇರುವ ಅನೇಕ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಬಿಜೆಪಿಯ ನಿಷ್ಠಾವಂತರು ಒತ್ತಾಯಿಸಿದ್ದಾರೆ.

ಅಭಿಮಾನಿ ಅಂಗಡಿಯಲ್ಲಿ ಚಹಾ ಕುಡಿದ ಶಿವಣ್ಣ

ಚಾ.ನಗರದಲ್ಲಿ 'ಬೈರಾಗಿ' ವೀಕ್ಷಿಸಿದ ಹ್ಯಾಟ್ರಿಕ್ ಹೀರೋ



ಚಾಮರಾಜನಗರ, ಜು.5(ಎಸ್‌ಎಸ್)– ಚಿತ್ರನಟ, ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರು ಮಂಗಳವಾರ ನಗರಕ್ಕೆ ಆಗಮಿಸಿ, ತಮ್ಮ ಅಭಿಮಾನಿಯೊಬ್ಬರ ಟೀ ಅಂಗಡಿಯಲ್ಲಿ ಆತಿಥ್ಯ ಸ್ವೀಕರಿಸಿದರು. ನಂತರ ತಾವು ನಟಿಸಿರುವ ಬೈರಾಗಿ ಚಿತ್ರ ವೀಕ್ಷಿಸಿದರು.

ನಗರಕ್ಕೆ ಭೇಟಿ ನೀಡಿದ ನಟ ಶಿವರಾಜ್‌ಕುಮಾರ್ ಅವರು, ಹಳೆ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ತಮ್ಮ ಅಪ್ಪಟ ಅಭಿಮಾನಿಯಾದ ಮಂಜು ಅವರ ಟೀ ಸ್ಟಾಲ್‌ಗೆ ಭೇಟಿ ನೀಡಿದರು. ನಂತರ ಚಹಾ ಸೇವಿಸಿ, ಅಭಿಮಾನಿಗೆ ಖುಷಿ ನೀಡಿದರು. ಈ ವೇಳೆ ಮಂಜು ಅವರು ಶಿವರಾಜ್‌ಕುಮಾರ್ ಅವರಿಗೆ ಶಾಲು, ಹಾರ ಹಾಕಿ ಸನ್ಮಾನಿಸಿದರು.

ಚಿತ್ರ ವೀಕ್ಷಣೆ: ಬಳಿಕ ಜು. 1ರಂದು ಬಿಡುಗಡೆಯಾದ, ತಾವು ನಟಿಸಿರುವ ಬೈರಾಗಿ ಚಿತ್ರ ಪ್ರದರ್ಶನವಾಗುತ್ತಿರುವ ನಗರದ ಭ್ರಮರಾಂಬ ಚಿತ್ರಮಂದಿರಕ್ಕೆ ಭೇಟಿ ನೀಡಿದ ಶಿವರಾಜ್‌ಕುಮಾರ್ ಚಿತ್ರ ವೀಕ್ಷಿಸಿದರು. ಚಿತ್ರಮಂದಿರದ ಬಳಿಗೆ ತಮ್ಮ ನೆಚ್ಚಿನ ನಟ ಬರುತ್ತಿದ್ದಂತೆಯೇ ಅಭಿಮಾನಿಗಳು ಪಟಾಕಿ ಸಿಡಿಸಿ, ಪುಷ್ಪವೃಷ್ಟಿ ಮಾಡಿ ಅದ್ಧೂರಿಯಾಗಿ ಸ್ವಾಗತಿಸಿದರು. ನಂತರ 20 ನಿಮಿಷಗಳ ಕಾಲ ಪ್ರೇಕ್ಷರೊಂದಿಗೆ ಕುಳಿತು ಚಿತ್ರ ವೀಕ್ಷಿಸಿದರು.

ಈ ವೇಳೆ ಚಿತ್ರ ನಿರ್ಮಾಪಕ ಕೃಷ್ಣ ಸಾಧಕ್, ಚಿತ್ರಮಂದಿರದ ಮಾಲೀಕ ರೇವಂತ್ ದೇವರು, ಆರ್.ಶಿವಬಸವಸ್ವಾಮಿ, ಆರ್.ಸುಂದರೇಶ್ ಮೂರ್ತಿ, ರಕ್ಷಿತ್ ಮಾಂಬಳ್ಳಿ ಇತರರು ಹಾಜರಿದ್ದರು.

ಇದಕ್ಕೂ ಮೊದಲು, ಶಿವರಾಜ್‌ಕುಮಾರ್ ಅವರು ಕೊಳ್ಳೇಗಾಲದಲ್ಲಿ ಬೈರಾಗಿ ಚಿತ್ರ ಪ್ರದರ್ಶನ ನಡೆಯುತ್ತಿದ್ದ ಶ್ರೀನಿವಾಸ ಚಿತ್ರಮಂದಿರಕ್ಕೆ ಭೇಟಿ ನೀಡಿ, ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದರು.

ಅವಧಿ ಮೀರಿದ ಮದ್ಯ ನಾಶ

ಕೊಳ್ಳೇಗಾಲ, ಜು.5(ನಾಗೇಂದ್ರಸ್ವಾಮಿ)– ಹಲವು ಪ್ರಕರಣಗಳಲ್ಲಿ ಅಬಕಾರಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ವಶಪಡಿಸಿಕೊಂಡಿದ್ದ, ಅವಧಿ ಮೀರಿದ ಅಕ್ರಮ ಮದ್ಯವನ್ನು ಅಬಕಾರಿ ಉಪ ಅಧೀಕ್ಷಕ ಎಂ.ಡಿ. ಮೋಹನ್ ಕುಮಾರ್ ನೇತೃತ್ವದಲ್ಲಿ ಮಂಗಳವಾರ ನಾಶಗೊಳಿಸಲಾಯಿತು.

ಪಟ್ಟಣದ ಅಬಕಾರಿ ಕಚೇರಿಯ ಮುಂಭಾಗದಲ್ಲಿ ಕಳೆದ ಮೂರು ವರ್ಷಗಳಿಂದ ವಶಪಡಿಸಿಕೊಂಡಿದ್ದ 769 ಲೀ. ಮದ್ಯ, 14.5 ಲೀ. ಬಿಯರ್, 83 ಲೀ. ಕಳ್ಳಭಟ್ಟಿ, 8 ಲೀ. ಸಾರಾಯಿ ಹಾಗೂ 25 ಲೀ. ಬೆಲ್ಲದ ಕೊಳೆಯನ್ನು ನಾಶಪಡಿಸಲಾಯಿತು.

ಈ ಸಂಧರ್ಭದಲ್ಲಿ ಚಾ.ನಗರ ಕೆಎಸ್‌ಡಿಸಿಎಲ್ ಮ್ಯಾನೇಜರ್ ಬಸವರಾಜು, ಕಂದಾಯ ಇಲಾಖೆಯ ನಿರಂಜನ್, ಕೊಳ್ಳೇಗಾಲ ಅಬಕಾರಿ ನಿರೀಕ್ಷಕ ಡಿ.ಸುನೀಲ್ ಕುಮಾರ್, ಉಪನಿರೀಕ್ಷಕ ಸಿದ್ದಯ್ಯ, ಡಿ.ಶ್ರೀಧರ್ ಹಾಗೂ ಸಿಬ್ಬಂದಿ ಪ್ರದೀಪ್, ಜಯಪ್ರಕಾಶ್, ನಂದಿನಿ ರಮೇಶ್, ಸುಂದರಪ್ಪ, ಮಂಜುಪ್ರಸಾದ್, ಸುಜನ್ ರಾಜ್, ರವಿಕುಮಾರ್, ಕೃಷ್ಣಮೂರ್ತಿ ಇನ್ನಿತರರಿದ್ದರು.

'ಮೈತ್ರಿ' ಮುಟ್ಟಿನ ಕಪ್ ಯೋಜನೆಗೆ ಬಿಳಿಗಿರಿರಂಗನಬೆಟ್ಟದಲ್ಲಿ ಇಂದು ಚಾಲನೆ

ಚಾಮರಾಜನಗರ, ಜು.5–ಹದಿಹರೆಯದ ಹೆಣ್ಣುಮಕ್ಕಳ ಸ್ವಚ್ಛ ಹಾಗೂ ಸುರಕ್ಷಿತ ಋತುಚಕ್ರ ನಿರ್ವಹಣೆಗಾಗಿ ಸರ್ಕಾರ ವಿನೂತನವಾಗಿ ತಂದಿರುವ ಮೈತ್ರಿ ಮುಟ್ಟಿನ ಕಪ್(ಮೆನ್ಸ್ಟ್ರುಯೆಲ್ ಕಪ್) ಯೋಜನೆಗೆ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದಲ್ಲಿ ನಾಳೆ(ಜು.6) ಚಾಲನೆ ನೀಡಲಾಗುತ್ತಿದೆ.

ಸರ್ಕಾರದ ಶುಚಿ ಕಾರ್ಯಕ್ರಮದ ಯೋಜನೆಯಡಿ ಹದಿಹರೆಯದ ಹೆಣ್ಣು ಮಕ್ಕಳಿಗೆ ಈ ಹಿಂದಿನಿಂದಲೂ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಉಚಿತವಾಗಿ ಒದಗಿಸುತ್ತಿದೆ. ಈ ಯೋಜನೆಯನ್ನು ಮುಖ್ಯಮಂತ್ರಿಯವರು 2022–23ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದರು. ಸದ್ಯ ಮೈತ್ರಿ ಮುಟ್ಟಿನ ಕಪ್ ಯೋಜನೆಯನ್ನು ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುತ್ತಿದೆ. ಫಲಿತಾಂಶದ ಆಧಾರದ ಮೇಲೆ ಕಾರ್ಯಕ್ರಮವನ್ನು ರಾಜ್ಯದ ಇತರ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ.

ಜಿಲ್ಲಾಡಳಿತ, ಜಿಪಂ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಯೋಜನೆಯ ರಾಜ್ಯ ಮಟ್ಟದ ಉದ್ಘಾಟನಾ ಸಮಾರಂಭವನ್ನು ಬುಧವಾರ ಬೆಳಗ್ಗೆ 11 ಗಂಟೆಗೆ ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ.ಕೆ.ಸುಧಾಕರ್ ಉಪಸ್ಥಿತಿ ವಹಿಸುವರು. ಶಾಸಕ ಎನ್.ಮಹೇಶ್ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್ ಜ್ಯೋತಿ ಬೆಳಗಿಸುವರು. ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು ವೇದಾ ಕೃಷ್ಣಮೂರ್ತಿ, ಚಿತ್ರ ನಟಿ ಅಮೃತ ಅಯ್ಯಂಗಾರ್ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಜಿಟಿಡಿ, ರವೀಂದ್ರ ಶ್ರೀಕಂಠಯ್ಯ ಭೂಮಿಪೂಜೆ



> **ರಾಜಣ್ಣ ಹೇಳಿಕೆಗೆ ಜಿಟಿಡಿ ಖಂಡನೆ**
>
> ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಮಾಜಿ ಶಾಸಕ ಕೆ.ಎನ್.ರಾಜಣ್ಣ ಹೇಳಿಕೆ ಖಂಡನೀಯವಾಗಿದೆ. ಇದು ಅವರಿಗೂ ಶೋಭೆ ತರುವುದಿಲ್ಲ. ವಯಸ್ಸು ಎಲ್ಲರಿಗೂ ಆಗುತ್ತದೆ ಆದರೆ, ಇಂತಹ ಸಣ್ಣತನದ ಹೇಳಿಕೆಗಳನ್ನು ನೀಡಬಾರದು. ಕೂಡಲೇ ರಾಜಣ್ಣ ಬಹಿರಂಗ ಕ್ಷಮೆಯಾಚಿಸಬೇಕು.
>
> – ಜಿ.ಟಿ.ದೇವೇಗೌಡ, ಶಾಸಕರು.

ಶ್ರೀರಂಗಪಟ್ಟಣ, ಜು.5(ವಿನಯ್ ಕಾರೇಕುರ)– ತಾಲೂಕಿನ ನಗುವನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 5.5 ಕೋಟಿ ರೂ. ವೆಚ್ಚದಡಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ರವೀಂದ್ರ ಶ್ರೀಕಂಠಯ್ಯ ಜಂಟಿಯಾಗಿ ಭೂಮಿಪೂಜೆ ನೆರವೇರಿಸಿದರು.

ತಾಲೂಕಿನ ಬೆಳವಾಡಿ ಗ್ರಾಮ, ರಾಜೀವ ನಗರ ಹಾಗೂ ನಗುವನಹಳ್ಳಿ ಮಾರ್ಗವಾಗಿ ಮೈಸೂರು ರಿಂಗ್‌ರೋಡ್ ಸಂಪರ್ಕ ಕಲ್ಪಿಸುವ ರಸ್ತೆಗೆ 5.2ಕೋಟಿ ವೆಚ್ಚದಡಿ ಕಾಮಗಾರಿ ನಡೆಸಲಾಗುತ್ತಿದ್ದು, 5.5 ಮೀಟರ್ ಅಗಲವಾಗಿ 1.5ಕಿ.ಮೀ. ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ನಗುವನಹಳ್ಳಿಯಿಂದ ಮೈಸೂರು ರಿಂಗ್ ರೋಡ್‌ವರೆಗಿನ ಸಂಪರ್ಕ ಕಲ್ಪಿಸುವ ರಸ್ತೆಗೆ ಡಾಂಬರೀಕರಣ ಕಾಮಗಾರಿ ನಡೆಸಿ ಉಳಿದ ರಸ್ತೆಗೆ ಇನ್ನು 2.70ಕೋಟಿ ಹಣ ಬಿಡುಗಡೆ ಮಾಡಿ ಪೂರ್ಣ ರಸ್ತೆ ಕಾಮಗಾರಿ ನಡೆಸಲು ಇನ್ನು ಒಂದು ವಾರದಲ್ಲಿ ರಾಜ್ಯ ಕಾರ್ಯದರ್ಶಿಯವರಿಗೆ ಪತ್ರ ನೀಡಿ ಹಣ ಬಿಡುಗಡೆಗೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ರವೀಂದ್ರ ಶ್ರೀಕಂಠಯ್ಯ ಹೇಳಿದರು.

ಇದಕ್ಕೂ ಮೊದಲು ಸುಮಾರು 20 ಲಕ್ಷ ವೆಚ್ಚದಡಿ ಶ್ರೀರಂಗಪಟ್ಟಣ ಕ್ಷೇತ್ರದ ಬೆಳವಾಡಿ ಹಾಗೂ ರಾಜೀವ್‌ನಗರ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆ, ಅಂಬೇಡ್ಕರ್ ಭವನ ಹಾಗೂ ಬಸ್ ನಿಲ್ದಾಣ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗೆ ಸ್ಥಳೀಯ ಶಾಸಕ ರವೀಂದ್ರ ಶ್ರೀಕಂಠಯ್ಯ ಭೂಮಿಪೂಜೆ ನೆರವೇರಿಸಿದರು.

ಜನರ ತೀರ್ಮಾನ: ಚಾಮುಂಡೇಶ್ವರಿ ಕ್ಷೇತ್ರದಿಂದ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದೇವೆ. ಒಂದು ಪಕ್ಷ ಅಂದ ಮೇಲೆ ಅಸಮಾಧಾನಗಳ ಸಾಮಾನ್ಯವಾಗಿತ್ತು. ಬರುವ ವಿಧಾನಸಭೆ ಚುನಾವಣೆಯೊಳಗೆ ನನ್ನ ಮುಂದಿನ ರಾಜಕೀಯ ನಡೆಯನ್ನು ಕ್ಷೇತ್ರದ ಜನರು, ಬೆಂಬಲಿಗರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇನೆ ಎಂದರು.

ಈ ವೇಳೆ ನಗುವನಹಳ್ಳಿ ಗ್ರಾಪಂ ಅಧ್ಯಕ್ಷೆ ಸುಮಾ, ಉಪಾಧ್ಯಕ್ಷ ರಮೇಶ್, ಡಿಸಿಸಿ ಬ್ಯಾಂಕ್ ಮಾಜಿ ಸದಸ್ಯ ಎನ್.ವಿ.ಚಲುವರಾಜು, ನಾಗನಹಳ್ಳಿ ಗ್ರಾಪಂ ಅಧ್ಯಕ್ಷ ಭಾಸ್ಕರ್, ಮೈಸೂರು ಜಿಪಂ ಸದಸ್ಯ ದಿನೇಶ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಪ್ರಕಾಶ್, ಮಾಜಿ ಅಧ್ಯಕ್ಷ ಲೋಕೇಶ್, ಸ್ವಾಮಿ, ವಕೀಲ ವೆಂಕಟೇಶ್, ಮುಖಂಡರಾದ ನಾರಾಯಣಪ್ಪ, ಶಿವಸ್ವಾಮಿ, ನಾರಾಯಣ್, ಮಹದೇವಸ್ವಾಮಿ, ಬಾಬು, ಗ್ರಾಪಂ ಸದಸ್ಯರು ಸೇರಿದಂತೆ

ಜಾತಿ, ಧರ್ಮದ ರಾಜಕಾರಣದಿಂದ ಸಂವಿಧಾನದ ಆಶಯಕ್ಕೆ ಧಕ್ಕೆ

ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಕಳವಳ



ಮಂಡ್ಯ, ಜು.5(ಮೋಹನ್‌ರಾಜ್)– ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕಾದವರು ಜಾತಿ ಮತ್ತು ಹಣದ ಬಗ್ಗೆ ಮಾತನಾಡುತ್ತಿರುವುದು ಅಪಾಯದ ವಾತಾವರಣವಾಗಿದೆ. ಜಾತಿ ಮತ್ತು ಧರ್ಮ ರಾಜಕಾರಣ ವನ್ನು ನಿಯಂತ್ರಿಸುತ್ತಿರುವುದು ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವಂತಹುದ್ದಾಗಿದೆ ಎಂದು ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಕಳವಳ ವ್ಯಕ್ತಪಡಿಸಿದರು.

ನಗರದ ಗಾಂಧಿ ಭವನದಲ್ಲಿ ಮಂಗಳವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆಯಿಂದ ಆಯೋಜಿಸಿದ್ದ ಸಾಮರಸ್ಯ ಸಹಬಾಳ್ವೆಗಾಗಿ ಸಾಮಾಜಿಕ ಸಮನ್ವಯ ಎಂಬ ವಿಚಾರ ಚಿಂತನಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದೊಳಗೆ ಸಾಮಾಜಿಕ ವಾತಾವರಣ ಅದ್ವಾನಗೊಂಡರೆ ದೇಶ ಅಪಾಯಕಾರಿ ಸ್ಥಿತಿಯನ್ನು ತಲುಪುತ್ತದೆ. ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡುವಾಗ ಜವಾಬ್ದಾರಿಯುತವಾಗಿ ಮಾತನಾಡಬೇಕು. ಇಲ್ಲದಿದ್ದರೆ ಅಲ್ಲೋಲ ಕಲ್ಲೋಲ ಸ್ಥಿತಿ ನಿರ್ಮಾಣವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರಗಳು ಕಠಿಣ ಧೋರಣೆ ತಳೆಯಬೇಕು ಎಂದು ನೂಪುರ್ ಶರ್ಮ ಪ್ರಕರಣವನ್ನು ಪ್ರಸ್ತಾಪಿಸದೆ ಪರೋಕ್ಷವಾಗಿ ಹೇಳಿದರು. ನಾಲ್ವಡಿ ಕೃಷ್ಣರಾಜ ಒಡೆಯರ್, ಡಿ.ದೇವರಾಜ ಅರಸು ಹಿಂದುಳಿದ ವರ್ಗದವರಾಗಿರದಿದ್ದರೂ ಹಿಂದುಳಿದವರ ಬಗ್ಗೆ ಚಿಂತಿಸಿದರು. ಇದಕ್ಕೆ ಅವರ ದೂರದೃಷ್ಟಿ, ಸಾಮಾಜಿಕ ಕಳಕಳಿ ಕಾರಣವಾಗಿತ್ತು. ಆಳುವ ಸರ್ಕಾರಗಳು, ಜನಪ್ರತಿನಿಧಿಗಳಲ್ಲಿ ಇಂತಹ ಆಲೋಚನೆಗಳು ಮೂಡಬೇಕು. ಆಗ ಸಾಮಾಜಿಕ ಸಾಮರಸ್ಯ, ಸಮನ್ವಯತೆ ಸುಲಭವಾಗುತ್ತದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಮುಖಂಡ ಡಾ.ಹೆಚ್.ಕೃಷ್ಣ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲಾ ಜಾತಿ, ವರ್ಗ ಮತ್ತು ಧರ್ಮದ ಜೊತೆಗೆ ಪ್ರಮುಖ ಚಳವಳಿಗಳನ್ನು ಒಗ್ಗೂಡಿಸಿ ಸಾಮಾಜಿಕ ಹೋರಾಟ ಆರಂಭಿಸಿರುವ ಪ್ರಯತ್ನ ಪ್ರಶಂಸನೀಯ ಎಂದ ಅವರು, ಸಾಮಾಜಿಕ ಅಸಮಾನತೆ ಎಲ್ಲಾ ಕ್ಷೇತ್ರಗಳಲ್ಲೂ ಇದ್ದು, ಅದನ್ನು ಹೋಗಲಾಡಿಸುವ ಪ್ರಯತ್ನಗಳು ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ, ಎಂ.ವಿ.ಧರಣೇಂದ್ರಯ್ಯ, ಸಾಮಾಜಿಕ ಚಿಂತಕ ಪ್ರೊ.ಹುಲ್ಕೆರೆ ಮಹದೇವು, ಪ್ರೊ.ಬಿ.ಎಸ್. ಚಂದ್ರಶೇಖರನ್, ಕರವೇ ರಾಜ್ಯ ಉಪಾಧ್ಯಕ್ಷ ಮಾ.ಸೋ. ಚಿದಂಬರ್, ರೈತ ಸಂಘದ ಮಾಜಿ ಅಧ್ಯಕ್ಷ ಶಂಭೂನಹಳ್ಳಿ ಸುರೇಶ್, ಪ್ರಗತಿಪರ ಮುಖಂಡರಾದ ಬಿ.ಎಂ.ಅಪ್ಪಾಜಪ್ಪ, ಎಂ.ಕೃಷ್ಣ, ಮುಜಾಹಿದ್, ಡಿ. ರಮೇಶ್, ಕರವೇ ಅಶೋಕ್, ಶಂಕರೇಗೌಡ, ಜಯರಾಮು, ಲತಾ ಶಂಕರ್, ಪದ್ಮಾ ಮೋಹನ್ ಇದ್ದರು.

ದೇವಾಲಯ ಸಂಸ್ಕೃತಿ, ಪರಂಪರೆಯ ಪ್ರತಿಬಿಂಬ



ಕೆ.ಆರ್.ಪೇಟೆ, ಜು.5(ಶ್ರೀನಿವಾಸ್)– ದೇವಾಲಯಗಳು ನಮ್ಮ ಸಂಸ್ಕೃತಿ, ಪರಂಪರೆಯ ಪ್ರತಿಬಿಂಬವಾಗಿದ್ದು, ನೆಮ್ಮದಿಯ ತಾಣವಾಗಿದೆ ಎಂದು ತಾಪಂ ಮಾಜಿ ಅಧ್ಯಕ್ಷರೂ ಆದ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಕಿಕ್ಕೇರಿ ಸುರೇಶ್ ಹೇಳಿದರು.

ತಾಲೂಕಿನ ನಾಗೋರ್ನಹಳ್ಳಿಯಲ್ಲಿ ಶ್ರೀ ಮಾರಮ್ಮನ ದೇವಾಲಯದ ಜೀರ್ಣೋದ್ಧಾರಕ್ಕೆ ವೈಯಕ್ತಿಕವಾಗಿ 25ಸಾವಿರ ರೂ. ದೇಣಿಗೆ ನೀಡಿ ಮಾತ ನಾಡಿದ ಅವರು, ಮನುಷ್ಯನ ಶಾಂತಿ ನೆಮ್ಮದಿಗೆ ದೇವಾಲಯಗಳು, ಗುಡಿಗೋಪುರ ಗಳ ಅಭಿವೃದ್ಧಿಯಾಗಬೇಕು. ಅದೇ ರೀತಿ ಗ್ರಾಮದಲ್ಲಿ ಜ್ಞಾನ ಹೆಚ್ಚಾಗಬೇಕಾದರೆ ಶಾಲೆಗಳ ಅಭಿವೃದ್ಧಿಯಾಗಬೇಕು. ಆದ್ದರಿಂದ ಗ್ರಾಮಸ್ಥರು ದೇವಾಲಯಗಳು ಹಾಗೂ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಗ್ರಾಮಸ್ಥರು ಕಿಕ್ಕೇರಿ ಸುರೇಶ್ ಅವರಿಗೆ ಶಾಲು ಹೊದಿಸಿ, ಪೇಟ ತೊಡಿಸಿ ಆತ್ಮೀಯವಾಗಿ ಸನ್ಮಾನಿಸಿದರು. ಟಿಎಪಿಸಿಎಂಎಸ್ ಮಾಜಿ ಉಪಾಧ್ಯಕ್ಷ ಬಳ್ಳೇಕೆರೆ ಸುರೇಶ್, ನಿವೃತ್ತ ಪ್ರಾಂಶುಪಾಲ ಜಾನೇಗೌಡ, ಕಾಂಗ್ರೆಸ್ ಮುಖಂಡ ಎನ್.ಟಿ. ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರೇಗೌಡ, ಮುಖಂಡರಾದ ಅಣ್ಣೇಗೌಡ, ತಿಮ್ಮೇಗೌಡ, ವೆಂಕಟೇಶ್, ಲಿಂಗೇಗೌಡ, ರಘು, ವೆಂಕಟೇಶ್, ರವಿ, ಶಿವಣ್ಣಗೌಡ, ಯೋಗೇಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಇಂದು ಉದ್ದೇಶಿತ ವಿವೇಕ ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ



ಮೈಸೂರು, ಜು.5(ಪಿಎಂ)–ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಮಹತ್ವಾಕಾಂಕ್ಷಿ ಬೃಹತ್ ಯೋಜನೆ 'ವಿವೇಕ ಸ್ಮಾರಕ' ನಿರ್ಮಾಣದ ಭೂಮಿ ಪೂಜೆ ನಾಳೆ (ಜು.6) ನಡೆಯಲಿದೆ. ಉದ್ದೇಶಿತ ವಿವೇಕ ಸ್ಮಾರಕವು ಸ್ವಾಸ್ಥ್ಯ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ಪೂರಕ ಚಟುವಟಿಕೆಗಳ ಮೂಲಕ ಮೈಸೂರಿನ ಪ್ರತಿಷ್ಠಿತ ತಾಣವಾಗಿ ರೂಪುಗೊಳ್ಳಲಿದೆ. ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು ಬಳಿಯಲ್ಲಿ ಉದ್ದೇಶಿತ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ (ವಿವೇಕ ಸ್ಮಾರಕ) ನಿರ್ಮಾಣದ ಭೂಮಿ ಪೂಜೆ ನಡೆಯಲಿದೆ.

ನಾಳೆ ಬೆಳಗ್ಗೆ 9ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನಿಧ್ಯ ಮತ್ತು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸ್ಮಾರಕದ ಶಂಕುಸ್ಥಾಪನೆ ನೆರವೇರಿಸುವರು.

ಯೋಜನೆಯ ಮೂಲ ಮಾದರಿ ಉದ್ಘಾಟನೆಯನ್ನು ಸಂಸದ ಪ್ರತಾಪ್‌ಸಿಂಹ ನೆರವೇರಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು, ವಿವಿಧ ನಿಗಮ–ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳುವರು.

ಗ್ರಂಥಾಲಯ ಮತ್ತು ವಾಚನಾಲಯ, ಸಭಾಂಗಣ ಸೇರಿದಂತೆ ಸುಸಜ್ಜಿತ ಕಟ್ಟಡದಲ್ಲಿ ಸ್ಮಾರಕ ನಿರ್ಮಾಣಗೊಳ್ಳಲಿದೆ. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶದ ಪ್ರದರ್ಶನ, ವಿವೇಕಾನಂದರ ಸಂದೇಶದಂತೆ ರಾಷ್ಟ್ರ ನಿರ್ಮಾಣ ಅಧ್ಯಯನ, ವ್ಯಕ್ತಿತ್ವ ವಿಕಸನ ತರಗತಿ, ಭಾಷಾ ಪ್ರಭುತ್ವ ತರಬೇತಿ, ಏಕಾಗ್ರತೆ ಮತ್ತು ಧ್ಯಾನ ತರಗತಿ, ಜೀವನ ಮೌಲ್ಯಗಳ ಸಂವರ್ಧನೆ, ಯೋಗಾಸನ ತರಗತಿ ಸೇರಿದಂತೆ ಸದೃಢ ಸಮಾಜ ನಿರ್ಮಾಣಕ್ಕೆ ಪೂರಕ ಚಟುವಟಿಕೆಗಳು ಇಲ್ಲಿ ನಡೆಯಲಿವೆ.



ಮೈಸೂರಿನ ಸುತ್ತೂರು ಮಠಕ್ಕೆ ಕುಟುಂಬ ಸಮೇತ ಭೇಟಿ ನೀಡಿದ ಕೃಷಿ ಸಚಿವ ಬಿ.ಸಿ.ಪಾಟೀಲ್, ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು. ಬಳಿಕ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು.

ಅಮರಾವತಿ ಕೊಲೆ ಪ್ರಕರಣ: 7 ಆರೋಪಿಗಳು ಎನ್‌ಐಎ ವಶಕ್ಕೆ

ಅಮರಾವತಿ: ಅಮರಾವತಿ ಮೂಲದ ರಸಾಯನಶಾಸ್ತ್ರಜ್ಞ ಉಮೇಶ್ ಕೊಲ್ಹೆ ಅವರ ಹತ್ಯೆ ನಡೆಸಿದ ಎಲ್ಲಾ 7 ಮಂದಿ ಆರೋಪಿಗಳನ್ನು ಎನ್‌ಐಎ ವಶಕ್ಕೆ ತೆಗೆದುಕೊಂಡಿದೆ. ಅಮರಾವತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಳಿಕ ಸೋಮವಾರ ಎಲ್ಲಾ ಆರೋಪಿಗಳನ್ನು ಎನ್‌ಐಎ ಕಸ್ಟಡಿಗೆ ತೆಗೆದುಕೊಂಡಿದೆ. ಆರೋಪಿಗಳನ್ನು ಜುಲೈ 8 ಅಥವಾ ಅದಕ್ಕೂ ಮೊದಲು ಎನ್‌ಐಎ ಮುಂಬೈ ನ್ಯಾಯಾಲಯಕ್ಕೆ ಹಾಜರು ಪಡಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಉಮೇಶ್ ಕೊಲ್ಹೆ

ಮುದ್ದಸರ್ ಅಹ್ಮದ್(22), ಶಾರುಖ್ ಪಠಾಣ್(25), ಅಬ್ದುಲ್ ತೌಫಿಕ್ (24), ಶೋಯೆಬ್ ಖಾನ್(22), ಅತೀಬ್ ರಶೀದ್ (22), ಯೂಸುಫ್ ಖಾನ್ (32) ಹಾಗೂ ಹತ್ಯೆಯ ಮಾಸ್ಟರ್ ಮೈಂಡ್ ಶೇಖ್ ಇರ್ಫಾನ್ ಶೇಖ್ ರಹೀಮ್ ಬಂಧಿತ ಆರೋಪಿಗಳು. ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಶಂಕಿತ ಶಮೀಮ್ ಅಹ್ಮದ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಪ್ರವಾದಿ ಮೊಹಮ್ಮದ್ ಕುರಿತು ಅವಹೇಳನ ಮಾಡಿದ ಮಾಜಿ ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಬೆಂಬಲಿಸಿ ಮಾಡಲಾಗಿದ್ದ ಸಾಮಾಜಿಕ ಮಾಧ್ಯಮದ ಪೋಸ್ಟ್ ಒಂದನ್ನು ಉಮೇಶ್ ಕೊಲ್ಹೆ ಬೆಂಬಲಿಸಿದ್ದರು. ಜೂ.21ರಂದು ರಾತ್ರಿ 10 ಗಂಟೆ ವೇಳೆ ಮೂವರು ದುಷ್ಕರ್ಮಿಗಳ ತಂಡ ಉಮೇಶ್ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದರು. ಹಲ್ಲೆ ಬಳಿಕ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದರು.



ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ತಮ್ಮ ಸಬ್ ಬ್ರಾಂಡ್ ಮೈನ್ ಕಲೆಕ್ಷನ್ ವರ್ಜಾ (Verza) ಆವರಣದ ನೂತನ ವಿನ್ಯಾಸಗಳನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಮಿಸ್ ಐಮನ್ ಸಾನಿಯಾ, ಮಿಸ್ ದಿಲ್ನಾ ರಶೀದ್, ಮಿಸ್ ಆಶಾ, ಮಿಸ್ ಮಾಲತಿ ಹಾಗೂ ಮಲಬಾರ್ ಗೋಲ್ಡ್‌ನ ದಕ್ಷಿಣ ವಲಯ ಮುಖ್ಯಸ್ಥ ಹಾಗೂ ಮೈಸೂರು ಶಾಖೆಯ ಮುಖ್ಯಸ್ಥ ಶರಪುದ್ದೀನ್ ಉಪಸ್ಥಿತರಿದ್ದರು.

ಪ್ರೊ. ಕೆ.ಜಿ. ಸತ್ಯನಾರಾಯಣ ನಿಧನ



ಮೈಸೂರು,ಜು.5–ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕರು ಮತ್ತು ಭಾರತ್ ಸ್ಕೌಟ್ಸ್‌ನ ರೋವರ್ ಆಗಿ ರಾಷ್ಟ್ರಪತಿಗಳ ಪದಕ ಪಡೆದಿದ್ದ ಮೈಸೂರಿನ ಕುವೆಂಪು ನಗರ ಇ ಅಂಡ್ ಎಫ್ ಬ್ಲಾಕ್ ನಿವಾಸಿ ಪ್ರೊ. ಕೆ.ಜಿ.ಸತ್ಯನಾರಾಯಣ ಅವರು ಮಂಗಳವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 94 ವರ್ಷ ವಯಸ್ಸಾಗಿತ್ತು.

ಮೈಸೂರು ಮುಲಕನಾಡು ಮಹಾಸಭಾದ ಮಾಜಿ ಅಧ್ಯಕ್ಷರಾದ ಶ್ರೀಯುತರು ಅಮೇರಿಕಾದಲ್ಲಿ ಯುರಾಲಜಿ ವೈದ್ಯರಾಗಿರುವ ಪುತ್ರ ಡಾ.ರಾಂಗೋಪಾಲ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜು. 7ರಂದು ಬೆಳಗ್ಗೆ 9 ಗಂಟೆಯಿಂದ ಸ್ವಗೃಹ 'ರಾಮಕೃಪ'ದಲ್ಲಿ ದಿವಂಗತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಜ್ರತ್ ಸಾಲಾರ್ ಷರೀಫ್



ಮೈಸೂರಿನ ಕೆಸರೆಯ ಅಜ್ಜುನಗರ ನಿವಾಸಿ ಹಜ್ಜರತ್ ಸಾಲಾರ್ ಷರೀಫ್(70) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರಿಯರು, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ 5.45ಕ್ಕೆ ಟಿಪ್ಪು ವೃತ್ತದ ಬಳಿಯಿರುವ ಮುಸ್ಲಿಮರ ರುದ್ರ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ. ಹಜ್ಜರತ್ ಸಾಲಾರ್ ಷರೀಫ್ ಅವರ ನಿಧನಕ್ಕೆ ಮೈಸೂರು ಸರ್‌ಖಾಜಿ ಹಜ್ಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್, ಮುಸ್ಲಿಂ ಸಮುದಾಯದ ಮುಖಂಡರಾದ ಅಲ್‌ಹಾಜ್ ಮನ್ಸೂರ್ ಮಜೀದ್ ಸೇಠ್ ಖುಶಾಲಿ, ಹಜ್ಜರತ್ ಮೌಲಾನಾ ಮಕ್ಬೂಲ್ ಅಹಮದ್ ನಿಜ್ಜಾಮಿ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಉದ್ದೇಶಿತ ವಿವೇಕ ಸ್ಮಾರಕದ ಭೂಮಿ ಪೂಜೆ ಕಾನೂನುಸಮ್ಮತವಲ್ಲ

ವೀರಶೈವ ಲಿಂಗಾಯತ ಸಂಘಟನೆಗಳ ಪ್ರತಿಪಾದನೆ



ಮೈಸೂರು,ಜು.5(ಪಿಎಂ)– ಉದ್ದೇಶಿತ ವಿವೇಕ ಸ್ಮಾರಕ ನಿರ್ಮಾಣದ ಭೂಮಿಗೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿ ವ್ಯಾಜ್ಯ ಬಾಕಿ ಉಳಿದಿದ್ದು, ಇದು ಇತ್ಯರ್ಥಗೊಳ್ಳುವ ಮುನ್ನವೇ ನಾಳೆ (ಜು.6) ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ ಹಮ್ಮಿಕೊಂಡಿರುವುದು ಕಾನೂನುಸಮ್ಮತವಲ್ಲ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟ ಹಾಗೂ ಶ್ರೀ ನಿರಂಜನ ಮಠ ಸಂರಕ್ಷಣಾ ಸಮಿತಿಯ ಮುಖಂಡರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಮಹಾಸಭಾದ ರಾಷ್ಟ್ರೀಯ ಘಟಕದ ಕಾರ್ಯಕಾರಿ ಸಮಿತಿ ಸದಸ್ಯ ಟಿ.ಎಸ್.ಲೋಕೇಶ್ ಮಾತನಾಡಿ, ಸ್ಮಾರಕ ನಿರ್ಮಾಣಕ್ಕೆ ಶ್ರೀನಿರಂಜನ ಮಠವನ್ನೂ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ರಾಜ್ಯ ಸರ್ಕಾರ ನೀಡಿರುವುದರ ವಿರುದ್ಧ ಕಳೆದ ಒಂದು ವರ್ಷದಿಂದ ಹೋರಾಟ ಮಾಡುತ್ತಿದ್ದೇವೆ. ಮಠದ ಆವರಣದಲ್ಲಿ ಅಹೋರಾತ್ರಿ ಹೋರಾಟ ಮುಂದುವರೆಸುವುದರ ಜೊತೆಗೆ ಕಾನೂನಾತ್ಮಕವಾಗಿಯೂ ರಾಜ್ಯ ಹೈಕೋರ್ಟ್ ಮೊರೆ ಹೋಗಿದ್ದೇವೆ ಎಂದು ತಿಳಿಸಿದರು.

ನಮ್ಮ ಅಹವಾಲನ್ನು ಕೋರ್ಟ್ ಪರಿಗಣಿಸಿ ಸರ್ಕಾರ ಮತ್ತು ರಾಮಕೃಷ್ಣ ಆಶ್ರಮಕ್ಕೆ ತುರ್ತು ನೋಟಿಸ್ ಅನ್ನು ಕಳೆದ ಡಿಸೆಂಬರ್‌ನಲ್ಲೇ ನೀಡಿದೆ. ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಮೊದಲನೇ ಪಾರ್ಟಿಯಾದ ರಾಜ್ಯ ಸರ್ಕಾರ ಸದರಿ ನೋಟಿಸ್‌ಗೆ ಈವರೆಗೆ ಯಾವುದೇ ಉತ್ತರ ನೀಡಿಲ್ಲ. ಆದರೆ ಮೂರನೇ ಪಾರ್ಟಿಯಾದ ಆಶ್ರಮದವರು, 'ಸಚಿವ ಸಂಪುಟ ನಿರ್ಧರಿಸಿ ಮಠವನ್ನು ನಮಗೆ ನೀಡಲು ತೀರ್ಮಾನಿಸಿದೆ. ಹಾಗಾಗಿ ಸ್ವಾಧೀನಕ್ಕೆ ಕೇಳುತ್ತಿದ್ದೇವೆ' ಎಂದು ನೋಟಿಸ್‌ಗೆ ಉತ್ತರಿಸಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ಕೋರ್ಟ್‌ನಲ್ಲಿ ವ್ಯಾಜ್ಯ ಇತ್ಯರ್ಥಗೊಳ್ಳುವವರೆಗೆ ಯಾವುದೇ ಹೊಸ ಆದೇಶ ನೀಡದಂತೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ ಬಳಿಕವೂ ಜೂ.1ರಂದು ಮೈಸೂರು ಮಹಾನಗರ ಪಾಲಿಕೆಯ ನಗರ ಯೋಜನೆ ವಿಭಾಗದಿಂದ ಉದ್ದೇಶಿತ ಸ್ಮಾರಕದ ನಿರ್ಮಾಣದ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಕೋರ್ಟ್‌ನಲ್ಲಿ ವ್ಯಾಜ್ಯವಿರುವುದು ಗೊತ್ತಿದ್ದೂ ಈ ರೀತಿ ಪಾಲಿಕೆ ಕ್ರಮ ವಹಿಸಿರುವುದು ನ್ಯಾಯ ಸಮ್ಮತವಲ್ಲ ಎಂದು ಪ್ರತಿಪಾದಿಸಿದರು.

ಮಹಾಸಭಾದ ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಕೆ.ಎಸ್.ಮಹದೇವ ಪ್ರಸಾದ್ ಮಾತನಾಡಿ, ಶ್ರೀ ನಿರುಜನ ಮಠವು ಕಳೆದ 150 ವರ್ಷಗಳಿಂದ ವೀರಶೈವ ಲಿಂಗಾಯತ ಧರ್ಮದ ಧಾರ್ಮಿಕ ಚಿಂತನೆಗಳನ್ನು ಹರಡುವ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಈ ಸ್ವತ್ತನ್ನು ಬೇರೆ ಸಮುದಾಯಕ್ಕೆ ನೀಡಲು 2013ರಲ್ಲಿ ಸಚಿವ ಸಂಪುಟ ನಿರ್ಣಯ ಕೈಗೊಂಡಿರುವುದು ಸರಿಯಲ್ಲ ಎಂದರು.

ಅಂದು ಸರ್ಕಾರವು ಯಾವುದೇ ಪೂರ್ವಾಪರ ಚಿಂತನೆ ಮಾಡದೇ ರಾಮಕೃಷ್ಣ ಆಶ್ರಮಕ್ಕೆ ಮಠದ ಸ್ವತ್ತನ್ನು ನೀಡಿರುವುದು ಕಾನೂನುಸಮ್ಮತವಲ್ಲ. ಹಾಗಾಗಿ ಹೈಕೋರ್ಟ್ ಮತ್ತು ಮೈಸೂರಿನ ಸಿವಿಲ್ ಕೋರ್ಟ್ ಸೇರಿದಂತೆ ಎರಡೂ ಕೋರ್ಟ್‌ನಲ್ಲಿ ಸರ್ಕಾರದ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ವ್ಯಾಜ್ಯ ಹೂಡಿದ್ದೇವೆ. ಅದು ಇತ್ಯರ್ಥವಾಗುವ ಮುನ್ನವೇ ಸ್ಮಾರಕದ ಭೂಮಿ ಪೂಜೆ ಮಾಡಲು ಹೊರಟಿರುವುದು ಸರಿಯಲ್ಲ. ನಿನ್ನೆಯಷ್ಟೇ ಭೂಮಿ ಪೂಜೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಲಭಿಸಿತು. ಈ ವಿಚಾರವನ್ನು ಕೋರ್ಟ್ ಗಮನಕ್ಕೂ ತರಲಿದ್ದೇವೆ ಎಂದು ತಿಳಿಸಿದರು.

ಶ್ರೀ ನಿರಂಜನ ಮಠ ಸಂರಕ್ಷಣಾ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಮಹಾಸಭಾದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಸಿ.ಗುರುಸ್ವಾಮಿ, ಮೈಸೂರು ತಾಲೂಕು ಘಟಕದ ಅಧ್ಯಕ್ಷ ಬಿ.ಕೆ. ನಾಗರಾಜ್, ಬಸವ ಬಳಗಳ ಒಕ್ಕೂಟದ ಅಧ್ಯಕ್ಷ ಎಲ್.ಎಸ್.ಮಹದೇವಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದು ಪ್ರತಿಭಟನೆ...

ಕೋರ್ಟ್‌ನಲ್ಲಿ ವ್ಯಾಜ್ಯ ಇತ್ಯರ್ಥವಾಗುವವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು. ವ್ಯಾಜ್ಯದಲ್ಲಿ ರಾಜ್ಯ ಸರ್ಕಾರವೂ ಪಾರ್ಟಿಯಾಗಿದ್ದು, ಸರ್ಕಾರದ ಪ್ರತಿನಿಧಿಯಾದ ಜಿಲ್ಲಾ ಉಸ್ತುವಾರಿ ಸಚಿವರು ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನ್ಯಾಯ ಸಮ್ಮತವಲ್ಲ. ಹಾಗಾಗಿ ಅವರು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಾರದೆಂದು ಮನವಿ ಮಾಡುತ್ತೇವೆ. ನಾಳೆ (ಜು.6) ಯಾವುದೇ ಕಾರಣಕ್ಕೂ ಭೂಮಿ ಪೂಜೆಗೆ ಅವಕಾಶ ನೀಡುವುದಿಲ್ಲ. ನಾಳೆ ಬೆಳಗ್ಗೆ 8.30ಕ್ಕೆ ನಿರಂಜನ ಮಠದ ಎದುರು ಬೃಹತ್ ಪ್ರತಿಭಟನೆ ನಡೆಸಲಿದ್ದೇವೆ.

-ಟಿ.ಎಸ್.ಲೋಕೇಶ್

ವಿವೇಕ ಸ್ಮಾರಕದ ಗುದ್ದಲಿ ಪೂಜೆಯಲ್ಲಿ ಪಾಲ್ಗೊಳ್ಳದಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ವೀರಶೈವ ಲಿಂಗಾಯಿತ ನಿಯೋಗ ಮನವಿ



ಮೈಸೂರು, ಜು.5(ಎಂಕೆ)– ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಎನ್‌ಟಿಎಂ ಶಾಲೆ ಆವರಣದಲ್ಲಿ (ನಿರಂಜನ ಮಠ) ಶ್ರೀ ರಾಮಕೃಷ್ಣ ಆಶ್ರಮದಿಂದ ನಿರ್ಮಿಸುತ್ತಿರುವ ವಿವೇಕ ಸ್ಮಾರಕದ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟ ಹಾಗೂ ಶ್ರೀ ನಿರಂಜನ ಮಠ ಸಂರಕ್ಷಣಾ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಮಂಗಳವಾರ ಸಂಜೆ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿದ ಲಿಂಗಾಯತ ಸಮುದಾಯದ ಮುಖಂಡರು, ನಾಳೆ (ಜು.6) ಬೆಳಗ್ಗೆ 9 ಗಂಟೆಗೆ ನಿರಂಜನ ಮಠದ ಜಾಗದಲ್ಲಿ ವಿವೇಕ ಸ್ಮಾರಕ ನಿರ್ಮಾಣದ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗದಂತೆ ಮನವಿ ಸಲ್ಲಿಸಿದರಲ್ಲದೆ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದೆ. ಆದ್ದರಿಂದ ಸರ್ಕಾರದ ಪ್ರತಿನಿಧಿಯಾಗಿರುವ ತಾವುಗಳು ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಕಾನೂನು ಸಮ್ಮತವಲ್ಲವೆಂದು ಮನವರಿಕೆ ಮಾಡುವ ಪ್ರಯತ್ನ ಮಾಡಿದರು.

ಸರ್ಕಾರದ ಸೂಚನೆ ಪಾಲಿಸಲಾಗುವುದು: ಮನವಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಕಳೆದೊಂದು ವರ್ಷದಿಂದ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿಲ್ಲ. ವಿವೇಕ ಸ್ಮಾರಕ ನಿರ್ಮಾಣ ಕುರಿತಂತೆ ವೈಯಕ್ತಿಕ ಪಾತ್ರವೂ ಇಲ್ಲ. ಅಲ್ಲದೆ ವಿವಾದದ ಬಗ್ಗೆಯೂ ಮಾಹಿತಿ ಇಲ್ಲ. ಮೊನ್ನೆ ಆಶ್ರಮದ ಸ್ವಾಮೀಜಿಗಳು ಬಂದು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ. ಅಲ್ಲದೆ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಿಂದ ವಿವೇಕ ಸ್ಮಾರಕ ನಿರ್ಮಾಣದ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಸೂಚನೆ ಬಂದಿದೆ. ಆದ್ದರಿಂದ ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಸರ್ಕಾರ ಸೂಚನೆ ನೀಡಿದಂತೆ ನಡೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ರಾಮಕೃಷ್ಣ ಆಶ್ರಮ ಹಮ್ಮಿಕೊಂಡಿರುವ ವಿವೇಕ ಸ್ಮಾರಕ ನಿರ್ಮಾಣದ ಗುದ್ದಲಿ ಪೂಜೆ ಖಂಡಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟ ಹಾಗೂ ಶ್ರೀ ನಿರಂಜನ ಮಠ ಸಂರಕ್ಷಣಾ ಸಮಿತಿ ವತಿಯಿಂದ ನಿರಂಜನ ಮಠದ ಎದುರು ಬೆಳಗ್ಗೆ 8.30ಕ್ಕೆ ಬೃಹತ್ ಪ್ರತಿಭಟನೆ ಹಮ್ಮಿ ಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಲೋಕೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಕ್ರಮ ಮದ್ಯ ಸಂಗ್ರಹ: ಮಹಿಳೆ ಬಂಧನ

ಮೈಸೂರು, ಜು.5(ಎಸ್‌ಬಿಡಿ)– ಅಕ್ರಮವಾಗಿ ಮದ್ಯ ದಾಸ್ತಾನು ಮಾಡಿದ್ದ ಮಹಿಳೆಯನ್ನು ಅಬಕಾರಿ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.


ಮೈಸೂರು ತಾಲೂಕು ದೊಡ್ಡ ಮಾರನಹಳ್ಳಿಯ ಪ್ರೇಮಾ ಬಂಧಿತರಾಗಿದ್ದು, ಅವರು ಅಕ್ರಮವಾಗಿ ಮಾರಾಟ ಮಾಡಲು ಮನೆಯಲ್ಲಿಟ್ಟಿದ್ದ 4 ಲೀಟರ್ 350 ಮಿಲಿ ಮದ್ಯದ ಸ್ಯಾಚೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಮೈಸೂರು ವಿಭಾಗ ಅಬಕಾರಿ ಜಂಟಿ ಆಯುಕ್ತರ ಕಚೇರಿಯಲ್ಲಿ ಪ್ರಕರಣ ದಾಖಲಿಸಿ, ಬಂಧಿತ ಮಹಿಳೆಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಬಕಾರಿ ಜಂಟಿ ಆಯುಕ್ತರ ನಿರ್ದೇಶನ, ಅಬಕಾರಿ ಅಧೀಕ್ಷಕರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅಬಕಾರಿ ನಿರೀಕ್ಷಕಿ ಪಿ.ಪ್ರೇಮಾ, ಉಪ ನಿರೀಕ್ಷಕ ಸೋಮಶೆಟ್ಟಿ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ವಸಂತನಗರದಲ್ಲಿ ಯುಜಿಡಿ ಅಧ್ವಾನ: ನಿವಾಸಿಗಳ ದಯನೀಯ ಸ್ಥಿತಿ







ಮೈಸೂರು,ಜು.5(ಎಂಕೆ)–ಮೈಸೂರಿನ ಬನ್ನೂರು ಮುಖ್ಯ ರಸ್ತೆ ಸಮೀಪದ ವಸಂತನಗರ ಬಡಾವಣೆಯಲ್ಲಿ ಯುಜಿಡಿ ಕಾಮಗಾರಿ ನೆಪದಲ್ಲಿ ರಸ್ತೆಯನ್ನು ಅಗೆದು ಹಾಳು ಮಾಡಲಾಗಿದ್ದು, ಅವ್ಯವಸ್ಥಿತ ಕಾಮಗಾರಿ ನಡೆಸಿ ಜನರ ತೆರಿಗೆ ಹಣ ಲೂಟಿ ಮಾಡುತ್ತಿದ್ದಾರೆ ಎಂದು ಬಡಾವಣೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಡಾ ವತಿಯಿಂದ ಕಳೆದೊಂದು ತಿಂಗಳಿಂದ ಬಡಾವಣೆಯ 17, 18 ಮತ್ತು 19ನೇ ಕ್ರಾಸ್ ರಸ್ತೆಗಳಲ್ಲಿ ಯುಜಿಡಿ ಕಾಮಗಾರಿ ನಡೆಯುತ್ತಿದ್ದು, ಒಮ್ಮೆ ವ್ಯವಸ್ಥಿತವಾಗಿ ಕಾಮಗಾರಿ ನಡೆಸದೆ ಪದೇ ಪದೆ ರಸ್ತೆ ಅಗೆದು ಅಧ್ವಾನ ಸೃಷ್ಟಿಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ. ವರ್ಷದ ಹಿಂದೆಯಷ್ಟೇ ಮಾಡಿದ್ದ ಯುಜಿಡಿ ಪೈಪ್‌ಲೈನ್ ಕಾಮಗಾರಿ ಪಕ್ಕದಲ್ಲಿಯೇ ಮತ್ತೊಮ್ಮೆ ಹೊಸದಾಗಿ ಯುಜಿಡಿ ಪೈಪ್‌ಲೈನ್ ಕಾಮಗಾರಿ ಮಾಡುತ್ತಿದ್ದಾರೆ. ಹೊಸ ಯುಜಿಡಿ ಕಾಮಗಾರಿ ಗಮನಿಸಿದರೆ ಬಡಾವಣೆಯಲ್ಲಿ ಯುಜಿಡಿ ಸಮಸ್ಯೆ ಇನ್ನಷ್ಟು ಹೆಚ್ಚಾಗಲಿದ್ದು, ಕಾಮಗಾರಿ ಹೆಸರಿನಲ್ಲಿ ತಿಂಗಳಿಂದ ನರಕ ದರ್ಶನ ಮಾಡಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ದುರ್ವಾಸನೆ: ಕಾಮಗಾರಿ ವೇಳೆ ಮೊದಲಿದ್ದ ಯುಜಿಡಿ ಪೈಪ್‌ಲೈನ್‌ಗಳನ್ನು ಒಡೆದು ಹಾಕಿರುವುದರಿಂದ ದುರ್ವಾಸನೆ ಹೆಚ್ಚಾಗಿದೆ. ಯುಜಿಡಿಯ ಕೊಳಚೆ ನೀರು ಅಗೆದ ಗುಂಡಿಗಳಲ್ಲಿ ತುಂಬುತ್ತಿದ್ದು, ಮನೆಯಿಂದ ಹೊರಬಾರದಂತಾಗಿದೆ. ದುರ್ವಾಸನೆಗೆ ತಿರುಗಾಡುವುದೇ ಕಷ್ಟವಾಗಿದೆ. ಮನೆಯಲ್ಲಿ ಮಕ್ಕಳ ಆರೋಗ್ಯ ಹಾಳಾಗುತ್ತಿದ್ದು, ಒಂದೆರಡು ದಿನವೆಂದು ತಿಂಗಳಿನಿಂದಲೂ ಕಾಮಗಾರಿ ನಡೆಸುತ್ತಲೇ ಇದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

20ನೇ ಕ್ರಾಸ್‌ಗಿಲ್ಲ ಯುಜಿಡಿ: ವಸಂತನಗರ ಬಡಾವಣೆಯಲ್ಲಿ ಯುಜಿಡಿ ಪೈಪ್‌ಲೈನ್ ಇದ್ದ ರಸ್ತೆಗಳಲ್ಲಿ ಮತ್ತೆ ಹೊಸದಾಗಿ ಯುಜಿಡಿ ಕಾಮಗಾರಿಗಳು ನಡೆಯುತ್ತಿವೆ. ಆದರೆ 20ನೇ ಕ್ರಾಸ್ ಯುಜಿಡಿ ಹಾಗೂ ಚರಂಡಿ ವ್ಯವಸ್ಥೆಯಿಲ್ಲ. ಯುಜಿಡಿ ಕಾಮಗಾರಿ ಮಾಡುತ್ತೇವೆಂದು ದೊಡ್ಡ ಗುಂಡಿ ಅಗೆದು ವರ್ಷದಿಂದ ಹಾಗೆಯೇ ಬಿಟ್ಟಿದ್ದಾರೆಯೇ ಹೊರತು ಬೇರೇನೂ ಮಾಡಿಲ್ಲ. ಈಗ ಗುಂಡಿ ತುಂಬ ಕೊಳಚೆ ನೀರು ತುಂಬಿದ್ದು, ಸಾಂಕ್ರಾಮಿಕ ರೋಗ ಹರಡುವ ಬೀತಿ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಎರಡ್ಮೂರು ದಿನದಲ್ಲಿ ಪೂರ್ಣ: ವಸಂತನಗರ ಬಡಾವಣೆ ಅಭಿವೃದ್ಧಿ ವೇಳೆ ಮಾಡಿದ್ದ ಯುಜಿಡಿ ಪೈಪ್‌ಲೈನ್‌ಗೆ ಯಾವುದೇ ಲಿಂಕ್ ಇರಲಿಲ್ಲ. ಇದರಿಂದ ಸಾಕಷ್ಟು ಸಮಸ್ಯೆ ಉಂಟಾಗುತ್ತಿತ್ತು. ಆದ್ದರಿಂದ ಮತ್ತೆ ಹೊಸದಾಗಿ ಯುಜಿಡಿ ಕಾಮಗಾರಿ ಮಾಡುತ್ತಿದ್ದು, ಎರಡ್ಮೂರು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು. 20ನೇ ಕ್ರಾಸ್‌ನಲ್ಲಿಯೂ ಯುಜಿಡಿ ಕಾಮಗಾರಿ ನಡೆಯಲಿದೆ ಎಂದು ಮುಡಾ ಇಂಜಿನಿಯರ್ ಸಂಪತ್‌ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಶಾಸಕ ಜಮೀರ್ ಅಹಮದ್ ಮನೆ, ಕಚೇರಿಗಳ ಮೇಲೆ ಎಸಿಬಿ ದಾಳಿ: 12 ಗಂಟೆ ಪರಿಶೀಲನೆ, ದಾಖಲೆಗಳು ವಶಕ್ಕೆ

ದಾಳಿ ರಾಜಕೀಯ ಪ್ರೇರಿತ: ಜಮೀರ್ ಬೆಂಬಲಿಗರ ಆಕ್ರೋಶ, ಪ್ರತಿಭಟನೆ



ಪಿಎಸ್‌ಐ ಹಗರಣದಲ್ಲಿ ಸರ್ಕಾರದ ಸಚಿವರು, ಮಾಜಿ ಸಿಎಂ ಮಗ ಭಾಗಿಯಾದ ಆರೋಪ ಕೇಳಿಬರುತ್ತಿದ್ದು, ಜನರ ಗಮನ ಬೇರೆಡೆಗೆ ತಿರುಗಿಸಲು ನಮ್ಮ ಪಕ್ಷದ ಶಾಸಕ ಜಮೀರ್ ಅಹಮದ್ ಖಾನ್ ಅವರ ಮನೆ, ಕಚೇರಿಗಳ ಮೇಲೆ ಎಸಿಬಿ ಮೂಲಕ ದಾಳಿ ಮಾಡಿಸಲಾಗಿದೆ. ಇಂಥಾ ರಾಜಕೀಯ ಪ್ರೇರಿತ ಎಸಿಬಿ ದಾಳಿಯನ್ನು ನಾನು ಖಂಡಿಸುತ್ತೇನೆ.

–ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ


ಬೆಂಗಳೂರು, ಜು.5–ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಮನೆ ಹಾಗೂ ಕಚೇರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಮಂಗಳವಾರ ಬೆಳ್ಳಂಬೆಳಗ್ಗೆಯೇ ದಾಳಿ ನಡೆಸಿ, ಪರಿಶೀಲನೆ ನಡೆಸಿದ್ದಾರೆ.

ಜಮೀರ್ ಅಹಮದ್‌ಗೆ ಸೇರಿದ ರೈಲ್ವೆ ಕಂಟೋನ್‌ಮೆಂಟ್ ಬಳಿಯ ಮನೆ, ಕಲಾಸಿಪಾಳ್ಯದಲ್ಲಿರುವ ನ್ಯಾಷನಲ್ ಟ್ರಾವೆಲ್ಸ್ ಕಚೇರಿ, ಸಿಲ್ವರ್ ಓಕ್ ಅಪಾರ್ಟ್‌ಮೆಂಟ್‌ನ ಫ್ಲಾಟ್, ಸದಾಶಿವನಗರದಲ್ಲಿನ ಗೆಸ್ಟ್‌ಹೌಸ್ ಹಾಗೂ ಬನಶಂಕರಿಯಲ್ಲಿರುವ ಜಿಕೆ ಅಸೋಸಿಯೇಟ್ಸ್ ಕಚೇರಿ ಸೇರಿದಂತೆ ಒಟ್ಟು 5 ಕಡೆ 40ಕ್ಕೂ ಹೆಚ್ಚು ಎಸಿಬಿ ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿ, ಸತತ 12 ಗಂಟೆ ಪರಿಶೀಲನೆ ನಂತರ ಪ್ರಮುಖ ದಾಖಲೆಗಳನ್ನು ವಶಕ್ಕೆ ಪಡೆದು, ತನಿಖೆ ನಡೆಸಿದ್ದಾರೆ.

ಇಡಿ ನಿರ್ದೇಶನದಂತೆ ಅಕ್ರಮ ಆಸ್ತಿ ಗಳಿಕೆ ಪ್ರಕರಣ ದಾಖಲಿಸಿಕೊಂಡು ದಾಳಿ ನಡೆಸಲಾಗಿದೆ ಎನ್ನಲಾಗಿದ್ದು, ರೈಲ್ವೆ ಕಂಟೋನ್‌ಮೆಂಟ್ ಬಳಿಯ ಜಮೀರ್ ಬಂಗಲೆಯ ಎಲ್ಲಾ ಕಡೆ ತಲಾಷ್ ನಡೆಸಲಾಗಿದೆ. ಎಸಿಬಿ ಎಸ್‌ಪಿಗಳಾದ ಹರೀಶ್ ಪಾಂಡೆ ಹಾಗೂ ಯತೀಶ್ ಚಂದ್ರ ಅವರೂ ಜಮೀರ್ ನಿವಾಸಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಇಲ್ಲಿ ಯಲಹಂಕ ಉಪವಿಭಾಗ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಗೆಸ್ಟ್‌ಹೌಸ್ ಹಾಗೂ ಕಚೇರಿಗಳಲ್ಲೂ ಪರಿಶೀಲನೆ ನಡೆಸಲಾಗಿದೆ. ಎಸಿಬಿ ದಾಳಿಯ ಬೆನ್ನಲ್ಲೇ ಜಮೀರ್ ನಿವಾಸದ ಬಳಿ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿ, ಪ್ರತಿಭಟನೆ ನಡೆಸಿದರು. ರಾಜಕೀಯ ಪ್ರೇರಿತವಾಗಿ ಹೀಗೆ ದಾಳಿ ನಡೆಸಲಾಗುತ್ತಿದೆ ಎಂದು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಭಿಮಾನಿಯೊಬ್ಬ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಹೈಡ್ರಾಮವೂ ನಡೆಯಿತು. ಈ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ಕೆಎಸ್‌ಆರ್‌ಪಿ ತುಕಡಿಯನ್ನು ಭದ್ರತೆಗೆ ನಿಯೋಜಿಸಿ, ಪ್ರತಿಭಟನಾಕಾರರನ್ನು ಪೊಲೀಸರು ಸ್ಥಳದಿಂದ ಚದುರಿಸಿದರು.

ದಾಳಿ ಹಿನ್ನೆಲೆ: ಮುಂಬೈನಲ್ಲಿ ಟ್ರಾವೆಲ್ಸ್ ಕಂಪನಿ ಮಾಲೀಕತ್ವ ಹೊಂದಿರುವ ಜಮೀರ್ ದುಬೈನಲ್ಲೂ ಆಸ್ತಿ ಮಾಡಿದ್ದಾರೆ ಎಂಬ ಆರೋಪ ಇದೆ. ಅಲ್ಲದೆ ಐಎಂಎ ಹಗರಣದ ಆರೋಪಿ ಮನ್ಸೂರ್ ಖಾನ್ ಜೊತೆ ಜಮೀರ್ ಒಡನಾಟ ಹೊಂದಿದ್ದು, ಆ ಕಂಪನಿಯ ಮೂಲಕ ಹಣಕಾಸಿನ ವ್ಯವಹಾರ ನಡೆಸಿದ್ದಾರೆ ಎನ್ನಲಾಗಿತ್ತು. ಅಲ್ಲದೆ ಶ್ರೀಲಂಕಾದಲ್ಲಿ ಬೇರೊಬ್ಬರ ಹೆಸರಿನಲ್ಲಿ ಕ್ಯಾಸಿನೋ ನಡೆಸುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬಂದಿದ್ದವು. ಇದೆಲ್ಲದರ ನಡುವೆ ಈ ಹಿಂದೆ ಜಮೀರ್ ನಿವಾಸದ ಮೇಲೆ ಇಡಿ ದಾಳಿ ನಡೆಸಿ, ದಾಖಲೆಗಳನ್ನು ಜಾಲಾಡಿತ್ತು. ದಾಳಿ ವೇಳೆ ಸರ್ಕಾರಿ ಯೋಜನೆಯೊಂದರಲ್ಲಿ ಅವ್ಯವಹಾರ ಆಗಿರುವ ಸಂಬಂಧ ದಾಖಲೆ ಲಭ್ಯವಾಗಿತ್ತು. ಈ ಬಗ್ಗೆ ಇಡಿ 6 ತಿಂಗಳಲ್ಲಿ 2 ವರದಿ ನೀಡಿದ್ದು, ಅದರಲ್ಲಿನ ದಾಖಲೆ ಆಧಾರದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಎಸಿಬಿ ಪ್ರಕರಣ ದಾಖಲಿಸಿತ್ತು.

ಸಾಕ್ಷಿ ಆಧರಿಸಿ ಎಸಿಬಿ ದಾಳಿ



ಬೆಂಗಳೂರು: ರಾಜಕೀಯ ಕೈವಾಡ ಎನ್ನುವುದು ಕಾಂಗ್ರೆಸ್ ಘೋಷವಾಕ್ಯ, ಸಾಕ್ಷಿ ಆಧರಿಸಿ ಎಸಿಬಿ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಜಮೀರ್ ನಿವಾಸ ಹಾಗೂ ಕಚೇರಿ ಮೇಲೆ ಎಸಿಬಿ ದಾಳಿ ರಾಜಕೀಯ ಪ್ರೇರಿತ ಎಂದು ಖಂಡಿಸಿರುವ ಕಾಂಗ್ರೆಸ್‌ಗೆ ತಿರುಗೇಟು ನೀಡಿದ ಸಿಎಂ, ಪೊಲೀಸರ ಕರ್ತವ್ಯಕ್ಕೆ ನಾವು ಯಾವುದೇ ರೀತಿಯಲ್ಲಿ ಅಡಚಣೆ ಮಾಡುವುದಿಲ್ಲ. ಬಾಕಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸಿಬಿ ದಾಳಿ ನಡೆಸಿದ್ದು, ವಿಚಾರಣೆ ನಡೆಯುತ್ತಿದೆ. ಎಸಿಬಿ ದಾಳಿ ವೇಳೆ ಪ್ರತಿಭಟನೆ ಮಾಡುತ್ತಿರುವುದು ರಾಜಕೀಯ ಪ್ರೇರಿತ ಎಂದರು. ಎಸಿಬಿ ಸಾಕ್ಷಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಕೆಲಸ ಮುಂದುವರೆಸಿದೆ. ಇದು ನಿರಂತರವಾದ ಪ್ರಕ್ರಿಯೆ. ಪ್ರಕರಣಗಳನ್ನು ಬಾಕಿ ಉಳಿಸಿಕೊಳ್ಳದಂತೆ ನ್ಯಾಯಾಲಯ ತಿಳಿಸುತ್ತದೆ. ಆದರೆ ಆ ನಿಟ್ಟಿನಲ್ಲಿ ಕರ್ತವ್ಯಕ್ಕೆ ಮುಂದಾದರೆ ಅಡಚಣೆ ಮಾಡುವುದು, ಅದಕ್ಕೆ ರಾಜಕೀಯ ಬಣ್ಣ ಕಟ್ಟುವುದು ಸರ್ವೇ ಸಾಮಾನ್ಯ. ಎಲ್ಲವೂ ರಾಜಕೀಯ ಕೈವಾಡ ಎನ್ನುವುದು ಕಾಂಗ್ರೆಸ್‌ನವರ ಹೊಸ ಡೈಲಾಗ್ ಅಲ್ಲ ಅದು ಅವರ ಘೋಷವಾಕ್ಯ ಎಂದು ವ್ಯಂಗ್ಯವಾಡಿದರು.

ಒಂದನೇ ಪುಟದಿಂದ

ಚಂದ್ರಶೇಖರ ಗುರೂಜಿ ಹತ್ಯೆ

ಈ ವಿಷಯವನ್ನು ಹೋಟೆಲ್ ಸಿಬ್ಬಂದಿ ಮೊದಲ ಮಹಡಿಯ ರೂಂ ನಂ.220ರಲ್ಲಿ ತಂಗಿದ್ದ ಗುರೂಜಿ ಅವರಿಗೆ ತಿಳಿಸಿದ್ದಾರೆ. ಅವರನ್ನು ಅಲ್ಲೇ ಕೂರಿಸಿ, ತಾವು ಭೇಟಿ ಮಾಡಲು ಬರುವುದಾಗಿ ಗುರೂಜಿ ಹೋಟೆಲ್ ಸಿಬ್ಬಂದಿಗೆ ಹೇಳಿ ಕಳುಹಿಸಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಚಂದ್ರಶೇಖರ ಗುರೂಜಿ ಕೆಳಗಿಳಿದು ಲಾಬಿಗೆ ಆಗಮಿಸಿ, ಈ ಇಬ್ಬರು ಕುಳಿತಿದ್ದ ಸ್ಥಳಕ್ಕೆ ಬಂದು, ಅಲ್ಲಿಯೇ ಇದ್ದ ಕುರ್ಚಿಯಲ್ಲಿ ಕುಳಿತುಕೊಂಡಿದ್ದಾರೆ. ಗುರೂಜಿ ಅವರು ಬರುತ್ತಿದ್ದಂತೆ ಕೂಡಲೇ ಮಹಾಂತೇಶ್ ಹಾಗೂ ಮಂಜುನಾಥ್ ಮೇಲೆದ್ದಿದ್ದಾರೆ. ಇವರಲ್ಲಿ ಒಬ್ಬನು ಸ್ವಾಮೀಜಿಯವರ ಆಶೀರ್ವಾದ ಪಡೆಯುವವನಂತೆ ಅವರ ಪಾದಕ್ಕೆರಗಿದ್ದಾನೆ. ಮತ್ತೊಬ್ಬ ಅವರ ಪಕ್ಕದಲ್ಲೇ ನಿಂತಿದ್ದ, ಪಾದಕ್ಕೆರಗಿದವನಿಗೆ ಆಶೀರ್ವದಿಸಲು ಗುರೂಜಿ ಕುರ್ಚಿಯಿಂದ ಬಾಗಲು ಮುಂದಾಗುತ್ತಿದ್ದಂತೆಯೇ ನಿಂತಿದ್ದವನು ಅವರ ಎದೆಗೆ ಚೂರಿಯಿಂದ ಇರಿದಿದ್ದಾನೆ. ಏಕಾಏಕಿ ನಡೆದ ಈ ದಾಳಿಯಿಂದ ಬೆಚ್ಚಿದ ಗುರೂಜಿಯವರು ಮೇಲೆದ್ದು, ತಮ್ಮ ಮೇಲಿನ ದಾಳಿಯಿಂದ ಪಾರಾಗಲು ಯತ್ನಿಸುತ್ತಿದ್ದಂತೆ ಇಬ್ಬರೂ ಚೂರಿಯಿಂದ ಗುರೂಜಿಯ ಎದೆ, ಬೆನ್ನು, ಹೊಟ್ಟೆ... ಹೀಗೆ ದೇಹದ ವಿವಿಧೆಡೆ ಇರಿದಿದ್ದಾರೆ. ಅಷ್ಟರಲ್ಲಿ ಗುರೂಜಿ ಕೆಳಗುರುಳಿ ಒದ್ದಾಡಿದರೂ ಬಿಡದೆ ಮತ್ತೆ ಹಲವೆಡೆ ಇರಿದು ಕೊನೆಗೆ ಕತ್ತು ಕೊಯ್ದಿದ್ದಾರೆ. ಇವೆಲ್ಲಾ ಕೇವಲ 40 ಸೆಕೆಂಡ್‌ನಲ್ಲಿ ಮುಗಿದು ಹೋಗಿದೆ. ಈ ಭೀಭತ್ಸ ದಾಳಿಯಿಂದ ಭಯಭೀತರಾದ ಲಾಬಿಯಲ್ಲಿದ್ದ ಹೋಟೆಲ್ ಸಿಬ್ಬಂದಿ ದಿಕ್ಕಾಪಾಲಾಗಿ ಓಡಿದ್ದಾರೆ. ಅದರಲ್ಲಿ ಮಹಿಳಾ ಸಿಬ್ಬಂದಿಯೊಬ್ಬರು ಚೀರಿಕೊಂಡು ಒಂದೆಡೆ ಓಡಿ ಹೋಗುತ್ತಾರೆ. ಕೆಲ ಪುರುಷ ಸಿಬ್ಬಂದಿ ಗುರೂಜಿ ಮೇಲಿನ ದಾಳಿಯನ್ನು ತಡೆಯುವ ಯತ್ನವನ್ನು ಮಾಡಿದ್ದಾರೆ. ಆದರೆ ಅವರಿಗೂ ಚಾಕು ತೋರಿಸಿ ಈ ಇಬ್ಬರು ಬೆದರಿಕೆ ಹಾಕುವುದರಿಂದ ಅವರು ಹೆದರಿ ಹಿಂದೆ ಸರಿದಿದ್ದಾರೆ. ಕೊನೆಗೆ ಈ ಇಬ್ಬರು ಹಂತಕರು ಹೋಟೆಲ್‌ನ ಹೊರಗೆ ಓಡಿ ಹೋಗಿ, ಅಲ್ಲೇ ನಿಂತಿದ್ದ ಕಾರಿನಲ್ಲಿ ಪರಾರಿಯಾಗಿದ್ದಾರೆ. ಕೂಡಲೇ ಹೋಟೆಲ್ ಸಿಬ್ಬಂದಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಗುರೂಜಿಯನ್ನು ಕಿಮ್ಸ್ ಆಸ್ಪತ್ರೆಗೆ ಸಾಗಿಸಿದ್ದಾರೆ. ಅಷ್ಟರಲ್ಲಿ ವಿದ್ಯಾನಗರ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಂತೆ ಸ್ಥಳಕ್ಕೆ ಬಂದ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಹಂತಕರ ಸೆರೆಗೆ ನಾಕಾಬಂದಿ ವಿಧಿಸಿ ಕಾರ್ಯಾಚರಣೆಗಿಳಿದಿದ್ದಾರೆ. ಇದೇ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತ ಲಾಬೂ ರಾಂ, ಡಿಸಿಪಿಗಳು ಹೋಟೆಲ್‌ನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಆಧರಿಸಿ 5 ತಂಡಗಳನ್ನು ರಚಿಸುವುದರೊಂದಿಗೆ ಹಂತಕರ ಸೆರೆಗೆ ತ್ವರಿತ ಕ್ರಮ ಕೈಗೊಂಡರು. ಮುಂಬೈನ ತಮ್ಮ ಸರಳ ವಾಸ್ತು ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಣ್ಣನ ಮಗ ನಿಧನ ಹೊಂದಿದ್ದು, ಆತನ ಅಂತಿಮ ದರ್ಶನಕ್ಕೆ ಗುರೂಜಿ ಹುಬ್ಬಳ್ಳಿಗೆ ಬಂದಿದ್ದರು.

ಅಪಾರ ಆಸ್ತಿಯೇ ಆಪತ್ತಾಯ್ತಾ...

ಹಾಗೂ ಆತನ ಪತ್ನಿ ವನಜಾಕ್ಷಿ ಗುರೂಜಿಯ ಸರಳ ವಾಸ್ತು ಕಚೇರಿಯಲ್ಲಿ ಕೆಲಸಕ್ಕಿದ್ದರು. ಈ ವೇಳೆ ವನಜಾಕ್ಷಿ ಗುರೂಜಿಗೆ ಬಹಳ ನಂಬಿಕಸ್ಥಳಾಗಿದ್ದು, ಅವಳ ಹೆಸರಿನಲ್ಲಿ ಹುಬ್ಬಳ್ಳಿಯಲ್ಲಿ ಒಂದು ಐಷಾರಾಮಿ ಫ್ಲ್ಯಾಟ್ ಅಲ್ಲದೆ ಇನ್ನಿತರ ಆಸ್ತಿ ಖರೀದಿಸಿದ್ದರೆನ್ನಲಾಗಿದೆ. ಆದರೆ ವನಜಾಕ್ಷಿ 2019ರಲ್ಲಿ ಕೆಲಸ ಬಿಟ್ಟಿದ್ದಾಳೆ. ಆನಂತರ ಆಕೆ ಹೆಸರಲ್ಲಿದ್ದ ಫ್ಲ್ಯಾಟ್ ಹಾಗೂ ಇನ್ನಿತರ ಆಸ್ತಿಯನ್ನು ತಮ್ಮ ವಶಕ್ಕೆ ಪಡೆಯಲು ಗುರೂಜಿ, ಆಕೆ ಮೇಲೆ ಒತ್ತಡ ತಂದಿದ್ದರೆಂದು ಹೇಳಲಾಗಿದೆ. ಈ ವಿಚಾರವಾಗಿ ಗುರೂಜಿ ಮತ್ತು ಮಹಾಂತೇಶ್ ಶಿರೂರ್ ನಡುವೆ ಮನಸ್ತಾಪ ಉಂಟಾಗಿತ್ತೆಂದು ಸುದ್ದಿವಾಹಿನಿಗಳಲ್ಲಿ ವರದಿ ಆಗಿದೆ.

ಈ ಆಸ್ತಿ, ಹಣದ ವಿಚಾರವೇ ಅವರ ಜೀವಕ್ಕೆ ಕುತ್ತು ತಂದಿದೆ ಎಂದು ಹಲವಾರು ಅಭಿಪ್ರಾಯಪಡುತ್ತಿದ್ದಾರೆ. ಪೊಲೀಸರೂ ಸಹ ಆ ನಿಟ್ಟಿನಲ್ಲೇ ತನಿಖೆ ನಡೆಸುತ್ತಿದ್ದಾರೆ.

ಅಲ್ಲದೇ ಮಹಾಂತೇಶ್ ಪತ್ನಿ ವನಜಾಕ್ಷಿಯನ್ನು ವಶಕ್ಕೆ ಪಡೆದು, ಪೊಲೀಸರು ನಾಲ್ಕು ಗಂಟೆಗಳ ಕಾಲ ತನಿಖೆ ನಡೆಸಿ, ಬಿಟ್ಟು ಕಳಿಸಿದ್ದಾರೆ.

40 ಸೆಕೆಂಡ್‌ನಲ್ಲಿ ಹತ್ಯೆ: 4 ಗಂಟೆಯಲ್ಲಿ ಅಂದರ್!

ಬಂದ ಪೊಲೀಸರು, ಹೋಟೆಲ್ ಸಿಬ್ಬಂದಿಯಿಂದ ಮಾಹಿತಿ ಹಾಗೂ ಸಿಸಿ ಟಿವಿ ಕ್ಯಾಮರಾ ದೃಶ್ಯಗಳ ಆಧರಿಸಿ ಕೂಡಲೇ ಹುಬ್ಬಳ್ಳಿಯಲ್ಲಿ ನಾಕಾಬಂದಿ ವಿಧಿಸಿದ್ದಲ್ಲದೆ, ನೆರೆ ಜಿಲ್ಲೆಗಳ ಪೊಲೀಸರಿಗೆ ಮಾಹಿತಿ ರವಾನಿಸಿದ್ದರು. ಅಲ್ಲದೇ 5 ತಂಡಗಳನ್ನು ರಚಿಸಿ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆಗಿಳಿದರು. ಗುರೂಜಿ ಹತ್ಯೆ ನಂತರ ಹಂತಕರು ತಮ್ಮ ಮೊಬೈಲ್‌ಗಳನ್ನು ಚಾಲನೆಯಲ್ಲಿಟ್ಟಿದ್ದರಿಂದ ಪೊಲೀಸರು ಅವರ ಸುಳಿವಿನ ಜಾಡು ಹಿಡಿಯಲು ಸಹಾಯಕವಾಯಿತು. ಹತ್ಯೆ ನಡೆಸಿದ ನಂತರ ಹಂತಕರು ತಾವು ಧರಿಸಿದ್ದ ಬಟ್ಟೆ ಬದಲಿಸಿ, ಕಾರಿನಲ್ಲಿ ಬೆಳಗಾವಿ ಮೂಲಕ ಮುಂಬೈಗೆ ಪರಾರಿಯಾಗಲು ಯತ್ನಿಸಿದ್ದರು. ಮೊಬೈಲ್ ಜಾಡನ್ನು ಹಿಡಿದು ಬೆನ್ನತ್ತಿದ ಪೊಲೀಸರು, ಕೊನೆಗೆ ಹಂತಕರು ರಾಮದುರ್ಗದ ಬಳಿ ಹೋಗುತ್ತಿರುವ ಮಾಹಿತಿ ಪಡೆದಿದ್ದಾರೆ. ತಕ್ಷಣ ಬೆಳಗಾವಿ ಪೊಲೀಸರಿಗೆ ವಿಷಯ ತಿಳಿಸಿ, ತಾವೂ ಹಿಂಬಾಲಿಸಿದ್ದಾರೆ. ಹುಬ್ಬಳ್ಳಿ ಪೊಲೀಸರ ಮಾಹಿತಿಯಂತೆ ರಾಮದುರ್ಗ ಪೊಲೀಸರು, ಹೆದ್ದಾರಿಯಲ್ಲಿ ಅಡ್ಡಲಾಗಿ ಜೆಸಿಬಿ ವಾಹನವನ್ನು ನಿಲ್ಲಿಸಿಕೊಂಡು ಕಾದಿದ್ದರು. ನಿರೀಕ್ಷೆಯಂತೆ ಕಾರಿನಲ್ಲಿ ಬಂದ ಹಂತಕರನ್ನು ರಾಮದುರ್ಗ ಡಿವೈಎಸ್ಪಿ ಪಿಸ್ತೂಲು ತೋರಿಸಿ, ಸಿನಿಮೀಯ ರೀತಿ ಎಚ್ಚರಿಕೆ ನೀಡಿ ಶರಣಾಗುವಂತೆ ಮಾಡಿ, ಕೊನೆಗೆ ಹಂತಕರನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ಕರ್ನಾಟಕದ ಮನೆಮಾತಾಗಿದ್ದ ಗುರೂಜಿ

ಹುಬ್ಬಳ್ಳಿ, ಜು.5–ಸರಳ ವಾಸ್ತು ಮೂಲಕ ಚಂದ್ರಶೇಖರ ಗುರೂಜಿ ರಾಜ್ಯ, ರಾಷ್ಟ್ರ ಅಲ್ಲದೇ ವಿದೇಶದಲ್ಲೂ ಹೆಸರುವಾಸಿಯಾಗಿದ್ದರು. ಸರಳ ವಾಸ್ತು ಹೆಸರಿನಲ್ಲಿ ಟಿವಿ ಕಾರ್ಯಕ್ರಮ ನಡೆಸುವ ಮೂಲಕ ಕರ್ನಾಟಕದಲ್ಲಿ ಮನೆಮಾತಾಗಿದ್ದರು. ಮಾತ್ರವಲ್ಲ, ಈ ಬಗ್ಗೆ ಹಲವು ಪುಸ್ತಕಗಳನ್ನು ಬರೆದಿದ್ದರು. ಈವರೆಗೆ 2 ಸಾವಿರಕ್ಕೂ ಅಧಿಕ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಂಡಿರುವ ಗುರೂಜಿ, ದೇಶ–ವಿದೇಶದ 16 ಪ್ರಶಸ್ತಿಗಳನ್ನು ಪಡೆದಿದ್ದರು. ಮೂಲತಃ ಸಿವಿಲ್ ಇಂಜಿನಿಯರಿಂಗ್ ವ್ಯಾಸಂಗ ಮಾಡಿದ್ದ ಇವರು, ಕಾಸ್ಮಿಕ್ ಆರ್ಕಿಟೆಕ್ಚರ್‌ನಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದರು. ಚಂದ್ರಶೇಖರ ಗುರೂಜಿ ಬಾಗಲಕೋಟೆ ನಗರದ ಮೋಟಗಿ ಗಲ್ಲಿಯ ವಿರೂಪಾಕ್ಷಪ್ಪ ಅಂಗಡಿ ನೀಲವ್ವ ಅಂಗಡಿ ದಂಪತಿಯ ಪುತ್ರ. ಮೂರೂವರೆ ದಶಕದ ಹಿಂದೆ ಮುಂಬೈಗೆ ತೆರಳಿ ಅಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಗುರೂಜಿ ಅವರ ಮೊದಲ ಪತ್ನಿ ನಿಧನರಾಗಿದ್ದು, ಅವರಿಗೆ ಒಬ್ಬಳು ಮಗಳಿದ್ದಾಳೆ. ನಂತರ ಎರಡನೇ ವಿವಾಹವಾಗಿದ್ದು, ಅವರಿಗೆ ಮಕ್ಕಳಿಲ್ಲ. ಇಂದು ಗುರೂಜಿ ಅವರ ದೇಹವನ್ನು ಇರಿಸಲಾಗಿರುವ ಕಿಮ್ಸ್ ಆಸ್ಪತ್ರೆಯ ಶವಾಗಾರದ ಮುಂದೆ ಅವರ ಎರಡನೇ ಪತ್ನಿ ರೋಧಿಸುತ್ತಿದ್ದ ದೃಶ್ಯ ಕಂಡು ಬಂತು.

ದಸರಾ ಉನ್ನತ ಸಮಿತಿ ಸಭೆ

ಧೈರ್ಯ ತುಂಬಿ, ನೀವು ಏನೂ ಮಾಡಿಲ್ಲ ಎಂದ ಮೇಲೆ ದಾಳಿಗೆಲ್ಲಾ ಏಕೆ ಹೆದುರುತ್ತೀರಿ ಎಂದು ಹೇಳಬೇಕಿತ್ತು. ಅದನ್ನು ಬಿಟ್ಟು ಪ್ರತಿಭಟನೆ ಮಾಡುತ್ತಿರುವುದೇಕೆ ಎಂದು ಅವರು ಪ್ರಶ್ನಿಸಿದರು.

ಕೊನೆಯ ಅವತಾರ: ಸಿದ್ದರಾಮೋತ್ಸವ ಆಚರಣೆ ಮಾಡಿಕೊಳ್ಳುತ್ತಿರುವುದು ಸಿದ್ದರಾಮಯ್ಯ ಅವರ ಕೊನೆಯ ಅವತಾರ ಎಂದು ವ್ಯಂಗ್ಯವಾಡಿದ ಸಚಿವ ಸೋಮಶೇಖರ್, ಸಿಎಂ ಆಗಿ ಸರಿಯಾಗಿ ಕೆಲಸ ಮಾಡಿದ್ದರೆ 35 ಸಾವಿರ ಮತಗಳಿಂದ ಸೋಲುತ್ತಿರಲಿಲ್ಲ. ಅಂತಹ ವೈಫಲ್ಯ ಮರೆಮಾಚಲು ಈಗ ಸಿದ್ದರಾಮೋತ್ಸವ ಆಚರಿಸುತ್ತಿದ್ದು, ಇದು ಸಿದ್ದರಾಮಯ್ಯನವರ ವೈಭವೀಕರಣ ಅಷ್ಟೇ. ಜನ್ಮದಿನವನ್ನು ಕಾಂಗ್ರೆಸ್ ಹೆಸರಲ್ಲೇ ಮಾಡಬಹುದಿತ್ತಲ್ಲಾ ಎಂದು ಪ್ರಶ್ನಿಸಿದರು.

ಇರಿದು ಕಾರಿನೊಂದಿಗೆ ಪರಾರಿ

ತನಿಖೆ ಆರಂಭಿಸಿದ್ದಾರೆ. ಮೈಸೂರಿನ ಎನ್‌ಆರ್ ಠಾಣೆ ಪೊಲೀಸರ ನೆರವಿನೊಂದಿಗೆ ದುಷ್ಕರ್ಮಿಗಳು ಕಾರು ಹತ್ತಿದ ಸ್ಥಳದ ಆಸುಪಾಸಿನಲ್ಲಿರುವ ಸಿಸಿಟಿವಿ ಕ್ಯಾಮರಾ ಫುಟೇಜ್ ಪಡೆದಿದ್ದಾರೆ. ಕಾರಿಗೆ ಡೀಸೆಲ್ ತುಂಬಿಸಿದ ಜಾಗ, ಕೆಸ್ತೂರು ಮಾರ್ಗದಲ್ಲಿರುವ ಸಿಸಿಟಿವಿ ಕ್ಯಾಮರಾಗಳ ಫುಟೇಜ್‌ಗಳನ್ನೂ ಪರಿಶೀಲಿಸಿದ್ದು, ಆರೋಪಿಗಳ ಬಂಧನಕ್ಕೆ ತೀವ್ರ ಶೋಧ ನಡೆಸುತ್ತಿದ್ದಾರೆ. ಗಾಯಗೊಂಡಿರುವ ಚಾಲಕ ರುದ್ರಸ್ವಾಮಿ ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆತಂದು ದಾಖಲು ಮಾಡಲಾಗಿದ್ದು, ಇಂದು ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಅವರ ಸಂಬಂಧಿಕರೊಬ್ಬರು ತಿಳಿಸಿದ್ದಾರೆ.

ಸುರಕ್ಷಿತ ಕ್ಷೇತ್ರ ತಲಾಷೆ!

ಈ ಹಿನ್ನೆಲೆಯಲ್ಲೇ ಜಿಲ್ಲೆಯ ಪ್ರಮುಖ ಮುಖಂಡರ ಜೊತೆ ಸಮಾಲೋಚನೆ ನಡೆಸಿದ್ದಾರೆ. ಕೋಲಾರದಲ್ಲಿ ಕಣಕ್ಕಿಳಿದರೆ, ತಮ್ಮ ಸಮುದಾಯದ ಹೆಚ್ಚು ಮತಗಳು ಜೊತೆಗೆ ಅಲ್ಪಸಂಖ್ಯಾತರ ಮತಗಳು ಲಭ್ಯವಾಗ ಬಹುದು. ಮಾಜಿ ಸಚಿವ ಸೀತಾರಾಮ್ ಅವರನ್ನು ಪಕ್ಷದಲ್ಲೇ ಉಳಿಸಿಕೊಂಡರೆ ಸಾಕಷ್ಟು ಸಂಖ್ಯೆಯಲ್ಲಿರುವ ಬಲಿಜ ಮತಗಳು ತಮಗೆ ದೊರೆಯಬಹುದೆಂಬ ಲೆಕ್ಕಾಚಾರವೂ ಇದೆ. ಸಿದ್ದರಾಮಯ್ಯ ಯಾವುದೇ ಕ್ಷೇತ್ರದಲ್ಲಿ ನಿಂತರೂ ಅವರನ್ನು ಪರಾಭವಗೊಳಿಸಬೇಕೆಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಈಗಿನಿಂದಲೇ ಲೆಕ್ಕಾಚಾರ ಹಾಕಿದ್ದಾರೆ. ಕೋಲಾರದಲ್ಲಿ ನಿಂತರೆ ಜೆಡಿಎಸ್‌ನ ಸಿಎಂ ಇಬ್ರಾಹಿಂ ಅವರನ್ನು, ಬಿಜೆಪಿ ಕುರುಬ ಸಮುದಾಯಕ್ಕೆ ಸೇರಿದ ವರ್ತೂರ್ ಪ್ರಕಾಶ್ ಅವರನ್ನು ಕಣಕ್ಕಿಳಿಸಲು ಮುಂದಾಗಿದೆ. ಇನ್ನು ಚಿಕ್ಕನಾಯಕನಹಳ್ಳಿಯಲ್ಲಿ ತಮ್ಮ ಸಮುದಾಯದ ಮತಗಳು ಹೆಚ್ಚಿವೆ. ಅಲ್ಲಿ ಅದೇ ಸಮುದಾಯಕ್ಕೆ ಸೇರಿದ ಸುರೇಶ್ ಬಾಬು ಅವರನ್ನು ಜೆಡಿಎಸ್ ಕಣಕ್ಕಿಳಿಸಲಿದೆ.

ಸುರೇಶ್ ಬಾಬು ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಸಿದ್ದರಾಮಯ್ಯ ನಡೆಸಿದ ಯತ್ನ ಫಲಪ್ರದವಾಗಿಲ್ಲ. ಇನ್ನು ಹೆಬ್ಬಾಳ, ತಮ್ಮ ಸಮುದಾಯದ ಮತಗಳು ನಿರ್ಣಾಯಕವಾದರೂ, ಬಿಜೆಪಿ ಹಿತದಲ್ಲಿದೆ. ಇನ್ನು ಚಾಮರಾಜಪೇಟೆಯಲ್ಲಿ ಕಣಕ್ಕಿಳಿದರೆ, ಗೆಲುವು ನಿಶ್ಚಿತ. ಆದರೆ ಅಲ್ಪಸಂಖ್ಯಾತರ ಕ್ಷೇತ್ರವನ್ನು ಕಸಿದುಕೊಂಡರು ಎಂಬ ಆರೋಪ ಹೊರಬೇಕಾಗುತ್ತದೆ. ಈ ಮಧ್ಯೆ ಆ ಕ್ಷೇತ್ರದಲ್ಲಿ ಈದ್ಗಾ ಮೈದಾನದ ವಿವಾದ ಆರಂಭವಾಗಿದೆ. ಇನ್ನು ಜಮೀರ್ ಅವರಿಗೆ ಕೇಂದ್ರದ ತನಿಖಾ ತಂಡಗಳು ಬೆನ್ನು ಬಿದ್ದಿವೆ. ಸುರಕ್ಷಿತ ಕ್ಷೇತ್ರದ ಬಗ್ಗೆ ತಲೆಕೆಡಿಸಿಕೊಂಡಿರುವ ಸಿದ್ದರಾಮಯ್ಯ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೇ ಕಣಕ್ಕಿಳಿಯುವ ಬಗ್ಗೆ ಆ ಮುಖಂಡರ ಜೊತೆ ಎರಡು ದಿನದಿಂದ ಸರಣಿ ಸಭೆಗಳನ್ನು ನಡೆಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ತರುತ್ತೇನೆ ಎನ್ನುವ ಸಿದ್ದರಾಮಯ್ಯನವರಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸುರಕ್ಷಿತ ಕ್ಷೇತ್ರವಿಲ್ಲದೆ, ಇನ್ನು ಹುಡುಕಾಟ ನಡೆಸುತ್ತಿದ್ದಾರೆ.

ಅಗ್ನಿಪಥ್ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ



ಮೈಸೂರು. ಜು.5(ಎಂಟಿವೈ)– ಕೇಂದ್ರ ಸರ್ಕಾರ ರಕ್ಷಣಾ ನೇಮಕಾತಿ ವಿಷಯದಲ್ಲಿ ಜಾರಿಗೆ ತಂದಿರುವ 'ಅಗ್ನಿಪಥ್' ಯೋಜನೆಯನ್ನು ವಿರೋಧಿಸಿ ಮೈಸೂರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿವಿಧಾನಸೌಧದ ಮುಂದೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ಅವೈಜ್ಞಾನಿಕ ನಿಲುವಿನಿಂದಾಗಿ ಭಾರತೀಯ ಸೇನೆ ದುರ್ಬಲವಾಗುವ ಆತಂಕವಿದೆ. ಸೇನಾ ನೇಮಕಾತಿ ಪ್ರಕ್ರಿಯೆಯಲ್ಲಿ ಈ ಹಿಂದೆ ಪ್ರದರ್ಶಿಸುತ್ತಿದ್ದ ದಿಟ್ಟ ಕ್ರಮ ಬದಲಿಸಿ, ಅಗ್ನಿಪಥ್ ಯೋಜನೆ ಜಾರಿಗೊಳಿಸುವ ಮೂಲಕ ಸೇನೆಯನ್ನು ದುರ್ಬಲಗೊಳಿಸುವುದರೊಂದಿಗೆ ನಿರುದ್ಯೋಗ ಸಮಸ್ಯೆ ಹೆಚ್ಚಾಗುವಂತೆ ಮಾಡುತ್ತಿದೆ ಎಂದು ಪ್ರತಿಭಟನಾನಿರತರು ಕಿಡಿಕಾರಿದರು.

ಇದೇ ವೇಳೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅಗ್ನಿಪಥ್ ಯೋಜನೆಯನ್ನು ಜಾರಿಗೆ ತಂದು ಯುವ ಜನರನ್ನು ದಾರಿ ತಪ್ಪಿಸುತ್ತಿದೆ. ಈ ಯೋಜನೆ ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿದೆ. ಕೇವಲ ನಾಲ್ಕು ವರ್ಷಗಳಿಗೆ ಒಪ್ಪಂದದಂತೆ ಸೈನಿಕರನ್ನು ನೇಮಿಸಿಕೊಂಡು ವೃತ್ತಿಪರ ಸಶಸ್ತ್ರ ಪಡೆ ಕಟ್ಟಲು ಸಾಧ್ಯವಿಲ್ಲ. ಸಶಸ್ತ್ರ ಪಡೆಗಳ ವೃತ್ತಿಪರತೆ, ನೈತಿಕತೆ ಮತ್ತು ಹೋರಾಟದ ಮನೋಭಾವವನ್ನು ಇದು ದುರ್ಬಲಗೊಳಿಸುತ್ತದೆ. ಇದರಿಂದ ಸೈನ್ಯದ ಗುಣಮಟ್ಟ ಮತ್ತು ದಕ್ಷತೆ ಕುಸಿಯುತ್ತದೆ. 4 ವರ್ಷ ಸೈನ್ಯದಲ್ಲಿ ಸೇವೆ ಸಲ್ಲಿಸಿದ ನಂತರ ಮುಂದೆ ಅವರ ಜೀವನದ ಪಾಡೇನು? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿರುದ್ಯೋಗಿ ಯುವಜನರು ಬಜ್ಜಿ, ಬೋಂಡ ಮಾರಿಕೊಂಡು ಜೀವನ ಸಾಗಿಸಬೇಕೇ? ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುನ್ನ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆಯಂತೆ ಉದ್ಯೋಗ ಸೃಷ್ಟಿಸದೆ ಸುಳ್ಳು ಆಶ್ವಾಸನೆ ಮೂಲಕ ನರೇಂದ್ರ ಮೋದಿ ಯುವಕರನ್ನು ದಾರಿ ತಪ್ಪಿಸುತ್ತಿದ್ದಾರೆ. ಯುವ ಜನತೆ ಈಗಲಾದರೂ ಎಚ್ಚೆತ್ತುಕೊಂಡು ಬಿಜೆಪಿ ಪಕ್ಷಕ್ಕೆ ತಕ್ಕಪಾಠ ಕಲಿಸಬೇಕು. ಈ ಕೂಡಲೇ ಅಗ್ನಿಪಥ್ ಯೋಜನೆಯನ್ನು ರದ್ದುಪಡಿಸಿ ಹಳೆಯ ವ್ಯವಸ್ಥೆಯಲ್ಲಿಯೇ ಸೈನಿಕರ ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಮೇಯರ್ ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ತಾಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಸಿಂಡಿಕೇಟ್ ಮಾಜಿ ಸದಸ್ಯ ಮಾರ್ಬಳ್ಳಿ ಕುಮಾರ ಮಾತನಾಡಿದರು.

ಪ್ರತಿಭಟನೆಯಲ್ಲಿ ಜಿ.ಪಂ. ಮಾಜಿ ಸದಸ್ಯರಾದ ನಾರಾಯಣ ಮಹಾದೇವ, ಅರುಣ್‌ಕುಮಾರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದೂರ ನಾಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಡಿ. ಗುರುಸ್ವಾಮಿ, ಜೆ. ಸತೀಶ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಒಬಿಸಿ ಉಪಾಧ್ಯಕ್ಷ ಉದಯ್, ಗ್ರಾಪಂ. ಮಾಜಿ ಅಧ್ಯಕ್ಷ ಕೇರ್ಗಳ್ಳಿ ಬಸವೇಗೌಡ, ನಾಗರತ್ನ, ಸಿದ್ದೇಗೌಡ, ನಾಡನಹಳ್ಳಿ ರವಿ, ತಾ.ಪಂ. ಮಾಜಿ ಸದಸ್ಯ ಕೆಂಚಪ್ಪ, ಮುಖಂಡರಾದ ನಜರ್‌ಬಾದ್ ನಟರಾಜು, ಹರೀಶ್ ಮೊಗಣ್ಣ, ಹಂಚ್ಯ ಸಣ್ಣಸ್ವಾಮಿ, ಕೃಷ್ಣಕುಮಾರ್‌ಸಾಗರ್, ಆಲನಹಳ್ಳಿ ಪುಟ್ಟಸ್ವಾಮಿ, ನಾಗರಾಜ್‌ನಾರಾಯಣ್, ಬಸವರಾಜ್, ರಾಯನಹುಂಡಿ ರವಿ, ನುಗ್ಗಳ್ಳಿ ಮಹದೇವ, ಇಲವಾಲ ಸುರೇಶ್, ಮಹೇಶ್, ಶೆಟ್ಟಳ್ಳಿ ಶಿವರಾಜ್, ಶಂಕರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಶಾಸಕ ಜಮೀರ್ ಅಹ್ಮದ್ ಮನೆ ಮೇಲೆ ಎಸಿಬಿ ದಾಳಿ ಖಂಡಿಸಿ ಬೆಂಬಲಿಗರ ಪ್ರತಿಭಟನೆ



ಮೈಸೂರು,ಜು.5(ಎಂಟಿವೈ)– ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಜಮೀರ್ ಅಹಮದ್ ಖಾನ್ ಅವರ ಮನೆ ಹಾಗೂ ಟ್ರಾವೆಲ್ ಕಚೇರಿ ಮೇಲೆ ನಡೆದಿರುವ ಎಸಿಬಿ ದಾಳಿ ಖಂಡಿಸಿ, ಮೈಸೂರಲ್ಲಿ ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ಮೈಸೂರಿನ ನ್ಯಾಯಾಲಯದ ಮುಂಭಾಗವಿರುವ ಮಹಾತ್ಮಗಾಂಧಿ ಪುತ್ಥಳಿ ಬಳಿ ಮಂಗಳವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರ ವಿರೋಧ ಪಕ್ಷವನ್ನು ಹತ್ತಿಕ್ಕಲು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ದಾಳಿ ನಡೆಸುವ ಮೂಲಕ ವಿರೋಧ ಪಕ್ಷಗಳ ಪ್ರಮುಖ ನಾಯಕರನ್ನು ಮಣಿಸಲು ಪ್ರಯತ್ನ ಮಾಡುತ್ತಿದೆ. ಇದರ ಅಂಗವಾಗಿ ಶಾಸಕ ಜಮೀರ್ ಅಹ್ಮದ್ ನಿವಾಸದ ಮೇಲೆ ಹಾಗೂ ಅವರ ಟ್ರಾವೆಲ್ಸ್ ಕಚೇರಿ ಮೇಲೆ ಎಸಿಬಿ ಮೂಲಕ ದಾಳಿ ನಡೆಸಲಾಗಿದೆ. ಈ ಹಿಂದೆ ಆದಾಯ ತೆರಿಗೆ ಇಲಾಖೆ, ಇಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಈಗ ಎಸಿಬಿಯಿಂದ ದಾಳಿ ಮಾಡಿಸಿ, ಅವರನ್ನು ಕುಗ್ಗಿಸುವ ಸಂಚು ನಡೆಸಲಾಗಿದೆ. ಕೂಡಲೇ ಬಿಜೆಪಿ ಸರ್ಕಾರ ದ್ವೇಷದ ರಾಜಕಾರಣ ಕೈ ಬಿಡಬೇಕು. ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅಲ್ಪಸಂಖ್ಯಾತರೇ ಟಾರ್ಗೆಟ್: ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, ಶಾಸಕ ಜಮೀರ್ ಅಹಮದ್ ಖಾನ್ ಮನೆ ಮೇಲೆ ನಡೆದಿರುವ ದಾಳಿ ಖಂಡನೀಯ. ಅದು ಕೇವಲ ಓರ್ವ ಶಾಸಕನ ಮನೆ ನಡೆದಿರುವ ದಾಳಿಯಲ್ಲ. ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆದಿರುವ ದಾಳಿ. ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನಾಯಕರನ್ನೇ ಗುರಿಯಾಗಿಸಿ ದಾಳಿ ನಡೆಸುತ್ತಿದೆ. ಸರ್ಕಾರ ಎಸಿಬಿಯನ್ನು ಕೈಗೊಂಬೆಯಾಗಿ ಮಾಡಿಕೊಂಡು ರಾಜ್ಯದ ಕಾಂಗ್ರೆಸ್ ಶಾಸಕರನ್ನು ಹಣಿಯಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ವಕ್ಫ್ ಮಂಡಳಿ ಅಧ್ಯಕ್ಷ ಗ್ಯಾಸ್ ಅಹಮದ್ ಅಕ್ರಂ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ ಬ್ರಾಡ್ ವೇ ಕಿರಣ್, ಅಲ್ಪಸಂಖ್ಯಾತರ ಮುಖಂಡ ಕೈಸರ್ ಅಹಮದ್, ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಅಧ್ಯಕ್ಷ ಹಿನಕಲ್ ಪ್ರಕಾಶ್, ಪಾಲಿಕೆ ಸದಸ್ಯ ಅಯಾಜ್ ಪಂಡು, ಸುನೀಲ್, ಮುಖಂಡರಾದ ಪವನ್, ಸಿದ್ದರಾಮ, ಮಾಜಿ ಸದಸ್ಯ ಎಂ.ಸಿ.ಚಿಕ್ಕಣ್ಣ, ಲೋಕೇಶ್ ಮಾದಾಪುರ, ಚಂದ್ರು ಶಿವಣ್ಣ, ಮೈಸೂರು ಬಸವಣ್ಣ, ಮೇಟಗಳ್ಳಿ ಸೈಯದ್ ಹಮೀದ್, ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪರಿಷ್ಕೃತ ಪಠ್ಯರದ್ದಿಗೆ ಆಗ್ರಹಿಸಿ ಮೈಸೂರಲ್ಲಿ ದಸಂಸ ಪ್ರತಿಭಟನೆ



ಮೈಸೂರು,ಜು.5(ಎಂಟಿವೈ)– ದುರುದ್ದೇಶಪೂರ್ವಕವಾಗಿ ಮಹನೀಯರ ವಿಚಾರಧಾರೆಗಳನ್ನು ಕೈಬಿಟ್ಟು ಪರಿಷ್ಕರಣೆ ಮಾಡಿರುವ ಪಠ್ಯಕ್ರಮವನ್ನು ರದ್ದು ಮಾಡಿ, ಹಳೆಯ ಪಠ್ಯಕ್ರಮವನ್ನೇ ಮುಂದುವರೆಸುವಂತೆ ಆಗ್ರಹಿಸಿ ದಸಂಸ(ಡಾ.ಡಿ.ಜಿ.ಸಾಗರ್ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದ ದಸಂಸ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯ ಪರಿಷ್ಕರಣೆ ಮಾಡಿದ ಪಠ್ಯಗಳನ್ನು ರದ್ದುಪಡಿಸಬೇಕು ಹಾಗೂ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪಠ್ಯಪುಸ್ತಕಗಳನ್ನೇ ಮುಂದುವರೆಸಬೇಕು. ಭಾರತ ಮತ್ತು ಕರ್ನಾಟಕ ಕಟ್ಟಲು ಶ್ರಮಿಸಿದ ಅನೇಕ ಮಹಾನೀಯರ ವಿಷಯಗಳನ್ನು ತಪ್ಪಾಗಿ ಮಾಹಿತಿ ನೀಡಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್, ಬಸವಣ್ಣ, ಕುವೆಂಪು, ಗೌತಮ ಬುದ್ಧ, ನಾರಾಯಣಗುರು, ಸುರಪುರದ ರಾಜಾವೆಂಕಟಪ್ಪ ನಾಯಕ ಹಾಗೂ ಸಮಾಜ ಸುಧಾರಕರು, ಸಾಹಿತಿಗಳು ಸೇರಿದಂತೆ ಅನೇಕರಿಗೆ ಅವಮಾನಿಸಲಾಗಿದೆ ಎಂದು ಕಿಡಿಕಾರಿದರು.

ಪಠ್ಯಕ್ರಮದಲ್ಲಿ ಆಗಿರುವ ಪ್ರಮಾದಕ್ಕೆ ನೈತಿಕ ಹೊಣೆ ಹೊತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ದಸಂಸ (ಡಾ.ಡಿ.ಜಿ.ಸಾಗರ್ ಬಣ) ಜಿಲ್ಲಾ ಸಂಚಾಲಕರಾದ ಮಲ್ಲೇಶ್ ಚುಂಚನಹಳ್ಳಿ, ರಾಜಣ್ಣ ಇಟ್ನಾ, ಹನುಮಂತು ಬೆಲವತ್ತ, ಸುರೇಶ್ ಯರಗನಹಳ್ಳಿ, ಕೃಷ್ಣ ಕೊಳಗಟ್ಟ, ಕಾರ್ಯಕಾರಿ ಸಮಿತಿ ಸದಸ್ಯ ಪುಟ್ಟಸ್ವಾಮಿ ದೇವರಸನಹಳ್ಳಿ, ಹಿರಿಯ ಮುಖಂಡ ಗೋವಿಂದರಾಜು, ಮಹದೇವಸ್ವಾಮಿ, ಸತೀಶ್, ರವೀಂದ್ರ, ಶಿವಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವೈದ್ಯರ ದಿನ ಆಚರಣೆ



ಮೈಸೂರು, ಜು.5(ಆರ್‌ಕೆಬಿ)– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಸವನಗೌಡಪ್ಪ, ಭಾರತರತ್ನ ಪುರಸ್ಕೃತ ಡಾ.ಬಿದನ್ ಚಂದ್ರರಾಯ್ (ಬಿ.ಸಿ.ರಾಯ್) ಅತ್ಯಂತ ಗೌರವಾನ್ವಿತ ವೈದ್ಯರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದರು. ಅವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಅವರು ಹುಟ್ಟಿದ ದಿನವಾದ ಜು.1ಅನ್ನು ಪ್ರತೀ ವರ್ಷ ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ವೈದ್ಯರೂ ಆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ನಿರ್ದೇಶಕ ಡಾ.ಕುಶಾಲಪ್ಪ, ಮಕ್ಕಳ ವಿಭಾಗದ ಪ್ರಾಧ್ಯಾಪಕ ಡಾ.ಎಂ.ಡಿ.ರವಿ, ಸ್ಥಾನಿಕ ಮನೋವೈದ್ಯಶಾಸ್ತ್ರ ವೈದ್ಯಾಧಿಕಾರಿ ಡಾ.ಶಾಂತಮಲ್ಲಪ್ಪ ಅವರನ್ನು ಆಸ್ಪತ್ರೆ ವತಿಯಿಂದ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಕರ್ನಲ್ ಡಾ.ಎಂ. ದಯಾನಂದ, ಉಪನಿರ್ದೇಶಕ ಡಾ.ಮಂಜುನಾಥ್, ಡಾ.ಶ್ಯಾಂಪ್ರಸಾದ್ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಕಲಾವಿದರ ಮಾಹಿತಿ ದತ್ತಾಂಶ ಸಂಗ್ರಹ ದಿನಾಂಕ ವಿಸ್ತರಣೆ

ಮೈಸೂರು, ಜು.5(ಎಸ್‌ಪಿಎನ್)– ರಾಜ್ಯಾದ್ಯಂತ ಕಲಾವಿದರ ಮಾಹಿತಿ ದತ್ತಾಂಶವನ್ನು ಸಂಗ್ರಹಿಸುವ ದಿನಾಂಕವನ್ನು ಜು.15ರವರೆಗೆ ವಿಸ್ತರಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ(ಆಡಳಿತ ಕನ್ನಡ)ಯ ಅಧೀನ ಕಾರ್ಯದರ್ಶಿ ಎಸ್.ಗೀತಾಬಾಯಿ ತಿಳಿಸಿದ್ದಾರೆ.

ರಂಗಾಯಣದಿಂದ ಕಲಾವಿದರ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು, ಜು.5– ರಂಗಾಯಣದ ವತಿಯಿಂದ ನಾಟಕಗಳಿಗೆ ಹಾಗೂ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ರಂಗಭೂಮಿಯಲ್ಲಿ ಅನುಭವ ಇರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಜುಲೈ 18ರೊಳಗೆ ಅರ್ಜಿಗಳನ್ನು ಸಲ್ಲಿಸಲು ಕೋರಲಾಗಿದೆ.

ಆಸಕ್ತ ಅಭ್ಯರ್ಥಿಗಳು ಜನ್ಮ ದಿನಾಂಕ ದೃಢೀಕರಣ ಪತ್ರ, ಎನ್.ಎಸ್.ಡಿ ಅಥವಾ ಡಿಪ್ಲೋಮ ಪ್ರಮಾಣ ಪತ್ರ, ರಂಗ ಶಿಕ್ಷಣ ಕೇಂದ್ರದ ಅನುಭವ ಪ್ರಮಾಣ ಪತ್ರ, ರಂಗಭೂಮಿ ಅನುಭವ ಕುರಿತ ಸ್ವ ವಿವರ ಪತ್ರ ಹಾಗೂ ಆಧಾರ್ ಕಾರ್ಡ್ ಈ ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿದ್ದು, ಜುಲೈ 20 ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನಕ್ಕೆ ಹಾಜರಾಗಲು ಕೋರಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 22 ರಿಂದ 35 ವರ್ಷ ವಯೋಮಿತಿ ಹೊಂದಿದ್ದು, ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪಡೆದಿರಬೇಕು. ಅರ್ಜಿ ನಮೂನೆಯನ್ನು www.rangayana. org ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. ಮಾಹಿತಿಗಾಗಿ ನಿರ್ದೇಶಕರು, ರಂಗಾಯಣ, ವಿನೋಬಾ ರಸ್ತೆ ಮೈಸೂರು–5 ಅನ್ನು ಸಂಪರ್ಕಿಸಬಹುದು.

ಭಾರತದ ವಿರುದ್ಧ ಇಂಗ್ಲೆಂಡ್‌ಗೆ ಭರ್ಜರಿ ಜಯ

ಸರಣಿ ಸಮಬಲ, ಬೂಮ್ರಾ, ರೂಟ್ ಸರಣಿ, ಬೆಸ್ಟೋ ಪಂದ್ಯ ಶ್ರೇಷ್ಠ

ಬರ್ಮಿಂಗ್‌ಹ್ಯಾಂ, ಜು.5– ಜೋ ರೂಟ್ ಮತ್ತು ಜಾನಿ ಬೆಸ್ಟೋ ದ್ವಿಶತಕದ ಜೊತೆಯಾಟದ ನೆರವಿನಿಂದ ಇಂಗ್ಲೆಂಡ್ ಭಾರತ ವಿರುದ್ಧದ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ 7 ವಿಕೆಟ್‌ಗಳ ಗೆಲುವು ಸಾಧಿಸಿದೆ. ಈ ಮೂಲಕ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–2ರ ಸಮಬಲ ಸಾಧಿಸುವ ಮೂಲಕ ಸರಣಿ ಡ್ರಾ ಮಾಡಿಕೊಂಡಿದೆ.



ಭಾರತ ನೀಡಿದ್ದ 378 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ್ದ ಆತಿಥೇಯ ಇಂಗ್ಲೆಂಡ್ 4ನೇ ದಿನದಾಟದಂತ್ಯಕ್ಕೆ 3 ವಿಕೆಟ್ ನಷ್ಟಕ್ಕೆ 259 ರನ್ ಬಾರಿಸಿತ್ತು. ಇನ್ನು ಕೊನೆಯ ದಿನ ಪಂದ್ಯ ಗೆಲ್ಲಲು ಇಂಗ್ಲೆಂಡ್ ತಂಡಕ್ಕೆ ಕೇವಲ 119 ರನ್‌ಗಳ ಅಗತ್ಯವಿತ್ತು. 5ನೇ ದಿನವೂ ಭಾರತೀಯ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಜೋ ರೂಟ್ ಟೆಸ್ಟ್ ವೃತ್ತಿ ಜೀವನದ 28ನೇ ಶತಕ ಸಿಡಿಸಿ ಸಂಭ್ರಮಿಸಿದರು. ಮತ್ತೊಂದೆಡೆ ಮೊದಲ ಇನಿಂಗ್ಸ್‌ನಲ್ಲಿ ಸಮಯೋಚಿತ ಶತಕ ಸಿಡಿಸಿ ತಂಡಕ್ಕೆ ಆಸರೆಯಾಗಿದ್ದ ಬೇರ್ ಸ್ಟೋವ್, ಎರಡನೇ ಇನಿಂಗ್ಸ್‌ನಲ್ಲೂ ಶತಕ ಸಿಡಿಸಿದರು. ಇವರಿಬ್ಬರು ಮುರಿಯದ 4ನೇ ವಿಕೆಟ್‌ಗೆ 268 ರನ್‌ಗಳ ಅಮೋಘ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಇಂಗ್ಲೆಂಡ್ ಪರ ರೂಟ್ 142, ಬೆಸ್ಟೋ 114 ರನ್ ಗಳಿಸಿದರು.

ಇದಕ್ಕೂ ಮುನ್ನಾ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 416ರನ್ ಗಳಿಸಿದರೇ, ಇಂಗ್ಲೆಂಡ್ 284 ರನ್ ಗಳಿಸಿತ್ತು. 132 ರನ್‌ಗಳ ಭರ್ಜರಿ ಮುನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಭಾರತ 245ರನ್‌ಗಳಿಗೆ ಆಲೌಟಾಗಿತ್ತು. ಒಟ್ಟಾರೆ 378 ರನ್‌ಗಳ ಗುರಿ ಬೆನ್ನತ್ತಿದ ಇಂಗ್ಲೆಂಡ್ ಅಂತಿಮವಾಗಿ ಜಯದ ನಗೆ ಬೀರಿದೆ. ಸರಣಿಯಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಜೋ ರೂಟ್ ಹಾಗೂ ಬೌಲಿಂಗ್ ಪ್ರದರ್ಶನ ನೀಡಿದ ಬೂಮ್ರಾ ಸರಣಿ ಶ್ರೇಷ್ಠ, ಜಾನಿ ಬೆಸ್ಟೋ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರಲ್ಲೂ ಸಾರಿಗೆ ಬಸ್‌ಗಳಿಗೆ ಡೀಸೆಲ್ ಕೊರತೆ ಸಾಧ್ಯತೆ

ಪರ್ಯಾಯ ವ್ಯವಸ್ಥೆಯತ್ತ ಅಧಿಕಾರಿಗಳ ಚಿಂತನೆ

ಮೈಸೂರು, ಜು.5(ಎಂಕೆ)– ಬಿಎಂಟಿಸಿ (ಬೆಂಗಳೂರು ಮಹಾನಗರ ಸಾರಿಗೆ) ಯಲ್ಲಾದ ಡೀಸೆಲ್ ಕೊರತೆ ಸದ್ಯದಲ್ಲಿಯೇ ಕೆಎಸ್‌ಆರ್‌ಟಿಸಿಗೂ ವ್ಯಾಪಿಸಲಿದ್ದು, ಡೀಸೆಲ್‌ಗಾಗಿ ಖಾಸಗಿ ಪೆಟ್ರೋಲ್ ಬಂಕ್‌ಗಳನ್ನು ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

> ಬಸ್ ಸಂಚಾರಕ್ಕೆ ತೊಡಕಾಗದಂತೆ ಡೀಸೆಲ್ ಖರೀದಿಸಿ, ನಿರ್ವಹಣೆ ಮಾಡಲಾಗುತ್ತಿದೆ. ಎಂದಿನಂತೆ ಎಲ್ಲಾ ರೂಟ್‌ಗಳಲ್ಲಿಯೂ ಬಸ್‌ಗಳು ಓಡಾಡುತ್ತಿವೆ. ಖರ್ಚು ಕಡಿಮೆ ಮಾಡುವ ನಿಟ್ಟಿನಲ್ಲಿ ಸಗಟು ಬದಲು ರಿಟೈಲ್ ಮಾದರಿಯಲ್ಲಿ ಡೀಸೆಲ್ ಖರೀದಿ ಮಾಡಲಾಗುತ್ತಿದೆ.
> – ಆರ್.ಅಶೋಕ್ ಕುಮಾರ್,
> ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ

ಕಳೆದ 2–3 ತಿಂಗಳಿಂದ ಬಲ್ಕ್(ಸಗಟು ಖರೀದಿ) ಲೆಕ್ಕದಲ್ಲಿ ಡೀಸೆಲ್ ಖರೀದಿಸುವುದನ್ನು ನಿಲ್ಲಿಸಿ, ಖಾಸಗಿ ಪೆಟ್ರೋಲ್ ಬಂಕ್‌ಗಳಿಂದ ರಿಟೈಲ್(ಅಧ್ಧನೆಗೆ ಅನುಸಾರ) ಮಾದರಿಯಲ್ಲಿ ಡೀಸೆಲ್ ಖರೀದಿ ಮಾಡಿ ಸಾರಿಗೆ ಬಸ್‌ಗಳನ್ನು ಓಡಿಸಲಾಗುತ್ತಿದೆ. ಇದರಿಂದಾಗಿ ನಿಯಮಿತವಾಗಿ ಸ್ಟಾಕ್ ಇಲ್ಲದಿದ್ದರೆ ಅಗತ್ಯಕ್ಕೂ ಹೆಚ್ಚು ಡೀಸೆಲ್ ಬೇಕಾದ ಸಂದರ್ಭಗಳಲ್ಲಿ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಲಿದೆ.

ಬಿಎಂಟಿಸಿಯಲ್ಲಾದಂತೆ ಕೆಎಸ್‌ಆರ್‌ಟಿಸಿಯಲ್ಲೂ ಡೀಸೆಲ್ ಕೊರತೆ ಉಂಟಾಗುತ್ತಿದ್ದು, ಬಸ್ ಸಂಚಾರಕ್ಕೆ ಅನುಗುಣವಾಗಿ ಡೀಸೆಲ್ ನೀಡಲಾಗುತ್ತಿದೆ. ಇದರಿಂದ ಮೈಲೇಜ್ ಇಲ್ಲದ ಬಸ್‌ಗಳಿಗೆ ಡೀಸೆಲ್ ಕೊರತೆಯಾಗುತ್ತಿದೆ. ಡೀಸೆಲ್ ಕೊರತೆಯ ನೆಪದಿಂದಾಗಿ ಬಸ್ ಸಂಚಾರದಲ್ಲಿ ಕೊರತೆ ಉಂಟಾಗದಂತೆ ನಿಭಾಯಿಸಲಾಗುತ್ತಿದೆ ಎಂದು ಕೆಲ ಕೆಎಸ್‌ಆರ್‌ಟಿಸಿ ಸಿಬ್ಬಂದಿ ತಿಳಿಸಿದ್ದಾರೆ.

ಮೈಸೂರು ವಿಭಾಗದಲ್ಲಿ 1,087 ಬಸ್: ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗ (ನಗರ ಮತ್ತು ಗ್ರಾಮಾಂತರ)ದಲ್ಲಿ 1,087 ಬಸ್‌ಗಳಿದ್ದು, ನಿತ್ಯ 947 ಅನುಸೂಚಿ (ರೂಟ್)ಯಲ್ಲಿ ಸಂಚರಿಸುತ್ತಿವೆ. ಪ್ರತಿನಿತ್ಯ 70 ಸಾವಿರ ಲೀಟರ್ ಡೀಸೆಲ್ ಅಗತ್ಯವಿದ್ದು, ಸ್ಟಾಕ್ ಇರುವಂತೆ ನೋಡಿಕೊಂಡು ನಿರ್ವಹಣೆ ಮಾಡಲಾಗುತ್ತಿದೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಬಲ್ಕ್(ಸಗಟು ಖರೀದಿ)ಗೆ ಬೆಲೆ ಜಾಸ್ತಿ: ಸಗಟು ಖರೀದಿ ದರವು ಹೆಚ್ಚಾಗಿದ್ದ ಹಿನ್ನೆಲೆ ಖಾಸಗಿ ಬಂಕ್‌ಗಳಿಂದ ರಿಟೈಲ್ ಮಾದರಿಯಲ್ಲಿ ಖರೀದಿಸಲಾಗುತ್ತಿದೆ. ಬಸ್‌ಗಳ ಸಂಚಾರಕ್ಕೆ ಅನುಗುಣವಾಗಿ ಎಷ್ಟು ಲೀಟರ್ ಬೇಕಾಗಲಿದೆ ಎಂಬ ಲೆಕ್ಕಾಚಾರಕ್ಕೆ ಅನುಗುಣವಾಗಿ ಖರೀದಿ ಮಾಡಲಾಗುತ್ತಿದೆ. ಖಾಸಗಿ ಬಂಕ್ ವಾಹನಗಳ ಡಿಪೋಗಳಿಗೆ ಡೀಸೆಲ್ ತರಲಿದ್ದು, ಅಲ್ಲಿಂದ ಬಸ್‌ಗಳಿಗೆ ಹಾಕಲಾಗುತ್ತಿದೆ ಎಂದು ತಿಳಿಸಿದರು.





ಕೊರತೆ ಎದುರಾಗುವ ಸಾಧ್ಯತೆ: ಆಷಾಢ ಶುಕ್ರವಾರ, ದಸರಾ ಮಹೋತ್ಸವ ಸೇರಿದಂತೆ ಇನ್ನಿತರ ವಿಶೇಷ ಸಂದರ್ಭಗಳಲ್ಲಿ ಬಸ್‌ಗಳ ಓಡಾಟ ಜಾಸ್ತಿಯಾದರೆ, ಡೀಸೆಲ್ ಕೊರತೆ ಉಂಟಾಗುವ ಸಾಧ್ಯತೆ ಇದೆ. ದಿನಕ್ಕಿಷ್ಟು ಎಂದು ಖರೀದಿ ಮಾಡುವುದರಿಂದ ಕೊರತೆ ಎದುರಾಗಲಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಬಿಲ್ ಪಾವತಿ ವಿಳಂಬ ಆರೋಪ

ಬನ್ನೂರು ಪುರಸಭೆ ಎದುರು ಏಕಾಂಗಿ ಪ್ರತಿಭಟನೆ

ಬನ್ನೂರು, ಜು.5(ಎಸ್‌ಕೆ)– ಇಲ್ಲಿನ ಪುರಸಭೆಯಲ್ಲಿ ಕುಡಿಯುವ ನೀರು ಸರಬರಾಜು ಶಾಖೆಗೆ ಸಂಬಂಧಿಸಿದ ದುರಸ್ತಿ ಮತ್ತು ನಿರ್ವಹಣೆ ಬಿಲ್ ಪಾವತಿಸಲು ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ಶ್ರೀನಿಧಿ ಎಂಟರ್ ಪ್ರೈಸಸ್ ಮಾಲೀಕ ಸತೀಶ್ ನಾಯಕ ಮಂಗಳವಾರ ಬನ್ನೂರು ಪುರಸಭೆ ಕಚೇರಿ ಎದುರು ಏಕಾಂಗಿ ಪ್ರತಿಭಟನೆ ನಡೆಸಿದರು.

ಪುರಸಭೆ ಎದುರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪ್ರತಿಭಟನೆ ಆರಂಭಿಸಿದ ಸತೀಶ್ ನಾಯಕ್, ಪುರಸಭೆ ವ್ಯಾಪ್ತಿಯ ಕುಡಿಯುವ ನೀರು ಸರಬರಾಜು ಶಾಖೆಗೆ ಸಂಬಂಧಿಸಿದ ಸ್ಟಾರ್ಟರ್, ಮೋಟಾರ್, ಕೈ ಹಾಗೂ ಮೋಟಾರ್ ಪಂಪ್‌ಗಳನ್ನು ದುರಸ್ತಿ ಮಾಡಿದ 10 ಲಕ್ಷ ರೂ.ಗಳನ್ನು ಅಧಿಕಾರಿಗಳು ಬಿಲ್ ಮಾಡಿಕೊಡದೇ ಬೇಜವಾಬ್ದಾರಿ ಉತ್ತರ ನೀಡುತ್ತಿದ್ದಾರೆ ಎಂದು ಆರೋಪಿಸಿದರು.



ಕಳೆದ 10 ವರ್ಷಗಳಿಂದ ಪುರಸಭೆಯ ಕುಡಿಯುವ ನೀರು ಸರಬರಾಜು ಶಾಖೆಗೆ ಸಂಬಂಧಿಸಿದ ಎಲ್ಲಾ ರೀತಿಯ ರಿಪೇರಿ ಕೆಲಸಗಳನ್ನು ಟೆಂಡರ್ ಮೂಲಕ ಮಾಡಿಕೊಂಡು ಬಂದಿದ್ದೇನೆ. ಮೊದಲೆಲ್ಲಾ ವಿಳಂಬವಾದರೂ ಕಾಲ ಕಾಲಕ್ಕೆ ಹಣ ಪಾವತಿ ಮಾಡಲಾಗುತ್ತಿತ್ತು 2019 ರಿಂದೀಚೆಗೆ ಟೆಂಡರ್ ಕರೆಯಲು ಸಾಧ್ಯವಿಲ್ಲ. ಕೊಟೇಷನ್ ಮೂಲಕ ದುರಸ್ತಿ ಕಾರ್ಯ ಮಾಡಿಕೊಡುವಂತೆ ಪುರಸಭೆಯವರು ಮಾಡಿದ ಮನವಿ ಮೇರೆಗೆ ಕೊಟೇಷನ್ ಮೂಲಕವೇ ಎಲ್ಲಾ ಕೆಲಸಗಳನ್ನು ಮಾಡಿ ಬಿಲ್ ಪಾವತಿಸುವಂತೆ ಕೋರಿದ್ದೆ. ಆದರೆ ಅಧಿಕಾರಿಗಳು ಕೋವಿಡ್ ನೆಪವೊಡ್ಡಿ ಮುಂದಿನ ದಿನಗಳಲ್ಲಿ ಬಿಲ್ ಮಾಡಿಕೊಡುವ ಭರವಸೆ ನೀಡಿದ್ದರು. ಕೋವಿಡ್ ಸಂದರ್ಭದಲ್ಲಿಯೂ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ವಿಶೇಷ ಅನುಮತಿ ಪಡೆದು ನಿರ್ವಹಣೆ ಮಾಡಿಕೊಟ್ಟಿದ್ದೇನೆ. ಕೋವಿಡ್ ಮುಗಿದ ನಂತರ ಬಿಲ್ ನೀಡುವಂತೆ ಕೋರಿದರೆ ಅಧಿಕಾರಿಗಳು ಇಲ್ಲಸಲ್ಲದ ಸಬೂಬು ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು.

2020 ನ.21ರಲ್ಲಿ 92,400 ರೂ. ಹಾಗೂ ಡಿ.1ರಲ್ಲಿ 73,538 ರೂ. ವೆಚ್ಚದ ರಿಪೇರಿ ಕೆಲಸವನ್ನು ಮೌಖಿಕ ಆದೇಶದ ಮೇಲೆ ಮಾಡಿಸಿಕೊಂಡು ಕಡತ ಸಲ್ಲಿಸಲು ಹೋದರೆ ಆಗಿನ ಮುಖ್ಯಾಧಿಕಾರಿ ಪುಷ್ಪಲತಾ ನಿಯಮ ಬಾಹಿರವಾಗಿ ನಡೆದುಕೊಂಡು ಪತ್ರಿಕಾ ಪ್ರಕಟಣೆ ಪ್ರಕಟಿಸಿ ಎಂದು ಹಿಂಬರಹ ಬರೆದಿರುವುದು ಕಾನೂನ ಬಾಹಿರ. ಪುರಸಭಾ ನಿಯಮದ ಪ್ರಕಾರ 1 ಲಕ್ಷಕ್ಕಿಂತ ಕಡಿಮೆ ಮೊತ್ತಕ್ಕೆ ಕೊಟೇಷನ್ ರೂಪದಲ್ಲೇ ರಿಪೇರಿ ಮಾಡಿಸಬಹುದಾಗಿರುತ್ತದೆ. ಆದರೆ ಅವರು ದುರುದ್ದೇಶಪೂರ್ವಕವಾಗಿ ಬಿಲ್‌ಗಳಿಗೆ ಸಹಿ ಹಾಕದೇ ತೊಂದರೆ ನೀಡಿರುತ್ತಾರೆ. ಮೌಖಿಕವಾಗಿ ಕೆಲಸ ಮಾಡುವಂತೆ ಸೂಚಿಸಿದ ವೇಳೆ ಮುಖ್ಯಾಧಿಕಾರಿಯವರಿಗೆ ಪತ್ರಿಕಾ ಜಾಹೀರಾತು ನೀಡಬೇಕೆಂಬ ಕನಿಷ್ಠ ಜ್ಞಾನ ಇರಲಿಲ್ಲವೇ ಎಂದು ಪ್ರಶ್ನಿಸಿದ ಸತೀಶ್ ನಾಯಕ್ ಪುರಸಭಾ ಅಧಿಕಾರಿಗಳ ನಡೆಯಿಂದ ನಮ್ಮ ಸಂಸ್ಥೆ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕುವಂತಾಗಿದೆ ಬಾಡಿಗೆ, ವಾಹನ ನಿರ್ವಹಣೆ ಮತ್ತು ಕಾರ್ಮಿಕರ ಭತ್ಯೆ ಹಾಗೂ ಬಿಡಿ ಭಾಗಗಳ ಖರೀದಿಗೆ ನಮ್ಮಲ್ಲಿ ಹಣದ ಕೊರತೆ ಉಂಟಾಗಿದ್ದು, ಕೂಡಲೇ ಕುಡಿಯುವ ನೀರು ಸರಬರಾಜು ಶಾಖೆಗೆ ಸಂಬಂಧಿಸಿದ ದುರಸ್ಥಿ ಮತ್ತು ನಿರ್ಹಹಣೆ ಬಿಲ್‌ಗಳನ್ನು ಪಾವತಿಸಬೇಕು. ಅಲ್ಲಿಯವರೆಗೂ ಪ್ರತಿಭಟನೆ ಮಾಡುವುದಾಗಿ ತಿಳಿಸಿದರು.

ಸಿಇಓ ಭರವಸೆ: ಧರಣಿ ತಾತ್ಕಾಲಿಕ ವಾಪಸ್

ಈ ನಡುವೆ ಧರಣಿ ಸ್ಥಳಕ್ಕಾಗಮಿಸಿದ ಪುರಸಭೆ ಸಿಇಓ ಮಹದೇವು ಇಂದು ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಲಾಗಿದ್ದು, ಸಭೆಯಲ್ಲಿ ಸಮಸ್ಯೆ ಬಗ್ಗೆ ಅಜೆಂಡಾ ಇಲ್ಲವಾದ್ದರಿಂದ ಮುಂದಿನ ಸಭೆಯಲ್ಲಿ ಅಜೆಂಡಾ ಇಟ್ಟು ಬಿಲ್ ಹಣ ಕೊಡಿಸುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸತೀಶ್ ನಾಯಕ್ ಅವರು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆದರು.

ಎಸಿಬಿ ಬಲೆಗೆ ಎಸ್‌ಐ, ಹೆಡ್ ಕಾನ್‌ಸ್ಟೇಬಲ್



ಸಿದ್ದಯ್ಯ



ಸತೀಶ್

ತಿ.ನರಸೀಪುರ, ಜು5(ಎಸ್‌ಕೆ)– ಠಾಣೆಯಲ್ಲಿ ಲಂಚ ಪಡೆಯುವ ವೇಳೆ ಸಬ್ ಇನ್ಸ್‌ಪೆಕ್ಟರ್ ಹಾಗೂ ಹೆಡ್ ಕಾನ್ಸ್‌ಟೇಬಲ್ ರೆಡ್ ಹ್ಯಾಂಡ್ ಆಗಿ ಎಸಿಬಿ ಬಲೆಗೆ ಬಿದ್ದಿದ್ದಾರೆ.

ತಲಕಾಡು ಪೊಲೀಸ್ ಠಾಣೆ ಎಸ್‌ಐ ಸಿದ್ದಯ್ಯ, ಹೆಡ್ ಕಾನ್ಸಟೇಬಲ್ ಸತೀಶ್ ಎಸಿಬಿ ಬಲೆಗೆ ಬಿದ್ದವರು. ಇವರಿಬ್ಬರು ಎನ್‌ಸಿಆರ್ ಪ್ರಕರಣ ಮುಕ್ತಾಯಗೊಳಿಸಲು ಬೆಂಗಳೂರಿನ ಟ್ಯಾಕ್ಸಿ ಚಾಲಕರಾದ ಅಶೋಕ್, ಸಂದೇಶ್ ಅವರಿಂದ 10 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಟ್ಯಾಕ್ಸಿ ಚಾಲಕರು ಎಸಿಬಿಗೆ ದೂರು ನೀಡಿದ್ದರು.

ಇಂದು ಠಾಣೆಯಲ್ಲಿ ಟ್ಯಾಕ್ಸಿ ಚಾಲಕರಿಂದ ಎಸ್‌ಐ ಸಿದ್ದಯ್ಯ 5 ಸಾವಿರ ಹಾಗೂ ಹೆಡ್ ಕಾನ್ಸಟೇಬಲ್ ಸತೀಶ್ 2.5 ಸಾವಿರ ರೂ. ಲಂಚ ಪಡೆಯುವ ವೇಳೆ ಎಸಿಬಿ ಬಲೆಗೆ ಬಿದ್ದಿದ್ದಾರೆ. ಎಸಿಬಿ ಎಸ್ಪಿ ಸಜಿತ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ತಮ್ಮಯ್ಯ ನೇತೃತ್ವದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್‌ಗಳಾದ ಚಿತ್ತರಂಜನ್, ಮೋಹನ್, ಕೃಷ್ಣ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

2 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಪಿರಿಯಾಪಟ್ಟಣ, ಜು.5(ವೀರೇಶ್)– ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಇಲ್ಲದಿದ್ದರೂ, ಬಿಜೆಪಿ ಸರ್ಕಾರದ ಮಂತ್ರಿಗಳ ಮನೆ ಬಾಗಿಲಿಗೆ ಹೋಗಿ ಅನುದಾನ ತಂದು ತಾಲೂಕಿನ ಅಭಿವೃದ್ಧಿಗೆ ಪಣತೊಟ್ಟು ಕೆಲಸ ಮಾಡುತ್ತಿರುವುದಾಗಿ ಶಾಸಕ ಕೆ.ಮಹದೇವ್ ನುಡಿದರು.

ತಾಲೂಕಿನ ಭೋಗನಹಳ್ಳಿಯಿಂದ ಮಾಕೋಡು ಹಳ್ಳಿವರೆಗೆ 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಶಾಸಕನಾಗಿ ಅಧಿಕಾರ ವಹಿಸಿಕೊಂಡು 4 ವರ್ಷ ಆಗಿದ್ದು, ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳಿಗೆ ನಿಮ್ಮ ಸಹಕಾರ ಅಗತ್ಯ ಎಂದರು.



ಸರ್ಕಾರದಿಂದ ಹಣ ತರುವುದು ಸುಲಭದ ಮಾತಲ್ಲ. ವಿರೋಧ ಪಕ್ಷಗಳು 2 ಬಾರಿ ನನ್ನ ಮೇಲೆ ಅಪಪ್ರಚಾರ ನಡೆಸಿ ನನ್ನ ಸೋಲಿಗೆ ಸಂಚು ಮಾಡಿದವು. ಆದರೂ ನೀವು ನನ್ನ ಬಗ್ಗೆ ನಂಬಿಕೆ ಇಟ್ಟು ಅಧಿಕಾರ ನೀಡಿದ್ದೀರಿ. ನಿಮ್ಮ ನಂಬಿಕೆಗೆ ಚ್ಯುತಿ ಬಾರದ ಹಾಗೆ ನಾನು ಕರ್ತವ್ಯ ನಿರ್ವಹಿಸಿದ್ದೇನೆ. ಮುಂದಿನ ದಿನಗಳಲ್ಲಿ ನನಗೆ ಮತ್ತೆ ಅಧಿಕಾರ ದೊರಕಿದ್ದಲ್ಲಿ ತಾಲೂಕಿನ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸುತ್ತೇನೆ ಎಂದರು.

ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ವಿಜಕುಮಾರ್, ನಂದೀಶ್, ರಘು, ಜವರಪ್ಪ, ಹರ್ಷಿತ್ ಸೇರಿದಂತೆ ಗ್ರಾಮಸ್ಥರು, ಎಲ್ಲಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಲೇಜಿಗೆ ಉತ್ತಮ ಫಲಿತಾಂಶ ಬರುವಲ್ಲಿ ಶಿಕ್ಷಕರ ಶ್ರಮ ಮುಖ್ಯ: ಸಾರಾ



ಸಾಲಿಗ್ರಾಮ, ಜು.5(ಜ್ಯೋತಿ)–ಸರ್ಕಾರಿ ಕಾಲೇಜುಗಳಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಪ್ರವೇಶ ಆಗುವುದಕ್ಕೆ ಶಿಕ್ಷಕರ ಶ್ರಮದೊಂದಿಗೆ ಉತ್ತಮ ಫಲಿತಾಂಶ ಕೊಡುವ ವಿದ್ಯಾರ್ಥಿಗಳ ಸಾಧನೆಯೂ ಕಾರಣ ಎಂದು ಶಾಸಕ ಸಾ.ರಾ. ಮಹೇಶ್ ಅಭಿಪ್ರಾಯಪಟ್ಟರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2021 – 22ರ ಸಹಪಠ್ಯ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಅತ್ಯಂತ ಅಮೂಲ್ಯವಾದುದು. ಕೆಆರ್ ನಗರ, ಸಾಲಿಗ್ರಾಮ ತಾಲೂಕಿನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರತಿಭಾವಂತರೆಂಬುದಕ್ಕೆ ಇಂದಿನ ದಾಖಲಾತಿಯಲ್ಲಿ ಏರಿಕೆ ಕಾರಣ ಎಂದರು.

ಪ್ರಾಂಶುಪಾಲರಾದ ಡಾ.ಎಸ್ ಹಂಸವೇಣಿ, ಮೈಸೂರು ಮಹಾರಾಣಿ ಕಾಲೇಜಿನ ಉಪನ್ಯಾಸಕ ಕೃಷ್ಣಮೂರ್ತಿ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಕೆ.ಸಿ. ವೀರಭದ್ರಯ್ಯ, ಪಿಡಿಒ ಮಂಜುನಾಥ್, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಬಾಹುಬಲಿ, ಮಾಜಿ ಅಧ್ಯಕ್ಷ ಪ್ರೇಮ್ ಕುಮಾರ್ ಜೈನ್, ನಂಜಪ್ಪ ಶೆಟ್ಟಿ, ರಾಮಯ್ಯ, ಮಧುಚಂದ್ರ, ಜ್ಯೋತಿ ಜಯಸೇನ, ಸುಮ ಶಿವಣ್ಣ, ಕುಪ್ಪಳ್ಳಿ ಸೋಮು, ಗೇಟಿ ಪ್ರಕಾಶ್ ಇದ್ದರು.

ಬೈರಾಗಿ ಚಲನಚಿತ್ರ ಬಿಡುಗಡೆ ಹಿನ್ನೆಲೆ, ಅಭಿಮಾನಿಗಳ ಒತ್ತಾಯದ ಮೇರೆಗೆ

ತಿ.ನರಸೀಪುರಕ್ಕೆ ಶಿವಣ್ಣ ಭೇಟಿ, ಚಿತ್ರ ವೀಕ್ಷಣೆ

ತಿ.ನರಸೀಪುರ, ಜು.5(ಎಸ್‌ಕೆ)– ಬೈರಾಗಿ ಚಲನಚಿತ್ರ ಬಿಡುಗಡೆ ಹಿನ್ನೆಲೆಯಲ್ಲಿ ಅಭಿಮಾನಿಗಳ ಒತ್ತಾಯದ ಮೇರೆಗೆ ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್ ಪಟ್ಟಣಕ್ಕೆ ಭೇಟಿ ನೀಡಿ, ಪ್ರೇಕ್ಷಕರೊಂದಿಗೆ ಚಿತ್ರ ವೀಕ್ಷಿಸಿದರು.ಪಟ್ಟಣಕ್ಕೆ ಭೇಟಿ ನೀಡಿದ ಶಿವಣ್ಣ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ವೇಳೆ ನೆಚ್ಚಿನ ನಟನನ್ನು ನೋಡಲು ಅಭಿಮಾನಿಗಳು ಮುಗಿಬಿದ್ದ ಹಿನ್ನೆಲೆಯಲ್ಲಿ ದೇವಸ್ಥಾನದ ಬಾಗಿಲು ಮುಚ್ಚಿ ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಬಳಿಕ ಶಿವಣ್ಣ ಪಟ್ಟಣದ ಹೃದಯ ಭಾಗದಲ್ಲಿರುವ ಶ್ರೀಭಗವಾನ್ ಚಿತ್ರಮಂದಿರದಲ್ಲಿ ಬೈರಾಗಿ ಚಲನಚಿತ್ರ ವೀಕ್ಷಿಸಲು ಬಂದ ವೇಳೆ ಚಿತ್ರಮಂದಿರದ ಮುಂದೆ ನೆರೆದಿದ್ದ ಸಾವಿರಾರು ಅಭಿಮಾನಿಗಳನ್ನು ಕಂಡು ಪುಳಕಗೊಂಡರು. ಈ ವೇಳೆ ಹ್ಯಾಟ್ರಿಕ್ ಹೀರೋ ನೋಡಲು ಅಭಿಮಾನಿಗಳು ಮುಗಿಬಿದ್ದರು. ಚಿತ್ರಮಂದಿರದ ಟೆರೆಸ್ ಏರಿದ ಶಿವಣ್ಣ ನೆರೆದಿದ್ದ ಸಹಸ್ರಾರು ಮಂದಿ ಅಭಿಮಾನಿಗಳೆಡೆ ಕೈ ಬೀಸಿ ಕೃತಜ್ಞತೆ ಸಲ್ಲಿಸಿದರು. ಆನಂತರ ಚಿತ್ರಮಂದಿರದಲ್ಲಿ ಅಭಿಮಾನಿಗಳ ನಡುವೆ ಕುಳಿತು ಸ್ವಲ್ಪ ಸಮಯ ಚಿತ್ರ ವೀಕ್ಷಿಸಿದರು. ಇಂದು ಶಿವಣ್ಣ ಪಟ್ಟಣಕ್ಕೆ ಭೇಟಿ ನೀಡುತ್ತಾರೆಂಬ ಸುದ್ದಿ ತಿಳಿದ ಅಭಿಮಾನಿಗಳು ತಾಲೂಕಿನ ವಿವಿಧ ಭಾಗಗಳಿಂದ ಸಹಸ್ರ ಸಂಖ್ಯೆಯಲ್ಲಿ ಬಂದು ಚಿತ್ರಮಂದಿರದ ಮುಂದೆ ಜಮಾಯಿಸಿದ್ದರು. ಚಿತ್ರಮಂದಿರಕ್ಕೆ ಭೇಟಿ ನೀಡಿದ ಶಿವರಾಜ್ ಕುಮಾರ್ ಅವರನ್ನು ಚಿತ್ರಮಂದಿರದ ಮಾಲೀಕರು ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು.



ಈ ವೇಳೆ ಮಾತನಾಡಿದ ಶಿವಣ್ಣ, ಅಭಿಮಾನಿಗಳ ಅಭಿಮಾನಕ್ಕೆ ಋಣಿಯಾಗಿದ್ದೇನೆ. ಬೈರಾಗಿ ಚಿತ್ರ ಕುಟುಂಬ ಸಮೇತ ನೋಡಬಹುದಾದ ಸುಂದರ ಚಿತ್ರ. ನನ್ನ ಹಿಂದಿನ ಎಲ್ಲಾ ಚಿತ್ರಗಳಿಗಿಂತ ವಿಭಿನ್ನವಾಗಿ ಮೂಡಿ ಬಂದಿದೆ ಫ್ಯಾಮಿಲಿ ಸೆಂಟಿಮೆಂಟ್‌ನೊಂದಿಗೆ ಉತ್ತಮ ಕಥಾ ಹಂದರ ಹೊಂದಿದೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರವಾಗಿದ್ದು ಪ್ರೇಕ್ಷಕರು ಚಿತ್ರಮಂದಿರದಲ್ಲಿಯೇ ಚಿತ್ರ ವೀಕ್ಷಣೆ ಮಾಡುವ ಮೂಲಕ ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.



ಸಮಾಜ ಸೇವಕ ದೇವದತ್ತ ಅವರು ಹೆಚ್.ಡಿ.ಕೋಟೆ ಪತ್ರಕರ್ತರ ಭವನದಲ್ಲಿ ಪತ್ರಕರ್ತರಿಗೆ ಉಚಿತವಾಗಿ ಗ್ಲೂಕೋಮೀಟರ್ ವಿತರಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಉಪಾಧ್ಯಕ್ಷ ಮಂಜು ಕೋಟೆ, ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ, ಸಹ ಕಾರ್ಯದರ್ಶಿ ಮಂಜು ಬೀಚನಹಳ್ಳಿ, ನಿರ್ದೇಶಕರಾದ ಪುರುಷೋತ್ತಮ, ನಾಗೇಶ್, ಚಿಕ್ಕಣ್ಣೇಗೌಡ, ಸದಸ್ಯರಾದ ಎಂ.ಎಲ್. ರವಿಕುಮಾರ್, ಜಿ.ರವಿಕುಮಾರ್, ವಾಸುಕಿ ನಾಗೇಶ್, ಪುಟ್ಟರಾಜು, ಶ್ರೀನಿಧಿ, ನಂದಕುಮಾರ್ ಶೈಲಿ, ದಾಸೇಗೌಡ, ಪ್ರಮೋದ್ ಇತರರಿದ್ದರು.

ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ: ಎಂ.ಅಪ್ಪಣ್ಣ

ಸರಗೂರು, ಜು.5(ನಾಗೇಶ್)– ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಪಟ್ಟಣ ಪಂಚಾಯಿತಿ ಸದಸ್ಯರು ಶ್ರಮಿಸಬೇಕು ಎಂದು ಅರಣ್ಯ ಮತ್ತು ವಿಹಾರಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಪಕ್ಷದ ಸಿದ್ಧಾಂತಕ್ಕೆ ಹೆಚ್ಚು ಒತ್ತು ನೀಡಲಾಗುವುದು. ಚುನಾವಣೆ ವೇಳೆ ಪಕ್ಷದ ಅಭ್ಯರ್ಥಿ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು. ಪಟ್ಟಣ ಪಂಚಾಯಿತಿ ಸದಸ್ಯರು ಪಟ್ಟಣದ ಅಭಿವೃದ್ಧಿಗೆ ಒಗ್ಗೂಡಿ ಶ್ರಮಿಸಬೇಕು. ಕುಟುಂಬದ ಸದಸ್ಯರ ಅನಾರೋಗ್ಯದ ಕಾರಣ ಕೆಲಕಾಲ ಇಲ್ಲಿಗೆ ಆಗಮಿಸಲು ಸಾಧ್ಯವಾಗಲಿಲ್ಲ. ತಾಯಿ ಚಿಕ್ಕದೇವಮ್ಮನವರ ಆಶೀರ್ವಾದದಿಂದ ಒಳ್ಳೆಯದಾಗಿದೆ. ತಾಲೂಕಿನ ವಿವಿಧ ಗ್ರಾಮಗಳಲ್ಲಿ ನಡೆಯುತ್ತಿರುವ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದ್ದು, ಅವುಗಳನ್ನು ಸದ್ಯದಲ್ಲೇ ಪರಿಶೀಲನೆ ನಡೆಸಲಾಗುವುದು ಎಂದರು.



ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ನೂರಾಳಸ್ವಾಮಿ, ವೀರೇಶ್, ನವೀನ್ ಕುಮಾರ್, ಎನ್.ಎಸ್.ಪ್ರತಾಪ್, ರಾಮು, ಬಿಜೆಪಿ ಮುಖಂಡರಾದ ಗಣಪತಿ, ಹೆಚ್.ಸಿ.ಲಕ್ಷ್ಮಣ್, ನಟರಾಜು, ಶಂಕರೇಗೌಡ, ಮಹದೇವ್, ಎಂ.ಪಿ.ಮಂಜುನಾಥ್, ದೊಡ್ಡವೀರನಾಯಕ, ದಾಸಪ್ಪ, ಟೌನ್ ಅಧ್ಯಕ್ಷ ನಗರಾಜರಾಮ್, ಪೈಂಟ್ ನಾಗರಾಜು, ನವೀನ್ ಪಟೇಲ್, ಅಭಿ ಸೇರಿದಂತೆ ಇತರರಿದ್ದರು.

ಸದಸ್ಯರಾಗಿ ಆಯ್ಕೆ



ಹೆಚ್.ಡಿ.ಕೋಟೆ, ಜು.5(ಮಂಜು)– ಹುಣಸೂರು ವಿಭಾಗ ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ನೂತನ ಸದಸ್ಯರಾಗಿ ಕ್ಯಾತನಹಳ್ಳಿ ನಾಗರಾಜ್ ಆಯ್ಕೆಯಾಗಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಜು.5(ಮಂಜು)– ತಾಲೂಕಿನ ಹಂಪಾಪುರದಲ್ಲಿರುವ 66/11ಕೆವಿ ವಿದ್ಯುತ್ ವಿತರಣ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜು.6ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳತೂರು, ಮನಗನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ರಾಜಕಾರಣಿಗಳು, ಮಾಧ್ಯಮದವರು ಪದಗಳನ್ನು ಸಮರ್ಪಕವಾಗಿ ಬಳಸದಿರುವುದರಿಂದ

ಕನ್ನಡದ ಮೌಲ್ಯ ಹಾಳಾಗುತ್ತಿರುವುದು ಶೋಚನೀಯ

ಪತ್ರಿಕಾ ದಿನಾಚರಣೆಯಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್

ಹುಣಸೂರು, ಜು.5(ಮಹೇಶ್, ಕೆಕೆ)– ರಾಜಕಾರಣಿಗಳು, ಮಾಧ್ಯಮದವರು ಪದಗಳನ್ನು ಸಮರ್ಪಕವಾಗಿ ಬಳಸದಿರುವುದರಿಂದ ಕನ್ನಡದ ಮೌಲ್ಯ ಹಾಳಾಗುತ್ತಿರುವುದು ಶೋಚನೀಯ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಹೇಳಿದರು.

ನಗರದಲ್ಲಿ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಪತ್ರಕರ್ತ ದಾ.ರಾ.ಮಹೇಶ್ ಅವರಿಗೆ ಜಿಲ್ಲಾ ಮಟ್ಟದ ಗ್ರಾಮೀಣಾಭಿವೃದ್ಧಿ ಹೆಚ್.ಆರ್.ಶ್ರೀನಿವಾಸ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಮುದ್ರಣ ಮಾಧ್ಯಮದಲ್ಲಿ ಅಕ್ಷರ ಬಳಕೆ, ದೃಶ್ಯ ಮಾಧ್ಯಮದಲ್ಲಿ ಬಳಸುವ ಪದಬಳಕೆ ತಪ್ಪು ಹಾದಿ ಹಿಡಿದಿದೆ. ರಾಜಕಾರಣಿಗಳು ಸಾರ್ವಜನಿಕ ವೇದಿಕೆಯಲ್ಲಿ ಬಳಸುವ ಪದಗಳು ಅಗೌರವ ಸೂಚಿಸುವಂತಿದ್ದರೆ ಮಾಧ್ಯಮಗಳು ನೇರವಾಗಿ ಖಂಡಿಸುವ ಕೆಲಸ ಮಾಡಬೇಕಿದೆ. ಆದರೆ ಖಂಡಿಸುವ ಬದಲಿಗೆ ಮಾಧ್ಯಮವೇ ಪದ ಪ್ರಯೋಗ ಕೆಳ ಮಟ್ಟದಲ್ಲಿ ಬಳಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.


ಮಾಧ್ಯಮ, ರಾಜಕಾರಣಿ ಒಂದು ನಾಣ್ಯದ ಎರಡು ಮುಖವಿದ್ದಂತೆ. ರಾಜಕಾರಣಿ ಸಮಾಜಮುಖಿಯಾಗಿ ಬೆಳೆಯಲು ಮಾಧ್ಯಮದೊಂದಿಗೆ ನಿಕಟ ಸಂಪರ್ಕ ಹೊಂದಿರಬೇಕು. ಮುದ್ರಣ ಮಾಧ್ಯಮ ಬಳಸುವ ಪದಗುಚ್ಛ ಓದಿ ತಿಳಿದು ರಾಜಕಾರಣಿ ತನ್ನ ವೃತ್ತಿಯಲ್ಲಿ ಬಳಸಿಕೊಳ್ಳಬೇಕು. ಸರ್ಕಾರ ನಡೆಸುವ ಜವಾಬ್ದಾರಿ ಹೊರುವ ರಾಜಕಾರಣಿಗಳಿಗೆ ಮಾಧ್ಯಮದ ಮಾರ್ಗದರ್ಶನ ಅಗತ್ಯವಿದೆ ಎಂದರು.



ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಮಾಧ್ಯಮಗಳು ಸತ್ಯಕ್ಕೆ ಹತ್ತಿರವಾದ ಮತ್ತು ವಸ್ತು ಸ್ಥಿತಿ ತಿಳಿದು ಬರೆಯುವುದರಿಂದ ಸಾರ್ವಜನಿಕರ ವಿಶ್ವಾಸ ಮತ್ತು ಸಮಾಜದ ಸ್ವಾಸ್ಥ್ಯ ಕಾದುಕೊಳ್ಳಬಹುದು ಎಂದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ಪತ್ರಕರ್ತ ಕೆ.ದೀಪಕ್, ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ, ರಾಷ್ಟ್ರೀಯ ಸಮಿತಿ ಸದಸ್ಯ ಕಿರಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ಪ್ರಧಾನ ಕಾರ್ಯದರ್ಶಿ ನೇರಳಕುಪ್ಪೆ ಮಹಾದೇವ್ ಮಾತನಾಡಿದರು. ಕಾರ್ಯ ನಿರ್ವಹಣಾಧಿಕಾರಿ ಹೆಚ್.ಡಿ.ಗಿರೀಶ್, ಬಿಇಓ ನಾಗರಾಜ್ ಉಪಸ್ಥಿತರಿದ್ದರು. ಹಿರಿಯ ಪತ್ರಕರ್ತ ಕೃಷ್ಣ, ಸ್ವಾಮಿಗೌಡ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಬೇಸಿಗೆ ರೇಸುಗಳು



8ನೇ ದಿನ, ಬುಧವಾರ 6-7-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. **ದೊಡ್ಡಬಳ್ಳಾಪುರ ಪ್ಲೇಟ್–1400** ಮೀ. ರೇಟೆಡ್ 00 ರಿಂದ 25. **ಮ.1.30ಕ್ಕೆ**
1. ಫೆಸ್ಟಿವ್ ಸ್ಟಾರ್ 2. ಸೈಂಟ್ ಲೂಸಿಯಾ 3. ಸರ್‌ಕ್ಯಾಲಿಕ್ಯೂಲಸ್

II. **ಶುಂಠಿಕೊಪ್ಪ ಪ್ಲೇಟ್–1200** ಮೀ. ರೇಟೆಡ್ 20 ರಿಂದ 45. **ಮ.2.00ಕ್ಕೆ**
1. ವಿಂಡ್ ಪವರ್ 2. ಕ್ಯಾಲಿಫೋರ್ನಿಯ ಗೋಲ್ಡ್ 3. ಎವೆಂಡರ್

III. **ಇಟಾರ್‌ಸಿ ಪ್ಲೇಟ್ ಡಿ2–1400** ಮೀ. ರೇಟೆಡ್ 20 ರಿಂದ 45. **ಮ.2.30ಕ್ಕೆ**
1 ಫಾರೆಸ್ಟ್ ವ್ಯೂ 2. ಸ್ವಿಸ್ ಟೈಗರ್ಸ್ 3. ಬ್ರೇಕ್ ಅವೆ

IV. **ಕೆಮ್ಮಣ್ಣುಗುಂಡಿ ಪ್ಲೇಟ್–1600** ಮೀ. ರೇಟೆಡ್ 40 ರಿಂದ 65. **ಮ.3.00ಕ್ಕೆ**
1. ಸಾಂಟೊರಿನಿ 2. ಪ್ಲಾಷ್‌ಬಾಂಡ್ 3. ಡಿ ಲಾರ್ಡ್

V. **ಇಟಾರ್‌ಸಿ ಪ್ಲೇಟ್ ಡಿ1–1400** ಮೀ. ರೇಟೆಡ್ 20 ರಿಂದ 45. **ಮ.3.30ಕ್ಕೆ**
1. ಮುಟಾಂಟ್ 2. ಮಾರ್ಗ್‌ನೈಟ್ 3. ವಿಜಯ ಸಾರಥಿ

VI. **ಮೈಸೂರ್ ಕೋಲ್ಟ್ಸ್ ಟ್ರೈಯಲ್ ಸ್ಟೇಕ್ಸ್–1400** ಮೀ. 3 ವರ್ಷದ (ಟರ್ಮ್ಸ್) **ಸಂ.4.00ಕ್ಕೆ**
1. ಅಶ್ವಮಗಧೀರ 2. ಇಂಡಿಯನ್ ಪೇಟ್ರಿಯಾಟ್

VII. **ರೆಡ್ ಚೀಫ್ಟನ್ ಪ್ಲೇಟ್ –1400** ಮೀ. ರೇಟೆಡ್ 60 ರಿಂದ 85. **ಸಂ.4.30ಕ್ಕೆ**
1. ಆಲ್ ಗ್ರೇಟ್ ಫ್ರೆಂಡ್ಸ್ 2. ನತಿಂಗ್ ಟು ವರಿ 3. ಟ್ರೆಮಂಡಸ್

VIII. **ಆನೇಕಲ್ ಪ್ಲೇಟ್–1400** ಮೀ. ರೇಟೆಡ್ 40 ರಿಂದ 65. **ಸಂ.5.00ಕ್ಕೆ**
1. ಮ್ಯಾಜಿಕ್ ಸರ್ಕಲ್ 2. ಡಿ ಬ್ರದರ್ 3. ಗುಡ್ ಅರ್ತ್

ದಿನದ ಅತ್ಯುತ್ತಮ	**ಅಶ್ವಮಗಧೀರ**
ಡಬ್ಬಲ್	**ಸಾಂಟೊರಿನಿ, ಮ್ಯಾಜಿಕ್ ಸರ್ಕಲ್**
ಜಾಕ್‌ಪಾಟ್	4, 5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	7 ಮತ್ತು 8

ಟಿಪ್‌ಸ್ಟರ್ ಪಿಜೆಸಿ


ಜು.8, ಮುದ್ರಾಯೋಗ, ಧ್ಯಾನ ಶಿಬಿರ

ಮೈಸೂರು, ಜು. 5–ಮೈಸೂರಿನ ಕುವೆಂಪುನಗರ ಬಳಿಯ ನಿಮಿಷಾಂಬ ನಗರದಲ್ಲಿರುವ ಬ್ರಹ್ಮಶ್ರೀ ನಾರಾಯಣ ಗುರು ಯೋಗ ಮಂದಿರದಲ್ಲಿ ಉತ್ತಮ ಆರೋಗ್ಯ, ಮನಃಶಾಂತಿ, ನವಗ್ರಹ ಹಾಗೂ ವಸ್ತು ದೋಷ ಪರಿಹಾರಕ್ಕಾಗಿ 1 ತಿಂಗಳ ಮುದ್ರಾಯೋಗ ಹಾಗೂ ಧ್ಯಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವನ್ನು ಜು.8ರ ಬೆಳಗ್ಗೆ ಹಾಗೂ ಸಂಜೆ ಯೋಗಾಚಾರ್ಯ ಬಿ.ಶಾಂತರಾಂ ನಡೆಸಿಕೊಡಲಿದ್ದಾರೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿ ಇದರ ಸದುಪಯೋಗ ಪಡೆಯುವಂತೆ ಕೋರಲಾಗಿದೆ. ವಿವರಗಳಿಗೆ ಮೊ.ಸಂ. 9449696998 ಸಂಪರ್ಕಿಸುವಂತೆ ಕಾರ್ಯದರ್ಶಿ ಜೆ.ವಿನಯ್ ತಿಳಿಸಿರುತ್ತಾರೆ.

ಇಂದು ಬಾಬೂಜಿ 36ನೇ ಪುಣ್ಯಸ್ಮರಣೆ



ಮೈಸೂರು: ಜಿಲ್ಲಾಡಳಿತದಿಂದ ಡಾ.ಬಾಬು ಜಗಜೀವನರಾಂ ಅವರ 36ನೇ ವರ್ಷದ ಪುಣ್ಯಸ್ಮರಣೆ ದಿನದ ಅಂಗ ವಾಗಿ ಜು.6 ರಂದು ಬೆಳಗ್ಗೆ 9.30ಕ್ಕೆ ರೈಲ್ವೆ ನಿಲ್ದಾಣ ಮುಂಭಾಗದ ವೃತ್ತ ದಲ್ಲಿರುವ ಡಾ.ಬಾಬು ಜಗಜೀವನರಾಂ ಪುತ್ಥಳಿಗೆ ಮಾಲಾರ್ಪಣೆ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ










ನಿಧನ



ಶ್ರೀ ಕೆ.ಜಿ.ಸತ್ಯನಾರಾಯಣ

ಇವರು ದಿ:05.07.2022ರ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿ: 07.07.2022 ರ ಗುರುವಾರ ಬೆಳಗ್ಗೆ ... ಸ್ವಗೃಹ ಮೈಸೂರಿನ ಕುವೆಂಪುನಗರ ... 'ರಾಮಕೃಷ್ಣ'ದಲ್ಲಿ ಇವರ ... ಸಾರ್ವಜನಿಕರ ದರ್ಶನಕ್ಕೆ ... 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ... ಅಂತ್ಯಕ್ರಿಯೆ ನೆರವೇರಿಸಲಾಗುವುದು ... ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ... ವಿನಂತಿಸುತ್ತೇವೆ. ದುಃಖತಪ್ತರು: ಕುಟುಂಬವರ್ಗದವರು



ಮೈಸೂರಿನ ಪ್ರತಿಷ್ಠಿತ ಸಂಸ್ಥೆಯ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ


ಕ್ರ.ಸಂ	ಹುದ್ದೆ	ಸಂಖ್ಯೆ	ಅನುಭವ
1.	COMPUTER OPERATOR	4	ಯಾವುದೇ ಖಾಸಗಿ ಸಂಸ್ಥೆಯಲ್ಲಿ/ಕಛೇರಿಯಲ್ಲಿ ಕನಿಷ್ಠ 1 ವರ್ಷ
2.	CIVIL ENGINEER	1	ಯಾವುದೇ ಖಾಸಗಿ ಸಂಸ್ಥೆಯಲ್ಲಿ/ಕಛೇರಿಯಲ್ಲಿ ಕನಿಷ್ಠ 1 ವರ್ಷ
3.	RECEPTIONIST	1	ಯಾವುದೇ ಖಾಸಗಿ ಸಂಸ್ಥೆಯಲ್ಲಿ/ಕಛೇರಿಯಲ್ಲಿ ಕನಿಷ್ಠ 1 ವರ್ಷ
4.	HR DEPARTMENT	1	ಯಾವುದೇ ಖಾಸಗಿ ಸಂಸ್ಥೆಯಲ್ಲಿ/ಕಛೇರಿಯಲ್ಲಿ ಕನಿಷ್ಠ 1 ವರ್ಷ

ಸಂಪರ್ಕಿಸಿ: 0821-3501177/8, 73385 99164

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಶ್ರೀ ಹೆಚ್.ವಿ.ಲಿಂಗರಾಜು

... ಗಂಟೆಗೆ ಶಿವೈಕ್ಯರ ಕೈಲಾಸ ಗಣಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ಹೆಚ್.ಎಲ್.ಬಸವರಾಜು, ಮೃತರ ಪತ್ನಿ ಶಿವಕುಮಾರಮ್ಮ, ಮಕ್ಕಳು, ಅಳಿಯ, ಮೊಮ್ಮಕ್ಕಳು ಹಾಗೂ ಸಹೋದರರು ಸೊಸೆಯಂದಿರು ಮತ್ತು ಮೊಮ್ಮಕ್ಕಳು

TEACHERS WANTED

Sl no	Subject / Teacher	No of Post
1	Computer Teacher	01
2	Hindi	01

Above said posts are for English Medium High School.

Bhagya Jyothi School
Raghavendra Nagar, Mysore -29.
☏: 2470611, 96320 89987


SDJ JEWELERS

ಪುರುಷರು ಮತ್ತು ಮಹಿಳೆಯರು **Tele Callers** ಮತ್ತು **Sales Executive** ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು **PG** ವ್ಯವಸ್ಥೆ ಇರುತ್ತದೆ
Salary : 20,000
8884304444

ನೇರ II PUC!!

I PUC ಫೇಲಾಗಿದೆಯೇ? ಚಿಂತೆ ಬಿಡಿ. ನಾವು ನಿಮ್ಮನ್ನು ನೇರವಾಗಿ II PUC ಗೆ ಕೂರಿಸಿ, ಮುದ್ರಿತ ನೋಟ್‌ಗಳೊಂದಿಗೆ ಪರಿಣಾಮಕಾರಿಯಾದ ಕೋಚಿಂಗ್ ನೀಡಿ, ಪರೀಕ್ಷೆಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. PG ಸಹ ಲಭ್ಯ.
ಜ್ಞಾನವರ್ಧಿನಿ ಸೆಂಟರ್
ಮರಿಮಲ್ಲಪ್ಪ ಕಾಲೇಜಿನ ಎದುರು
9844355941 / 9482674037
www.direct2puc.com





ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಶ್ರೀ. ಕೆ.ಎಸ್. ವೆಂಕಟೇಶ್ ರವರ ಧರ್ಮಪತ್ನಿ ಶ್ರೀಮತಿ ಟಿ. ಉಮಾ ಅಲಿಯಾಸ್ ಉಮಾ ವೆಂಕಟೇಶ್ ರವರು ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ನಿರ್ಧರಿಸಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ ಗ್ರಾಮದಲ್ಲಿ, ದೀಪ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಇವರು ಅಭಿವೃದ್ಧಿಪಡಿಸಿ ನಿರ್ಮಿಸಿರುವ ದೀಪಾ ನಗರ ಬಡಾವಣೆ, 14ನೇ ಕ್ರಾಸ್, ನಿವೇಶನ ಸಂಖ್ಯೆ 1134 ರ ವಿಸ್ತೀರ್ಣ ಪೂರ್ವ–ಪಶ್ಚಿಮ 40 ಅಡಿಗಳು/12.192024 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ 60 ಅಡಿಗಳು/18.288037 ಮೀಟರ್‌ಗಳು, ಒಟ್ಟು ವಿಸ್ತೀರ್ಣ 2400 ಚದರ ಅಡಿಗಳು/222.9672 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ನಿವೇಶನ ಸಂಖ್ಯೆ 1133, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 1135, ಉತ್ತರಕ್ಕೆ: ನಿವೇಶನ ಸಂಖ್ಯೆ 1060 ಮತ್ತು ದಕ್ಷಿಣಕ್ಕೆ: 14ನೇ ಕ್ರಾಸ್ ರಸ್ತೆ

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್,
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 98446 40641
Email: sldlawfirm2021@gmail.com

VIDYAVARDHAKA COLLEGE OF ENGINEERING

Vidyavardhaka Sangha (Regd), Mysore
Autonomous Institute, Accredited by NBA & by NAAC with "A" Grade
Gokulam, 3rd Stage, Mysuru-570 002
E-mail: career@vvce.ac.in | Website: www.vvce.ac.in

STAFF REQUIRED

TEACHING : • **Professor** in CS&E, IS&E : Ph.D is Compulsory. • **Associate Professor** in CS&E, IS&E :Ph.D is Compulsory • **Assistant Professor** in CS&E, IS&E AI&ML, E&EE and ME : First Class in BE & M.Tech, Preference will be given to PhDs • **Assistant Professor** in MBA Dept.: Specialization in Banking & Finance, HR & Marketing, Preference will be given to PhDs.

NON-TEACHING : • **Placement Executive** : Any Master's degree (full time course) with Experience in relevant field • **Public Relations Officer :** Any Graduate with good communication & PR skills, relevant experience in educational institutes.

For further details and to apply, visit https://vvce.ac.in/careers



9ನೇ ವರ್ಷದ ಸವಿನೆನಪು



06–07–2022

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚಹಸಿರಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ.

ಚೆನ್ನಮ್ಮ

ಇಂತಿ ನಿಮ್ಮ ಮಕ್ಕಳು
ನರಸಿಂಹ ಮತ್ತು ಕುಟುಂಬವರ್ಗ, ಮೊ: 9845196544



ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ನೈರುತ್ಯ ರೈಲ್ವೆ

ಈ ಕೆಳಗೆ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1 ಇ–ಟೆಂಡರು ಸೂಚನೆ ಸಂ. RESBC-E-295-RRB-TLGP-WT-2, ದಿನಾಂಕ: 30.06.2022. ನೈರುತ್ಯ ರೈಲ್ವೆ, ಮೈಸೂರು ವಿಭಾಗ, ರೈಲ್ವೆ ವಿದ್ಯುದೀಕರಣ ಗ್ರೇಡ್.295 ರ ವ್ಯಾಪ್ತಿಯಲ್ಲಿ ಬರುವ ಆರ್‌ಆರ್‌ಬಿ–ಟಿಎಲ್‌ಜಿಪಿಯ ಸಾಗರ ಜಂಬಗಾರು ನಿಲ್ದಾಣದಲ್ಲಿ ಟವರ್ ವೇಗನ್ ಶೆಡ್ ಮತ್ತು ಸೈಡಿಂಗ್ ನಿರ್ಮಾಣ–1 ಸಂ., ಓಹೆಚ್‌ಇ/ಪಿಎಸ್ ಡಿಪೋ–1 ಸಂ., ಸಿಬ್ಬಂದಿ ವಸತಿಗೃಹ ಟೈಪ್–II–08 ಸಂ., ಟೈಪ್–III–08 ಸಂ. ಮತ್ತು ಟೈಪ್–IV–02 ಸಂ., ಮಣ್ಣಿನ ಕೆಲಸ, ನೀರಿನ ಸರಬರಾಜು ಮತ್ತು ಇತರ ಪೂರಕ ವ್ಯವಸ್ಥೆಗಳೊಂದಿಗೆ. ಮುಕ್ತಾಯದ ಅವಧಿ ಹನ್ನೆರಡು ತಿಂಗಳುಗಳು.	ರೂ. 8,02,14,742/-
2 ಇ–ಟೆಂಡರು ಸೂಚನೆ ಸಂ. RESBC-E-259-RRB-HVR-WT-02, ದಿನಾಂಕ: 30.06.2022. ನೈರುತ್ಯ ರೈಲ್ವೆ, ಮೈಸೂರು ವಿಭಾಗ, ರೈಲ್ವೆ ವಿದ್ಯುದೀಕರಣ ಗ್ರೇಡ್.259 ರ ವ್ಯಾಪ್ತಿಯಲ್ಲಿ ಬರುವ ಆರ್‌ಆರ್‌ಬಿ–ಹೆಚ್‌ವಿಆರ್‌ನ ಹಾವೇರಿ ನಿಲ್ದಾಣದಲ್ಲಿ ಟವರ್ ವೇಗನ್ ಶೆಡ್ ಮತ್ತು ಸೈಡಿಂಗ್ ನಿರ್ಮಾಣ–1 ಸಂ., ಓಹೆಚ್‌ಇ/ಪಿಎಸ್ ಡಿಪೋ–1 ಸಂ., ಸಿಬ್ಬಂದಿ ವಸತಿಗೃಹ ಟೈಪ್–II–10 ಸಂ., ಟೈಪ್–III–04 ಸಂ. ಮತ್ತು ಟೈಪ್–IV–02 ಸಂ., ಮಣ್ಣಿನ ಕೆಲಸ, ನೀರಿನ ಸರಬರಾಜು ಮತ್ತು ಇತರ ಪೂರಕ ವ್ಯವಸ್ಥೆಗಳೊಂದಿಗೆ. ಮುಕ್ತಾಯದ ಅವಧಿ ಹನ್ನೆರಡು ತಿಂಗಳುಗಳು.	ರೂ. 8,41,46,678/-
3 ಇ–ಟೆಂಡರು ಸೂಚನೆ ಸಂ. RESBC-E-259-RRB-HVR-WT-02, ದಿನಾಂಕ: 30.06.2022. ನೈರುತ್ಯ ರೈಲ್ವೆ, ಹುಬ್ಬಳ್ಳಿ ವಿಭಾಗ, ರೈಲ್ವೆ ವಿದ್ಯುದೀಕರಣ ಗ್ರೇಡ್.259 ರ ವ್ಯಾಪ್ತಿಯಲ್ಲಿ ಬರುವ ಹಾವೇರಿ–ಹುಬ್ಬಳ್ಳಿ ವಿಭಾಗದ ಹಾವೇರಿ ನಿಲ್ದಾಣದಲ್ಲಿ ಟವರ್ ವೇಗನ್ ಶೆಡ್ ಮತ್ತು ಸೈಡಿಂಗ್ ನಿರ್ಮಾಣ–1 ಸಂ., ಓಹೆಚ್‌ಇ/ಪಿಎಸ್ ಡಿಪೋ–1 ಸಂ., ಸಿಬ್ಬಂದಿ ವಸತಿಗೃಹ ಟೈಪ್–II–07 ಸಂ. ಮತ್ತು ಟೈಪ್–III–04 ಸಂ., ಮಣ್ಣಿನ ಕೆಲಸ, ನೀರಿನ ಸರಬರಾಜು ಮತ್ತು ಇತರ ಪೂರಕ ವ್ಯವಸ್ಥೆಗಳೊಂದಿಗೆ. ಮುಕ್ತಾಯದ ಅವಧಿ ಹನ್ನೆರಡು ತಿಂಗಳುಗಳು.	ರೂ. 8,37,59,803/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–08–2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ವಿಭಾಗೀಯ ಇಂಜಿನಿಯರ್/ರೈಲ್ವೆ ವಿದ್ಯುದೀಕರಣ, ಬೆಂಗಳೂರು
PUB/200/AAD/PRB/SWR/2022-23
S.W.Railways SWRRLY SWRRLY

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮಂಡ್ಯ ಸಿಟಿ, ಸುಭಾಷ್ ನಗರ ಬಡಾವಣೆ, 2ನೇ ಕ್ರಾಸ್, ಮನೆ ನಂ. 2061/2 ರಲ್ಲಿ ವಾಸವಾಗಿರುವ ಲೇಟ್ ಎಂ.ಡಿ.ಸಿದ್ದರಾಮಯ್ಯ ನವರ ಮಗ, ಶ್ರೀ ಎಂ.ಎಸ್.ನಾಗಚಂದ್ರ ರವರಿಂದ ಷೆಡ್ಯೂಲ್ ಆಸ್ತಿಗಳ ಪೈಕಿ ಸರ್ವೆ ನಂ.118/1ಎಲ್5, 118/1ಎಲ್2 ಮತ್ತು 118/1ಎಲ್3 ನ್ನು ಮತ್ತು ಮಂಡ್ಯ ಸಿಟಿ, ಬನ್ನೂರು ರಸ್ತೆ, ಕೊತ್ತತ್ತಿ ಫಾರಂ ಹೌಸ್‌ನಲ್ಲಿ ವಾಸವಾಗಿರುವ ಕೆ.ವಿ.ಶೇಷಾದ್ರಿಯವರ ಪತ್ನಿ ಶ್ರೀಮತಿ ಎಂ.ಪಿ. ನಾಗಮಣಿರವರಿಂದ ಷೆಡ್ಯೂಲ್ ಆಸ್ತಿಗಳ ಪೈಕಿ ಸರ್ವೆ ನಂ.118/1ಎಲ್4 ಆಸ್ತಿ ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರು ಯಾವುದಾದರು ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಒಂದು ವಾರದ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದ ಸರ್ವೆ ನಂ.118/1ಎಲ್5 ರಲ್ಲಿ 4.08 ಗುಂಟೆ, 118/1ಎಲ್2 ರಲ್ಲಿ 5 ಗುಂಟೆ, 118/1ಎಲ್3 ರಲ್ಲಿ 5 ಗುಂಟೆ ಮತ್ತು 118/1ಎಲ್4 ರಲ್ಲಿ 6 ಗುಂಟೆ ಒಟ್ಟು 20.08 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಖಾಸಗಿ ಸ್ವತ್ತು, ದಕ್ಷಿಣಕ್ಕೆ: ಖಾಸಗಿ ಸ್ವತ್ತು.

Sd/- O.Shama Bhat, B.A., LL.B,
Reg. No. KAR 417/77
O.Sathisha, B.Sc, LL.B,
Reg. No. KAR 721/89
Advocates
#20/C, 2nd Floor, Near Airlines Hotel, Jayalakshmi Vilas Road, Chamaraja Puram, Mysuru-05.
Phone: 0821-4262475
Email: shamsathisha@gmail.com
Date: 05-07-2022



ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ–571 111

ಚಾಮರಾಜನಗರ ಜಿಲ್ಲೆ
Email: apmcgundlupet1997@gmail.com Ph:08229-222215
ಕ್ರ.ಸಂ:ಕೃ.ಉ.ಮಾ.ಸ(ಗುಂಪೇ):183: 2022–23 ದಿನಾಂಕ: 22.06.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ತೆರಕಣಾಂಬಿ ಉಪ ಮಾರುಕಟ್ಟೆ ಹಾಗೂ ತೆರಕಣಾಂಬಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣಗಳಲ್ಲಿ 2022–2023 ನೇ ಸಾಲಿಗೆ ಕಾರ್ಯಾದೇಶ ನೀಡಿದ ತಿಂಗಳಿನಿಂದ 2023 ನೇ ಮೇ ಮಾಹೆಯವರೆಗೆ ಪ್ರತಿ ದಿನ 8 ಗಂಟೆಗಳ ಪಾಳಿಗಳಲ್ಲಿ ದಿನದ 24 ಗಂಟೆಗಳ ಕಾಲ ಸಮಿತಿಯ ಚರ ಮತ್ತು ಸ್ಥಿರ ಆಸ್ತಿಯನ್ನು ಸಂರಕ್ಷಣೆ ಮಾಡಲು, ಕಛೇರಿಯ ಕಾರ್ಯನಿರ್ವಹಿಸಲು 07 ಸಂಖ್ಯೆ ವಿವಿಧ ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು ವಾರ್ಷಿಕ ಅಂದಾಜು **ಮೊತ್ತ ರೂ.15,75,000–00** ಗಳು ಹಾಗೂ ಇ.ಎಂ.ಡಿ. ಮೊತ್ತ ರೂ.1,00,000/–(ರೂ.ಒಂದು ಲಕ್ಷ ಮಾತ್ರ)ಗಳಲ್ಲಿ ಹಾಗೂ ಗುಂಡ್ಲುಪೇಟೆ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ತೆರಕಣಾಂಬಿ ಉಪ ಮಾರುಕಟ್ಟೆ ಪ್ರಾಂಗಣ ಹಾಗೂ ತೆರಕಣಾಂಬಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣಗಳಲ್ಲಿ ಸ್ವಚ್ಛತಾ ಕೆಲಸ ನಿರ್ವಹಣೆಗೆ ಸ್ವಚ್ಛತಾ ಸೇವೆ ಒದಗಿಸಲು ವಾರ್ಷಿಕ ಅಂದಾಜು **ಮೊತ್ತ ರೂ.7,32,020–00** ಗಳು ಹಾಗೂ ಇ.ಎಂ.ಡಿ. ಮೊತ್ತ ರೂ.50,000/–(ರೂ.ಐವತ್ತು ಸಾವಿರ ಮಾತ್ರ)ಗಳಲ್ಲಿ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳಿಗೆ ಕಡಿಮೆ ಇರದಂತೆ ಕಾರ್ಮಿಕ ಇಲಾಖೆ/ ಕಸುಬು ನೋಂದಣಾ ಇಲಾಖೆಯಿಂದ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಷರತ್ತುಗಳನ್ವಯ ದ್ವಿಪ್ರತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in/eportal/index. seam ಮೂಲಕ ಮಾತ್ರ, ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ವೆಬ್‌ಸೈಟ್‌ನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ **ದಿ: 01.08.2022 ಸಾಯಂಕಾಲ** 4.00 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ **ದಿನಾಂಕ: (ಸಾಧ್ಯವಾದಲ್ಲಿ) 03.08.2022 ಸಂಜೆ 4.30 ಗಂಟೆಗೆ,** ಹೆಚ್ಚಿನ ಮಾಹಿತಿಯನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in/eportal/index.seam** ನಲ್ಲಿ ಅಥವಾ ಕೆಲಸದ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆದುಕೊಳ್ಳುವುದು.

ಸಹಿ/– (ಎಸ್.ಶ್ರೀಧರ)
ಕಾರ್ಯದರ್ಶಿ,
ಕೃ.ಉ.ಮಾ.ಸ., ಗುಂಡ್ಲುಪೇಟೆ

ಸಹಿ/– (ರವಿಶಂಕರ್.ಸಿ.ಜಿ.)
ಆಡಳಿತಾಧಿಕಾರಿಗಳು,
ಕೃ.ಉ.ಮಾ.ಸ., ಗುಂಡ್ಲುಪೇಟೆ